ಹಿತ್ತಲಗಿಡ

ಚಾತುರ್ಮಾಸಿಕ

Vol. 2 No.1-2, January - June, 1997
(ಪ್ಯೆರು ೨, ಕೊಯಿಲು ೧ - ೨, ೧೯೯೭)

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಅನುಶೋಧನೆಗಳು, ಸ್ಥಳೀಯ ಸಂಪನ್ಮೂಲಗಳು ಮತ್ತು ಜೀವ ವೈವಿಧ್ಯತೆ ಇವುಗಳ ಮೂಲಕ "ಸುಸ್ಥಿರ ಕೃಷಿ" ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ.

ಬಿಡಿ ಪತ್ರಿಕೆ : ರೂ. 20/-



ಗೋವಿನ ಕಥೆ

ಹಿತ್ತಲಗಿಡ

Vol. 2, No.1&2, January - June, 1997

(ಪೈರು ೩, ಕೊಯಿಲು ೧ - ೨, ೧೯೯೭)

'ಹಿತ್ತಲಗಿಡ' ರೈತ, ವಿಜ್ಞಾನಿ, ವಿದ್ಯಾರ್ಥಿ, ಸ್ವಯಂ ಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸಾಮೂಹಿಕ ಪ್ರಯತ್ನ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಅನುಶೋಧನೆಗಳು, ಸ್ಥಳೀಯ ಸಂಪನ್ಮೂಲಗಳು ಮತ್ತು ಜೀವ ವಿವಿಧತೆ ಇವುಗಳ ಮೂಲಕ "ಸುಸ್ಥಿರ ಕೃಷಿ" ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ.

ಈ ಸಂಚಿಕೆಯಲ್ಲಿ

ಕಲೆ : ಶ್ರೀ ಹಡಪದ್, ಕೆನ್ ಕಲಾಶಾಲೆ, ಬೆಂಗಳೂರು

ಸಂಪಾದಕೀಯ

ಹಿತ್ತಲಗಿಡ ಮೂರನೆಯ ವರ್ಷಕ್ಕೆ ಕಾಲಿಡುತ್ತಿದೆ. ರೈತರನ್ನು ಗ್ರಾಮೀಣ ಜನತೆಯನ್ನು "ಕೇಳುವ", ಅವರ ಅನುಭವ ಜ್ಞಾನ, ಕುಶಲತೆ, ಅನ್ವೇಷಣಾ ಪ್ರವೃತ್ತಿಗಳನ್ನು ಅರಿತು, ದಾಖಲಿಸಿ, ಆ ಮೂಲಕ ಹಂಚಿಕೊಳ್ಳುವ ಈ ಪತ್ರಿಕೆಯ ವಿಶೇಷತೆಯನ್ನು ಅರ್ಥಮಾಡಿಕೊಂಡಿರುವ ಎಲ್ಲರಿಗೂ, ಇದರ ಮುಂದಿರುವ ಸವಾಲುಗಳೂ, ತೊಡಕು, ಇತಿ ಮಿತಿಗಳೂ ಅರಿವಾಗುತ್ತದೆ ಎಂದು ಆಶಿಸುತ್ತೇವೆ. ಈ ಎರಡು ವರ್ಷಗಳಲ್ಲಿ, ಈ ಸಂಚಿಕೆಯು ಸೇರಿ ಹಿತ್ತಲಗಿಡದಲ್ಲಿ ದಾಖಲಾಗಿರುವ ದೇಶೀಯ ಜ್ಞಾನ, ಜೀವ ವಿವಿಧತೆ, ರೈತ ಅನುಶೋಧನೆಗಳು, ಸಂಸ್ಥೆಗಳು, ಇತ್ಯಾದಿಗಳ ಪಟ್ಟಿ ಈ ಮುಂದೆ ನೀಡಲಾಗಿದೆ.

೧.	ಕ್ರಿಮಿ ಕೀಟ, ಪೀಡೆಗಳಿಂದ ಸಸ್ಯ ಸಂರಕ್ಷಣಾ ಕ್ರಮಗಳು	67
೨.	ದೇಶೀಯ ಬೀಜ ಉಪಚಾರಗಳು	25
೩.	ಧಾನ್ಯ ಸಂಗ್ರಹಣೆ ಮತ್ತು ಸಂರಕ್ಷಣೆ ಕ್ರಮಗಳು.	17
೪.	ಪಶು ಚಿಕಿತ್ಸೆ ಮತ್ತು ಪಾಲನೆ ಕ್ರಮಗಳು	68
೫.	ರೈತ ಮೂಲದ ಕೃಷಿ ಉಪಕರಣಗಳ ಅನುಶೋಧನೆಗಳು	14
೬.	ಕೋತಿ, ಇಲಿ ಇತ್ಯಾದಿ ಪ್ರಾಣಿಗಳ ಹತೋಟಿ ಕ್ರಮಗಳು	11
೭.	ಜೀವಿ ವೈವಿಧ್ಯತೆ ಬಗ್ಗೆ ವಿವರಗಳು	
	ಅ. ನಾಟಿ ತಳಿ ಬೀಜಗಳು	75
	ಆ. ನಾಟಿ ಹಣ್ಣು, ತರಕಾರಿ ಮತ್ತು ಬೆಳೆಗಳು	25
೮.	ಮಳೆ ಆಶ್ರಯದ ಸಾವಯುವ ಬೇಸಾಯ ಪದ್ಧತಿಗಳು	8
೯.	ಬುಡಕಟ್ಟು ಮತ್ತು ನಾಟಿ ಜನಾಂಗಗಳ ಕೃಷಿ ಪದ್ಧತಿಗಳು	4
೧೦.	ದೇಶೀಯ ಹವಾಮಾನ ಜ್ಞಾನದ ಬಗ್ಗೆ ಲೇಖನಗಳು	38
೧೧.	ದೇಶೀಯ 'ಸಂಸ್ಥೆ'ಗಳು ರೀತಿ, ರಿವಾಜು, ಆಚರಣೆಗಳು	15
೧೨.	ದೇಶೀಯ ಬೇಸಾಯ ಕ್ರಮಗಳು	18
೧೩.	ಸಾವಯುವ ಕೃಷಿಕರ ಪರಿಚಯ	4
೧೪.	ನಾಟೀ ಔಷಧ ಕ್ರಮಗಳು (ಮನುಷ್ಯರ) ಮತ್ತು ಸಸ್ಯಗಳು	26
೧೫.	ನಾಟೀ ಹಣ್ಣು, ಆಹಾರ ವಿಧಗಳು	7
೧೬.	ದಿನ ನಿತ್ಯದ ಬದುಕಿನಲ್ಲಿನ ದೇಶೀಯ ಜಾಣ್ಮೆ	6

ಈ ದಾಖಲಾತಿ ಹಿತ್ತಲಗಿಡ ಬಳಗದಲ್ಲಿ ಸಕ್ರಿಯವಾಗಿ ಕೆಲಸ ಮಾಡಿದ ಎಲ್ಲರಿಗೂ ತೃಪ್ತಿ, ಹೆಮ್ಮೆ ತಂದಿದೆ. ಇದಕ್ಕೆ ಒಂದೆಡೆ ಪ್ರೊ. ಅನಿಲ್ ಗುಪ್ತಾರವರ ನಿರಂತರ ನೆರವು, ಮಾರ್ಗ ದರ್ಶನಗಳು ಶಕ್ತಿ ಕೊಟ್ಟಿದ್ದರೆ, ಇನ್ನೊಂದೆಡೆಯಿಂದ ಕರ್ನಾಟಕದ, ಬೆಳಗಾಂನಿಂದ ಕೋಲಾರದವರೆಗಿನ ತೆರೆದ ಮನಸ್ಸಿನ, ಅನ್ವೇಷಣಾ ಪ್ರವೃತ್ತಿ, ಹೊಸ ವಿಚಾರಗಳಿಗೆ ಸ್ಪಂದಿಸುವ ಪ್ರಗತಿಪರ ರೈತಸಮೂಹದ ಮೆಚ್ಚುಗೆ, ಸಹಕಾರಗಳೂ ಅಷ್ಟೇ ಕಾರಣವಾಗಿದೆ.

ಈ ದಾಖಲಾತಿ ಮೇಲೆ ನಮ್ಮ ವ್ಯವಸ್ಥಿತ ವಿಜ್ಞಾನಿಗಳ, ಕೃಷಿ ತಂತ್ರಜ್ಞರ ಕೆಂಗಣ್ಣು ಬೀಳುವಂತೆಮಾಡಿದ್ದರೆ, ಕೆಲ ಪ್ರಾಮಾಣಿಕ ವಿಜ್ಞಾನಿಗಳು ಸ್ವಯಂಸೇವಾ ಸಂಸ್ಥೆಗಳು ಇದರ ಮೂಲಕ ಹೊಸ ಅಭಿವೃದ್ಧಿಮಾದರಿ ಒಂದರ ಹುಡುಕಾಟಕ್ಕೂ ಪ್ರಯತ್ನಿಸುತ್ತಿರುವರು. ಇನ್ನು ಹಲವು ಸಂಸ್ಥೆಗಳು, ಕೆಲ ವಿಜ್ಞಾನಿಗಳೂ ಪ್ರಾಜೆಕ್ಟ್‌ಗಳಿಗಾಗಿ, ಸಂಶೋಧನೆ, ಸಮ್ಮೇಳನ, ವಿಚಾರ ಸಂಕಿರಣಗಳ ಸೀಮಿತ ಉದ್ದೇಶಗಳಿಗಾಗಿ ನಮ್ಮ ಈ ದಾಖಲಾತಿ ಪ್ರಯತ್ನದತ್ತ ನೋಡುತ್ತಿರುವರು. ಅಂದಮೇಲೆ ಹಿತ್ತಲಗಿಡದ ಈ ದಾಖಲಾತಿ ಪ್ರಯತ್ನದ ಉದ್ದೇಶವಾದರೂ ಏನಾಗಬೇಕಾಗಿದೆ?

ಕಳೆದ ಸಂಚಿಕೆಯಲ್ಲಿ ಶ್ರೀಮತಿ ವನಜರಾಂ ಪ್ರಸಾದ್‌ರವರು ತಮಿಳ್ನಾಡು ಕರ್ನಾಟಕ ಗಡಿಯ ತಳ್ಳಿಯಲ್ಲಿ ಸಂರಕ್ಷಿಸಿಕೊಂಡು ಬಂದಿರುವ ನಾಟಿ ಬತ್ತದ ತಳಿಗಳ ಬಗ್ಗೆ ಬರೆಯಲಾಗಿತ್ತು. ಈ ಮಾಹಿತಿ ಆಧಾರದ ಮೇಲೆ ರಾಯಚೂರಿನ ಚೆನ್ನಬಸವರೆಡ್ಡಿಯವರು ಕೆಲ ತಳಿಗಳನ್ನು ಪಡೆದು, ಪರೀಕ್ಷಿಸಿ ತಮ್ಮ ಅವುಭವವನ್ನು ಹಿತ್ತಲಗಿಡದೊಡನೆ ಹಂಚಿಕೊಂಡಿರುವರು. ಹಾಗೇ, ಹಿಂದಿನ ಸಂಚಿಕೆಯಲ್ಲಿ, ತೆಂಗಿನ ಇಳುವರಿ ಹೆಚ್ಚಿಸಲು, ಶಿವಮೊಗ್ಗದ ತರುಣ ರೈತ ಶ್ರೀದತ್ತ ಮುಂಡುಗದ ಸಸ್ಯವನ್ನು ಉಪಯೋಗಿಸುತ್ತಿರುವ ವಿಚಾರದ ಬಗ್ಗೆ ಆಸಕ್ತಿತಳೆದ ಗುಜರಾತಿನ ರೈತ ಯಶ್‌ದೇವ್ ಪತ್ರ ಬರೆದು ಹೆಚ್ಚಿನ ವಿವರಣೆ ಕೇಳಿರುವರು. ***ಈ ರೀತಿ ಜ್ಞಾನ, ಅನುಭವಗಳು ನೇರವಾಗಿ, ಗುಜರಾತು ಮತ್ತು ಶಿವಮೊಗ್ಗದ ರೈತರ ನಡುವೆ, ಹಾಗೇ ತಳ್ಳಿಯಿಂದ ರಾಯಚೂರಿಗೆ ಹಿತ್ತಲಗಿಡದ ಮೂಲಕ ಪಸರಿಸುವಂತಾದಲ್ಲಿ ವಿನಿಮಯಗೊಳ್ಳುವಂತಾದಲ್ಲಿ, ನಮ್ಮ ಉದ್ದೇಶ ಸಾರ್ಥಕವಾಯ್ತು ಎನಿಸುತ್ತದೆ. ಈ ರೀತಿಯಾಗಿ ವಿಕೇಂದ್ರೀಕೃತ, ದೇಶೀಯ ಕ್ರಮದಲ್ಲಿ ಜ್ಞಾನದ ವಿನಿಮಯ, ಕಲಿಕೆ, ಸಂಶೋಧನೆಗಳನ್ನು ಏರ್ಪಡಿಸುವ ಮೂಲಕ ಹೊಸತೊಂದು ಅಭಿವೃದ್ಧಿ ಮಾದರಿಯನ್ನು, ಪ್ರಗತಿಯ ದಾರಿಯನ್ನು ಕಂಡುಕೊಳ್ಳುವುದೇ ಈ ಹಿತ್ತಲಗಿಡದ ಅಂತಿಮ ಗುರಿಯಾಗಬೇಕಾಗಿದೆ*** ಎಂಬುದನ್ನು ಈಗ ಮತ್ತೊಮ್ಮೆ ಸ್ಪಷ್ಟಪಡಿಸ ಬೇಕಾಗಿದೆ. ಈ ನಮ್ಮ ಪ್ರಯತ್ನಕ್ಕೆ ರಾಜ್ಯದ ರೈತಸಂಘದ, ಸಂಘಟಿತ ರೈತಸಮೂಹವೂ ಒಲವು ತೋರಿಸುತ್ತಿರುವುದು ನಮಗೆ ಮತ್ತಷ್ಟು ಶಕ್ತಿ ನೀಡುತ್ತಲಿದೆ.

ನಮ್ಮ ವಿಜ್ಞಾನಿಗಳು, ಕೃಷಿ ಪಂಡಿತರು, ರೈತರಿಗೆ "ಹೇಳುವವರು" ಎನ್ನುವ ಬಿಗುಮಾನ ಬಿಟ್ಟು, ಅವರ ಅನುಭವ, ಜ್ಞಾನ, ತಾಂತ್ರಿಕ ಕುಶಲತೆಗಳನ್ನು ಅರಿತು, ಅಭ್ಯಸಿಸಿ, ಮತ್ತಷ್ಟು ವ್ಯವಸ್ಥಿತವೂ, ನಿಖರವೂ ಗಳಿಸುವತ್ತ ಮನಸ್ಸು ಮಾಡಲು ಎಲ್.ಎನ್. ಗೋಪಾಲಕೃಷ್ಣರ "ಬರಿಮೈ ಚಕ್ರವರ್ತಿ" ಲೇಖನ ಪ್ರೇರೇಪಿಸುವುದೆಂದು ಹಾರೈಸುತ್ತೇವೆ.

ಇನ್ನು ನಮ್ಮ ಕರ್ನಾಟಕದ ಇಬ್ಬರು ಸಾವಯವ ಕೃಷಿ ಋಷಿಗಳಾದ ಪುರುಷೋತ್ತಮ ರಾಯರು, ನಾರಾಯಣ ರೆಡ್ಡಿಯವರ ಬಗೆಗಿನ ತುಲನಾತ್ಮಕ ಲೇಖನವಿದೆ. ಇವರಿಬ್ಬರ ಪ್ರಯೋಗದ ಯಶಸ್ಸು, ಇತಿ ಮಿತಿಗಳನ್ನು ಚರ್ಚಿಸಲಾಗಿದೆ. ಸುಸ್ಥಿರ ಕೃಷಿ ಅಭಿವೃದ್ಧಿಗೆ ಇವರ ಕೃಷಿ ಪದ್ಧತಿಯನ್ನು ನಕಲು ಮಾಡಬೇಕೇ ಅಥವಾ ರಾಯರು ಅಥವಾ ರೆಡ್ಡಿಯವರಂತಹ ನೂರಾರು ರೈತರು ಎಲ್ಲೆಡೆ ಹುಟ್ಟಿಕೊಳ್ಳುವಂತಹ ವಾತಾವರಣ ನಿರ್ಮಿಸುವುದು ಸೂಕ್ತವೆ ಎಂಬ ವಿಚಾರವಾಗಿ ಚರ್ಚೆ ಆಗಬೇಕಾಗಿದೆ. ಹಾಗೇ, ಸುಸ್ಥಿರಕೃಷಿ ಅಭಿವೃದ್ಧಿ ಎಂಬುದು ರೈತ ವ್ಯಕ್ತಿ ಕೇಂದ್ರೀಕೃತವಾಗಬೇಕೆ ಅಥವಾ ಅದಕ್ಕಿಂತ ಸಮಗ್ರವಾದ ಗ್ರಾಮ ಜಲಾನಯನ ಪರಿಸರ ಘಟಕಗಳತ್ತ ನಾವು ಗಮನ ಹರಿಸಬೇಕೆ ಎಂಬ ಪ್ರಶ್ನೆಗಳನ್ನೂ ಈಗ ಎತ್ತಿಕೊಳ್ಳ ಬೇಕಾಗಿದೆ.

ರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿ ಸಾಧನೆಗೆ ಎತ್ತಿಕೊಂಡಿರುವ ಕುದುರೆಮುಖ ಗಣಿಗಾರಿಕೆಯಂತಹ ಯೋಜನೆಗಳಿಂದ ಹೇಗೆ ನೆಲ್ಲಿಬೀಡಿನಂತಹ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ ಎಂಬ ಲೇಖನ ಕೊಡಲಾಗಿದೆ. ನಾವಿಂದು ಅಭಿವೃದ್ಧಿಯ ಅರ್ಥವನ್ನು ಪುನರ್ ವ್ಯಾಖ್ಯಾನಿಸುತ್ತಾ ***ಅಭಿವೃದ್ಧಿ ಯಾರಿಗಾಗಿ? ಇದರ ನಿಜವಾದ ಲಾಭವೇನು? ಇದರ ವೆಚ್ಚದ ವಿಧಗಳೇನು?*** ಎಂಬೆಲ್ಲ ಪ್ರಶ್ನೆಗಳಿಗೆ ಸೂಕ್ತ ಉತ್ತರ ಹುಡುಕಬೇಕಾಗಿದೆ. ಸ್ಥಳೀಯರಿಗೆ ಲಾಭವಾಗುವುದಿರಲಿ, ಅದರಿಂದ ತೊಂದರೆಯೇ ಅಧಿಕವಾಗಿದ್ದಲ್ಲಿ, ಇಂತಹಾ ಅಭಿವೃದ್ಧಿಗೆ ಸಮರ್ಥನೆ ಇದೆಯೆ? ಮಿಗಿಲಾಗಿ ಅರಣ್ಯನಾಶ, ಸ್ಥಳೀಯರಿಗೆ ಆಗುತ್ತಿರುವ ತೊಂದರೆ, ಪರಿಸರದ ಮೇಲಿನ ಪರಿಣಾಮ ಇವೆಲ್ಲವುಗಳನ್ನು "ವೆಚ್ಚ" ಗಳೆಂದು ಪರಿಗಣಿಸಿದಲ್ಲಿ ಇಂತಹಾ ಯೋಜನೆಗಳಿಗೆ ಆರ್ಥಿಕ ಲಾಭದಾಯಕತೆ ದೃಷ್ಟಿಯಿಂದ ಮಂಜೂರಾತಿ ದೊರಕುವ ಸಾಧ್ಯತೆ ಇದೆಯೆ? ಇವೆಲ್ಲಕ್ಕಿಂತ ಮಿಗಿಲಾಗಿ, ಒಂದು ವಿಧದ, ಅದೂ ಪುನರುತ್ಪತ್ತಿಯಾಗದ ಕಬ್ಬಿಣದ ಅದಿರಿನಂತಹ ಸಂಪನ್ಮೂಲದ ಆಸೆಗಾಗಿ, ಅದನ್ನೂ ಕಚ್ಚಾ ರೂಪದಲ್ಲಿ ರಫ್ತು ಮಾಡುವ ಏಕೈಕ ಉದ್ದೇಶಕ್ಕಾಗಿ, ಪಶ್ಚಿಮಘಟ್ಟದ ನಿತ್ಯ ಹರಿದ್ವರ್ಣ ಕಾಡುಗಳಲ್ಲಿರುವ, ಸತತ ಪುನರ್‌ಉತ್ಪತ್ತಿ ಆಗಬಹುದಾಗಿರುವ ಆ ಜೀವವೈವಿಧ್ಯತೆಯನ್ನು, ಅರಣ್ಯ ಸಂಪನ್ಮೂಲವನ್ನು ಒಟ್ಟಾರೆ ಪ್ರಾಣಿಕುಲದ ಉಳಿಕೆಗೇ ಅಗತ್ಯವಾದ ಎಲ್ಲಾ ಪ್ರಾಕೃತಿಕ ಸಂಪನ್ಮೂಲಗಳನ್ನೂ, ನಾಶಮಾಡುವುದು ನಮ್ಮ ಮೂರ್ಖತನದ ಪರಮಾವಧಿಯಲ್ಲವೆ? ಇದು, "ಚಿನ್ನದ ಮೊಟ್ಟೆ ಆಸೆಗಾಗಿ ಅದನ್ನು ನೀಡುವ ಕೋಳಿಯನ್ನೇ ಕೊಲ್ಲುವ" ಕಥೆಯಂತಲ್ಲವೆ?

ಈ ಕುದುರೆ ಮುಖದ ಯೋಜನೆಯಿಂದಾಗುತ್ತಿರುವ ಅನಾಹುತಗಳನ್ನು ಸರಿಮಾಡುವ ತತ್‌ಕ್ಷಣದ ಉಪಾಯವೆಂದರೆ ***ತನ್ನ ಗಣಿಗಾರಿಕೆಯನ್ನು ಆದಷ್ಟು ಮಿತಿಗೊಳಿಸುತ್ತಾ ಇಡೀ ಪಶ್ಚಿಮ ಘಟ್ಟದ ನಿತ್ಯ ಹರಿದ್ವರ್ಣ ಕಾಡುಗಳ ಜೈವಿಕ ಸಂಪನ್ಮೂಲ, ಮರ, ಗಿಡ, ಪ್ರಾಣಿ, ಪಕ್ಷಿಗಳಲ್ಲಿ ಜೀವ ವಿವಿಧತೆಯನ್ನು ಪುನರ್ ಚೇತನಗೊಳಿಸುವುದಕ್ಕೆ ಪ್ರಾಮಾಣಿಕವಾಗಿ ಈ ಕಂಪನಿ ಪ್ರಯತ್ನಿಸುವುದಾಗಿದೆ.***

ಅಂತಿಮವಾಗಿ, ರಿಯೋ ಜಾಗತಿಕ "ಪರಿಸರ ಮತ್ತು ಅಭಿವೃದ್ಧಿ" ಸಮ್ಮೇಳನ ನಡೆದು ಐದು ವರ್ಷಗಳಾಗಿದ್ದರೂ, ಸಾಧನೆ ಮಾತ್ರ ಶೂನ್ಯ. ಇದು ದೇಶದ ಚುಕ್ಕಾಣಿ ಹಿಡಿದಿರುವ ರಾಜಕೀಯ ನಾಯಕರುಗಳಿಗೆ ಪರಿಸರಕ್ಕೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರ ಹುಡುಕಲು ಇರುವ ಇತಿಮಿತಿಗಳನ್ನೂ ತೋರಿಸುತ್ತದೆ. (ಪರಿಸರ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಗೆ, ಅದರ ಸುಸ್ಥಿರ ಬಳಕೆಗೆ ದೀರ್ಘಾವಧಿಯ ಪರಿಹಾರಗಳೂ, ದಿಟ್ಟ ನೀತಿ ನಿಲುವುಗಳೂ, ಅತ್ಯಗತ್ಯವಾಗಿದ್ದು, ಯಾವುದೇ ರಾಷ್ಟ್ರದ ರಾಜಕೀಯ ಪಕ್ಷಗಳ ನಾಯಕರುಗಳು ರಾಜಕೀಯ ಒತ್ತಡ, ಚುನಾವಣೆ, ಓಟಿನ ಕಟ್ಟುಪಾಡುಗಳಿಗೆ ಮಣಿಯುವದರಿಂದ, ಜನಪ್ರಿಯತೆಯ ವ್ಯಾಮೋಹಕ್ಕೆ ಒಳಗಾಗುವುದರಿಂದ ಇಂತಹಾ ದಿಟ್ಟ ನಿಲುವುಗಳನ್ನು ತೆಗೆದುಕೊಳ್ಳಲಾರರು. ಅಂದಮೇಲೆ ಪ್ರಗತಿಪರ ಜನ ಆಂದೋಳನಗಳಿಂದ ಮಾತ್ರ ಇದು ಸಾಧ್ಯವಾಗಬಹುದಾಗಿದೆ. ಜಾಗತಿಕ ಮಟ್ಟದಲ್ಲಿ ರೈತ ಸಮುದಾಯದಿಂದ ಇಂತಹಾ ಆಂದೋಳನ ಏಳುತ್ತಿದ್ದು, ಪ್ರೊ. ನಂಜುಂಡ ಸ್ವಾಮಿಯವರ ನೇತೃತ್ವದ ನಮ್ಮ ರಾಜ್ಯ ರೈತ ಸಂಘ ಈ ನಿಟ್ಟಿನಲ್ಲಿ ಮುಂಚೂಣಿಯಲ್ಲಿರುವುದು ಹೆಮ್ಮೆಯ ವಿಚಾರವಾಗಿದೆ. ಅಂತರರಾಷ್ಟ್ರೀಯ ರೈತ ಸಂಘಟನೆ ***"ವಯಾ ಕ್ಯಾಂಪಸಿನಾ"*** ಪರವಾಗಿ ಅವರು ಏಪ್ರಿಲ್ 16 ರಂದು ವಿಶ್ವಸಂಸ್ಥೆಯ ***"ಸುಸ್ಥಿರ ಅಭಿವೃದ್ಧಿ ಆಯೋಗ"***ದ ಎದುರಿಗೆ ನ್ಯೂಯೋರ್ಕ್‌ನಲ್ಲಿ ಮಂಡಿಸಿದ ಭಾಷಣದ ವರದಿಯನ್ನು ಮುಂದೆ ಕೊಡಲಾಗಿದೆ. ತೃತೀಯ ಜಗತ್ತಿನ ಎಲ್ಲಾ ರೈತ ಸಮುದಾಯ, ಬುಡಕಟ್ಟು, ನಾಟೀ ಜನಾಂಗಗಳು ಕಷ್ಟಪಟ್ಟು ಕಾಪಾಡಿಕೊಂಡು ಬಂದಿರುವ ಜೀವವಿವಿಧತೆ, ದೇಶೀಯ ಜ್ಞಾನ ವ್ಯವಸ್ಥೆಯನ್ನು ಉಳಿಸಿ, ಬೆಳೆಸುವ ಪರವಾದ ಕಾಳಜಿ ಪ್ರೊ.ನಂಜುಂಡಸ್ವಾಮಿಯವರ ಈ ಹೇಳಿಕೆಯಲ್ಲಿ ಅಡಕವಾಗಿರುವುದರಿಂದ, ಅವರಿಗೆ ದೊರೆತ ಈ ಅವಕಾಶ ಈ ಎಲ್ಲಾ ನಾಟೀ ಸಮುದಾಯಕ್ಕೆ ಸಂದ ಗೌರವವಾಗಿರುತ್ತದೆ.

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ

ರೈತ ಸಮುದಾಯದೊಡನೆ ಸಂವಾದ ಗೋಷ್ಠಿ

ಸುಸ್ಥಿರ ಅಭಿವೃದ್ಧಿ ಆಯೋಗ (Commission on Sustainable Development)

ವಿಶ್ವಸಂಸ್ಥೆ, ನ್ಯೂಯಾರ್ಕ್, 16, April 1997

ಜಗತ್ತಿನಾದ್ಯಂತ 40 ರಾಷ್ಟ್ರಗಳ ರೈತಸಮುದಾಯವನ್ನು ಪ್ರತಿನಿಧಿಸುವ "ಅಂತರ್ ರಾಷ್ಟ್ರೀಯ ರೈತ ಸಂಘಟನೆ" (Via Campesina) ಯಲ್ಲಿ ಕರ್ನಾಟಕ ರಾಜ್ಯ ರೈತಸಂಘ ಪ್ರಮುಖ ಅಂಗ ಸಂಸ್ಥೆಯಾಗಿದೆ. ಈ ಸಂಘಟನೆಯ ನಿಯೋಗದ ಪರವಾಗಿ ಪ್ರೊ. ನಂಜುಂಡಸ್ವಾಮಿ ನ್ಯೂಯಾರ್ಕ್‌ನಲ್ಲಿ *ಸುಸ್ಥಿರ ಅಭಿವೃದ್ಧಿ ಆಯೋಗದ* ಎದುರು ಮಂಡಿಸಿರುವ ಭಾಷಣದ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.

ಕಳೆದ ಮೂರು ಶತಮಾನಗಳ ಅವಧಿಯಲ್ಲಿ ನಮ್ಮ ನಾಗರೀಕತೆ ಕೃಷಿ ಮತ್ತು ಆಹಾರ ಕ್ಷೇತ್ರಗಳಲ್ಲಿ ಸಂಪಾದಿಸಲ್ಪಟ್ಟಿರುವ ಬಹಳಷ್ಟು ಜ್ಞಾನ ಮತ್ತು ಸಂಪನ್ಮೂಲಗಳ ನಾಶವನ್ನು ಕಂಡಿರುತ್ತದೆ. ಅರ್ಧಕ್ಕಿಂತ ಅಧಿಕ ಜೈವಿಕ ಸಂಪನ್ಮೂಲಗಳು ಮತ್ತು ಕೃಷಿ ವಲಯದ ಜೀವ ವೈವಿಧ್ಯತೆಗಳು ನಮ್ಮ ಜೀವಿತದ ಅವಧಿಯಲ್ಲೇ ಕಣ್ಮರೆಯಾಗುವ ಅಪಾಯದಲ್ಲಿವೆ.

ಈ ಪ್ರಕ್ರಿಯೆ ರಿಯೋ *"ಭೂ ಸಮ್ಮೇಳನ"* (Earth Summit) ದ ನಂತರವೂ ಮುಂದುವರೆಯುತ್ತಿರುವುದು ವಿಶಾದನೀಯ. ಈಗ ನಮ್ಮ ಮುಂದಿರುವ ಸವಾಲು ಎಂದರೆ, ಜ್ಞಾನ ಮತ್ತು ಸಂಪನ್ಮೂಲಗಳ ಈ ವಿನಾಶವನ್ನು ತಪ್ಪಿಸುವುದು. ಕಳೆದ ಐದು ವರ್ಷಗಳಲ್ಲಿ ನಾವು ಪಡೆದ ಅನುಭವಗಳೆಂದರೆ *"ರೈತರು ಮತ್ತು ನಾಟೀ ಸಮುದಾಯಗಳು ತಲೆತಲಾಂತರದಿಂದ ಜೀವವಿವಿಧತೆಯನ್ನು ಸಾಮೂಹಿಕವಾಗಿ ಸೃಷ್ಟಿಸಿ, ಪಾರುಪತ್ಯಗಾರರಾಗಿ ನಡೆಸಿ, ಸಂರಕ್ಷಿಸಿಕೊಳ್ಳುತ್ತಾ ಬಂದಿವೆ; ಜೀವ ವಿವಿಧತೆ ಎಂಬುದು ಈ ಸಮುದಾಯಗಳ ಸಾಂಸ್ಕೃತಿಕ ಜ್ಞಾನ ವ್ಯವಸ್ಥೆಯ ಒಂದು ಅಂಗವಾಗಿರುತ್ತದೆ ಮತ್ತು ಇದು ಸುಸ್ಥಿರ ಕೃಷಿ ಅಭಿವೃದ್ಧಿಗೆ, ಆ ಮೂಲಕ ಆಹಾರದ ಭದ್ರತೆಗೆ (Food security) ಅತ್ಯಗತ್ಯವಾಗಿರುತ್ತದೆ. ಏಕಬೆಳೆ ಪದ್ಧತಿ (Monoculture) ಈ ಜೀವ ವಿವಿಧತೆ ನಾಶಕ್ಕೆ ಕಾರಣವಾಗಿದೆ; ಈ ಜೀವ ವಿವಿಧತೆಯನ್ನು ಆಯಾ ಸ್ಥಳದಲ್ಲೇ (insitu) ಸಂರಕ್ಷಿಸಬೇಕೇ ಹೊರತು, ಬೇರೆಡೆ (exsitu) ಸ್ಥಳಾಂತರಿಸಿ, ಕೃತಕವಾಗಿ ಪೋಷಿಸುವುದಕ್ಕೆ ಬಹಳ ಇತಿಮಿತಿಗಳಿವೆ; ಅಂತಿಮವಾಗಿ, ಈ ದೇಶೀಯಜ್ಞಾನ ಎಂಬುದು ಬೇರಾವುದೇ ಜ್ಞಾನ ಪ್ರಕಾರಕ್ಕೆ ಸರಿಸಮಾನವಾಗಿರುತ್ತದೆ".*

ಶ್ರೀಮಂತ ರಾಷ್ಟ್ರಗಳಲ್ಲಿನ ಪಟ್ಟಭದ್ರ ಹಿತಾಶಕ್ತಿಗಳು ಜಗತ್ತಿನ 2/3 ಭಾಗ ಜನಸಮುದಾಯವನ್ನು ಪ್ರತಿನಿಧಿಸುವ ರೈತರು ಮತ್ತು ನಾಟಿ ಸಮುದಾಯದಿಂದ ಜೀವವಿವಿಧತೆಯನ್ನು ಕಬಳಿಸಲು ಇಚ್ಛಿಸಿರುತ್ತಾರೆಯೇ ಹೊರತು ಜೀವ ವಿವಿಧತೆಯ ಮೇಲಿನ ಅವರ ಸ್ವಾಮ್ಯವನ್ನು ಒಪ್ಪಲು ತಯಾರಿಲ್ಲ. ಈ ಹಿನ್ನೆಲೆಯಲ್ಲಿ ರಿಯೋ ಜಾಗತಿಕ ಸಮ್ಮೇಳನ ಹುಟ್ಟು ಹಾಕಿದ *"21ನೇ ಶತಮಾನಕ್ಕೆ ಕಾರ್ಯಸೂಚಿ - Agenda 21"* ರ ಪ್ರಥಮ ಹಂತದ ಅನುಭವದ ಆಧಾರದ ಮೇಲೆ, ಸುಸ್ಥಿರ ಅಭಿವೃದ್ಧಿಯ ಪ್ರಯತ್ನವನ್ನು ಮುಂದುವರೆಸಲು, ಮುಂದಿನ ಐದು ವರ್ಷಗಳಲ್ಲಿ ಈ ಕೆಳಗಿನ ಆದ್ಯತೆಗಳತ್ತ ಗಮನಹರಿಸಬೇಕಾಗಿದೆ.

ಆದ್ಯತೆ ಒಂದು : *ರೈತರ ಮತ್ತು ನಾಟೀ ಜನಸಮೂಹದ ಜೀವವಿವಿಧತೆಯ ಮೇಲಿನ ಸಾಮೂಹಿಕ ಹಕ್ಕನ್ನು (Collective Rights) ಎತ್ತಿ ಹಿಡಿಯುವತ್ತ "ಜೀವವಿವಿಧತೆ ಒಡಂಬಡಿಕೆ" (Convention on Bio-diversity) ಪರಿಷ್ಕರಿಸಿ, ಜಾರಿಗೊಳಿಸಬೇಕು. ಇದಕ್ಕೆ ಪೂರಕವಾಗಿ, ರಾಷ್ಟ್ರೀಯ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಚಾಲನೆಯಲ್ಲಿರುವ "ಬೌದ್ಧಿಕ ಸನದಿನ ಹಕ್ಕು" (Intellectural property rights - IPR), ಭೂಕಾಯಿದೆಗಳು ಮತ್ತು ಬೀಜದ ಮೇಲಿನ ಕಾನೂನುಗಳನ್ನು ಪುನರ್ ಪರಿಶೀಲಿಸಬೇಕು. ಅಗತ್ಯವಿದ್ದಲ್ಲಿ ಮಾರ್ಪಾಡಿಸಲೂ ಬೇಕಾಗುತ್ತದೆ.*

ಆದ್ಯತೆ ಎರಡು : *ಈಗಾಗಲೆ "ಜೀವವಿವಿಧತೆ ಒಡಂಬಡಿಕೆ" ದೇಶೀಯ ಜ್ಞಾನ ವ್ಯವಸ್ಥೆಯನ್ನು ಮಾನ್ಯತೆ ಮಾಡಿದ್ದು, ಇದು "ವಿಶ್ವ ವ್ಯಾಪಾರ ಸಂಘಟನೆ (World Trade Organisaiton - WTO)" ಹುಟ್ಟು ಹಾಕಿರುವ "ವ್ಯಾಪಾರ ಸಂಬಂಧಿತ ಬೌದ್ಧಿಕ ಸನದಿನ ಹಕ್ಕು" (TRIPS) ಕಾಯ್ದೆಗಳಿಗೆ ಹೊಂದಾಣಿಕೆಯಾಗಲಾರದು. ಜೀವಿಗಳ ಮೇಲೆ ಯಾವುದೇ ರೀತಿಯ ಸನದು (Patent) ಇರಬಾರದು. ಈ ಕಾರಣದಿಂದ ಕೃಷಿಯನ್ನು ಉರುಗ್ವೆ ಸುತ್ತಿನ ಒಪ್ಪಂದಕ್ಕೆ ಸೇರಿಸಬಾರದು ಮತ್ತು ಕೃಷಿಯನ್ನು TRIPS ನಿಂದ ಸಂಪೂರ್ಣ ಹೊರಗಿಡ ಬೇಕಾಗುತ್ತದೆ.*

ಆದ್ಯತೆ ಮೂರು : *ಜೀವವಿವಿಧತೆ ಒಡಂಬಡಿಕೆಯಲ್ಲಿನ ಉಲ್ಲೇಖ 3, ಪ್ರತೀ ರಾಷ್ಟ್ರಕ್ಕೂ ತನ್ನಲ್ಲಿರುವ ಜೀವವಿವಿಧತೆಯ ಮೇಲಿನ ಪರಮಾವಧಿಕಾರವನ್ನು ಎತ್ತಿ ಹೇಳುತ್ತದೆ. ಜೊತೆಗೆ ಉಲ್ಲೇಖ 8(J) ದೇಶೀಯ ಜ್ಞಾನ, ಅನುಶೋಧನೆ ಮತ್ತು ಆಚರಣೆಗಳನ್ನು ಗೌರವಿಸುತ್ತಾ, ಅವುಗಳ ಒಡೆಯರ ಅನುಮತಿ ಮತ್ತು ಭಾಗವಹಿಸುವಿಕೆ ಮೂಲಕ ಮಾತ್ರ, ಅವುಗಳನ್ನು ವಾಣಿಜ್ಯ ದೃಷ್ಟಿಯಿಂದ ದೊಡ್ಡ ಪ್ರಮಾಣದ ಬಳಕೆಗೆ ಅನುಮತಿ ನೀಡುತ್ತದೆ. ಈ ಕಾರಣದಿಂದ, ಇವುಗಳ ಮೇಲಿನ ಸ್ಥಳೀಯ ಸಮುದಾಯದ ಹಕ್ಕು ಖಾತರಿಯಾಗುವವರೆಗೆ, ಜೈವಿಕ ಸಂಪನ್ಮೂಲಗಳನ್ನು ಬಳಸಿ ಅಭಿವೃದ್ಧಿ ಹೊಂದುವಂತಹಾ ಎಲ್ಲಾ ಚಟುವಟಿಕೆಗಳ ಮೇಲೆ, ಈ ಸಂಪನ್ಮೂಲಗಳನ್ನು, ಸಾಮೂಹಿಕ ಜ್ಞಾನ ಪ್ರಕಾರಗಳನ್ನು ಖಾಸಗೀಕರಣಗೊಳಿಸುವುದರ, ಏಕಸ್ವಾಮ್ಯ ಒಡೆತನಕ್ಕೆ ಒಳಪಡಿಸುವುದರ ವಿರುದ್ಧ ಪ್ರತಿಯೊಂದು ರಾಷ್ಟ್ರವೂ ನಿರ್ಬಂಧ ಹೇರಬೇಕಾಗಿದೆ.*

ಆದ್ಯತೆ ನಾಲ್ಕು : *ಉಲ್ಲೇಖ 10(C) ಪ್ರಕಾರ ಜೈವಿಕ ಸಂಪನ್ಮೂಲಗಳನ್ನು ಸಂರಕ್ಷಿಸುವಾಗ ಅಥವಾ ಸುಸ್ಥಿರ ರೀತಿಯಲ್ಲಿ ಬಳಸುವಾಗ ಸಮುದಾಯದ ಸಾಂಸ್ಕೃತಿಕ ಪರಂಪರೆಗಳಿಗೆ ಅಡ್ಡಿಯಾಗದಂತೆ ನೋಡಿಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಇಂದು "ದ್ವಿ ಹಸಿರುಕ್ರಾಂತಿ" (Double Green Revolution) ಎಂದು ಕರೆಸಿಕೊಳ್ಳುವ ಜೈವಿಕ ತಂತ್ರಜ್ಞಾನ (Biotechnology) ವು ಜೈವಿಕ ಸಂಪತ್ತಿನ ಮಾಲಿನ್ಯ ಮತ್ತು ಕ್ಷೀಣತೆಗೆ ಕಾರಣವಾಗುತ್ತಲಿದ್ದು, ಆಹಾರದ ಭದ್ರತೆ ವಿಚಾರದಲ್ಲಿ ಆತಂಕವನ್ನು ಹೆಚ್ಚಿಸಿರುವುದರಿಂದ, ಜೈವಿಕವಾಗಿ ಮಾರ್ಪಾಡಿಸಿದ ಎಲ್ಲಾ ಸಸ್ಯತಳಿ ಮತ್ತು ಜೀವಿಗಳನ್ನು ನಿಷೇಧಿಸಬೇಕು.*

ಆದ್ಯತೆ ಐದು : *ಜೀವ ವಿವಿಧತೆ ಒಡಂಬಡಿಕೆ ರೀತ್ಯ ಶ್ರೀಮಂತ ರಾಷ್ಟ್ರಗಳು ಜೈವಿಕ ಸಂಪನ್ಮೂಲ ಸಮೃದ್ಧ ಬಡ ರಾಷ್ಟ್ರಗಳಿಗೆ ನೀಡಬೇಕಾಗಿರುವ ದೇಣಿಗಳಿಂದ ತಪ್ಪಿಸಿಕೊಳ್ಳುತ್ತಿರುವುದು ಮಾತ್ರವಲ್ಲ - "ವಿಶ್ವಸಂಸ್ಥೆಯ ವಾಣಿಜ್ಯ ಮತ್ತು ಅಭಿವೃದ್ಧಿ ಸಮ್ಮೇಳನವನ್ನು" UNCTAD ಮುಂದಿಟ್ಟುಕೊಂಡು, "ಜೈವಿಕ ವ್ಯಾಪಾರಕ್ಕೆ" (Bio-trade) ಹವಣಿಸುತ್ತಿವೆ. ಈ ನಿಟ್ಟಿನಲ್ಲಿ, ವಿದೇಶಿ ವರ್ತಕರು ನಮ್ಮ ಜೀವವಿವಿಧತೆಯ ಮತ್ತು ವೈಚಾರಿಕ ಬಳುವಳಿಗಳನ್ನು ಕೊಳ್ಳೆ ಹೊಡೆಯಲು ಅನುಕೂಲವಾಗುವಂತೆ ಈ ಬಡರಾಷ್ಟ್ರಗಳ IPR ಕಾಯ್ದೆ, ಕಾನೂನುಗಳನ್ನು ತಿರುಚಲು ಶ್ರೀಮಂತ ರಾಷ್ಟ್ರಗಳು ಮುಂದಾಗುತ್ತಿವೆ. ಈ ರೀತಿಯಾಗಿ ಜೈವಿಕ ವ್ಯಾಪಾರಕ್ಕೆ ಅನುವು ಮಾಡಿಕೊಡುವುದೆಂದರೆ, ಜೀವವಿವಿಧತೆ ಒಡಂಬಡಿಕೆಯ ಮೂಲ ಉದ್ದೇಶವನ್ನೇ ಹಾಳುಗೆಡುಹಿದಂತಾಗುವುದರಿಂದ ಇದನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ಜೊತೆಗೆ ಈ ತನಕ ಶ್ರೀಮಂತ ರಾಷ್ಟ್ರಗಳು ಮತ್ತು ಅಲ್ಲಿನ ಉದ್ಯಮಪತಿಗಳು ವಿಶ್ವದ ಮೂರನೇ ಎರಡು ಭಾಗ ಜನಾಂಗದಿಂದ ಪಡೆದಿರುವ ಜ್ಞಾನ ಮತ್ತು ಸಂಪನ್ಮೂಲಗಳ ಲಾಭವನ್ನು ಹೇಗೆ ಹಿಂತಿರುಗಿಸಬೇಕೆಂಬುದರ ಬಗ್ಗೆ ಯೋಚಿಸ ಬೇಕಾಗುತ್ತದೆ.*

ಆದ್ಯತೆ ಆರು : *ಈ ಮೇಲಿನ ಐದು ಆಧ್ಯತೆಗಳ ಜೊತೆಗೆ, ತಳಿಗಳನ್ನು ಬೇರೆಡೆ ಸಾಗಿಸಿ (exsitu) ಸಂರಕ್ಷಿಸುವವರು, ಅದನ್ನು ತಲೆತಲಾಂತರದಿಂದ ಸ್ಥಳದಲ್ಲಿ (insitu) ಸಂರಕ್ಷಿಸಿಕೊಳ್ಳುತ್ತಾ ಬಂದಿರುವವರಿಗೆ ಹಿಂತಿರುಗಿಸಬೇಕಾಗಿರುವ ಕಾಣಿಕೆ, (repatriation), ಕೃಷಿ ಮತ್ತು ಆಹಾರದ ವಿಚಾರದಲ್ಲಿ ಉದ್ಯಮ ಪತಿಗಳ ಉತ್ತರದಾಯಿತ್ವ (accountability), ವಿಶ್ವಸಂಸ್ಥೆ ಮತ್ತು "ವಿಶ್ವ ವಾಣಿಜ್ಯ ಸಂಸ್ಥೆಗಳ" ನಡುವಿನ ಸಂಬಂಧವನ್ನು ತ್ವರಿತವಾಗಿ ವ್ಯಾಖ್ಯಾನಿಸುವುದು ಈ ಎಲ್ಲ ವುಗಳ ಬಗ್ಗೆಯೂ ಚರ್ಚೆ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ರೈತರ ಹಕ್ಕು, ಆಹಾರ, ಜೀವವಿವಿಧತೆ ಮತ್ತು ಸುಸ್ಥಿರ ಕೃಷಿ ವಿಚಾರಗಳ ಬಗ್ಗೆಯೂ ಚರ್ಚೆ ನಡೆಯುವಾಗ ರೈತ ಪ್ರತಿನಿಧಿಗಳನ್ನು ಒಳಪಡಿಸುವಂತೆ ಮಾಡಲು ವಿಶ್ವಸಂಸ್ಥೆಯ ಒಳಗೆ ರೈತ ಪ್ರತಿನಿಧಿಗಳ ಒಂದು ಖಾಯಂ ಗುಂಪನ್ನು ಹುಟ್ಟು ಹಾಕಲು ಮುಂದಾಗ ಬೇಕು. ಈ ಕಾರ್ಯ ವಿಶ್ವಸಂಸ್ಥೆಯ ಮುಂದಿನ ಸಾಮಾನ್ಯ ಸಮ್ಮೇಳನ (General Assembly) ಸೇರುವ ಸಮಯದಲ್ಲಿ ಈಡೇರಿಸಬೇಕು.*

ಪಶುವೈದ್ಯಕೀಯ ಇನ್‌ಸ್ಪೆಕ್ಟರ್ ಜೋಗಪ್ಪನವರ ನಾಟೀ ಔಷಧಿಗಳು

ಶ್ರೀ ಜೋಗಪ್ಪನವರು ಪಶುವೈದ್ಯಕೀಯ ಇನ್‌ಸ್ಪೆಕ್ಟರ್ ಆಗಿ ಈಗ ನಿವೃತ್ತಿಯನ್ನು ಪಡೆದಿದ್ದಾರೆ. ಪಾಶ್ಚಾತ್ಯ ತತ್ವದ ಆಧುನಿಕ ಪಶು ಚಿಕಿತ್ಸೆ ಕ್ರಮಗಳ ಅಡಿಯಲ್ಲಿ, ನಾಟಿ ಪದ್ಧತಿಗಳನ್ನು ಕರಗತ ಮಾಡಿಕೊಂಡ ಜೋಗಪ್ಪನವರು, ತಮ್ಮ ಸೇವೆಯ ಜೊತೆಯಲ್ಲಿ ಅವಕಾಶ ದೊರೆತಾಗ ಈ ಪದ್ಧತಿಯನ್ನೂ ಜನರಿಗೆ ಬಿತ್ತತೊಡಗಿರುತ್ತಾರೆ.

■ ದನಗಳ ಗರ್ಭಕೋಶ ಹೊರಗೆ ಬಂದರೆ

ದನಗಳಿಗೆ ಗರ್ಭಕೋಶ ಹೊರಗೆ ಬಂದಾಗ 'ಮುಟ್ಟಿದರೆ ಮುನಿ' (*Mimosa pudica*) ಗಿಡದ ಸೊಪ್ಪನ್ನು ಅರೆದು ತಿನ್ನಿಸಬೇಕು.

■ ಹುಳಕಡ್ಡಿಗೆ

ಆಡುಮುಟ್ಟದ ಸೊಪ್ಪು (*Tylophora asthmatica*), ತೊಟ್ಟಿ ಸೊಪ್ಪು (*Capparis brevispina*), ಕಾಳುಮೆಣಸು, ಬೆಳ್ಳುಳ್ಳಿ ಇವೆಲ್ಲವನ್ನೂ ಅರೆದು ಮಜ್ಜಿಗೆ ಅಥವಾ ಆಡಿನ ಹಾಲಿನೊಂದಿಗೆ ಪ್ರಾಣಿಗಳಿಗೆ ಕುಡಿಸಿದರೆ ಹುಳಕಡ್ಡಿ ಬೇಗನೆ ಗುಣವಾಗುತ್ತದೆ. ಈ ಔಷಧಿಯನ್ನು ಮನುಷ್ಯರಿಗೂ ಬಳಸಬಹುದು.

■ ಗೂರಲು ಅಥವಾ ಆಸ್ತಮ

ಹಿರೇಮದ್ದಿನ ಗೆಡ್ಡೆ (*Withania somnifera*), ತೀಟ್‌ಬಸಳೆಸೊಪ್ಪು (*Gynandropsis pentaphylla*), ಮುಂಗುರು ಬಳ್ಳಿ (*Cissus quadrangularis*), ಬಿಳಿ ನೀರುಳ್ಳಿ, ಕಾಳುಮೆಣಸು, ಹಸಿ ಶುಂಠಿ ಇವೆಲ್ಲವನ್ನೂ ಸಣ್ಣಗೆ ಹೆಚ್ಚಿ, ಒಂದು ಮಡಿಕೆಗೆ ಹಾಕಿ ಬಾಯಿಕಟ್ಟಿ ಗೊಬ್ಬರದ ಗುಂಡಿಯಲ್ಲಿ ಹೂತಿಡಬೇಕು. ಸ್ವಲ್ಪ ದಿನದ ನಂತರ ತೆಗೆದು ಅದನ್ನು ಮಜ್ಜಿಗೆಗೆ ಹಾಕಿ 3 ಗೊಟ್ಟದಷ್ಟನ್ನು ಪ್ರಾಣಿಗಳಿಗೆ ಕುಡಿಸಬೇಕು. ಇದರಿಂದ ಪ್ರಾಣಿಗಳ ಗೂರಲು ನಿಲ್ಲುವುದಂತೆ.

■ ಗಾಯದಲ್ಲಿ ಹುಳ ಆದಾಗ

ಹಾಲುವಾಣ (*Erythrina mysorensis*) ಸೊಪ್ಪಿನ ರಸ, ಬಟ್ಟೆ ಕರ್ಪೂರ (Naphthalene) ಇವೆರಡನ್ನೂ ಚೆನ್ನಾಗಿ ಅರೆದು ನೀಲಗಿರಿ ಎಣ್ಣೆ ಜೊತೆ ಕಲಸಿ ಗಾಯವಾದ ಭಾಗಕ್ಕೆ ಲೇಪಿಸಿ ಪಟ್ಟಿ ಕಟ್ಟಬೇಕು. ಮೂರು ದಿನವಾದಮೇಲೆ ಪಟ್ಟಿಯನ್ನು ಬಿಚ್ಚಿ ಗಾಯವನ್ನು ಹಿಸುಕಿದರೆ ಹುಳಗಳೆಲ್ಲ ಹೊರಕ್ಕೆ ಬರುತ್ತದೆ.

ಹಾಗೇ, ಬೇವಿನ ಸೊಪ್ಪು, ಬೆಳ್ಳುಳ್ಳಿ, ಬಟ್ಟೆ ಕರ್ಪೂರ, ಬಜೆ (*Acorus calamus*), ಹಾಳಾದ ಬ್ಯಾಟ್ರಿಯ ಇಂಗಾಲ (Carbon), ಇವೆಲ್ಲವನ್ನೂ ಚೆನ್ನಾಗಿ ಅರೆದು, ಕಲಸಿ ಗಾಯಕ್ಕೆ ಹಚ್ಚಿದರೆ ಬೇಗನೆ ಗುಣವಾಗುತ್ತದೆ.

■ ಕಾಲು ಮುರಿದರೆ

ಹರಗಲ ಹತ್ತಿ ಸೊಪ್ಪು (*Jatropha gossipifolia*), ಉದ್ದಿನ ಬೇಳೆ (*Phaseolus mungo*), ಮೈದಾ ಹಿಟ್ಟು, ರಕ್ತ ಬಾಳು, ಇವೆಲ್ಲವನ್ನು ಅರೆದು ಮುರಿದ ಜಾಗಕ್ಕೆ ಹಚ್ಚಿ ಪಟ್ಟಿ ಕಟ್ಟಬೇಕು. ಈ ಪಟ್ಟಿಯನ್ನು 40 ದಿನದ ನಂತರ ಬಿಚ್ಚಬೇಕು.

ಸಂಗ್ರಹ : ವೀಣಾ ಎಂ.ಎಸ್.

ದನಗಳ ಹೆಗಲಿಗೆ ಸಂಜೀವಿನಿ ಔಷಧ

1/2 ಕೆ.ಜಿ. ಹಸುವಿನ ಬೆಣ್ಣೆ + 150 ಗ್ರಾಂ. ರುಮ್ಮಿ ಮಸ್ತಿಕೆ ಎರಡನ್ನೂ ಕಂಚಿನ ಗಂಗಳಸದಲ್ಲಿ ತೆಗೆದುಕೊಂಡು ಒಂದು ವಾರ ಕಾಲ ಪ್ರತಿದಿನ 10 ನಿಮಿಷ ತಾಮ್ರದ ಪಾತ್ರೆಯಿಂದ ತೇಯುತ್ತಾ ಬಂದರೆ, ಹಸಿರು ಬಣ್ಣಕ್ಕೆ ಲೇಹ ತಯಾರಾಗುತ್ತದೆ. ಈ ಲೇಹವನ್ನು ಹೊಸದಾಗಿ ಬೇಸಾಯಕ್ಕೆ ತೊಡಗಿಸುವ ರಾಸುಗಳ ಹೆಗಲಿಗೆ ಲೇಪಿಸಿಕೊಂಡು (ಒಂದು ತಿಂಗಳ ಕಾಲದವರೆಗೂ) ಕೆಲಸ ಕಲಿಸಿದ್ದೇ ಆದರೆ, ಅವುಗಳ ಜೀವನದಲ್ಲೇ ಯಾವ ರೀತಿಯ ಹೆಗಲಿನ ಊತವಾಗಲಿ, ಗಂಟಾಗಲಿ, ಒಡಪಾಗಲಿ ಬರುವುದಿಲ್ಲ. ಈ ಲೇಹ ಎಷ್ಟು ವರ್ಷಗಳಾದರೂ ತಾಮ್ರದ ಪಾತ್ರೆಯಲ್ಲಿ ಇದ್ದರೆ ಕೆಡುವುದಿಲ್ಲ. ಈ ಲೇಹವನ್ನು ಗಂಟು, ಊತ, ಒಡಪುಗಳಿಂದ ನರಳುವ ರಾಸುಗಳಿಗೆ ಲೇಪಿಸಿದರೆ ಸಂಪೂರ್ಣ ಗುಣಕಾಣಬಹುದು.

ಬಿ. ಬಸವರಾಜ, ಸಂಕೇಶಿವರ, ಹಾಸನ

ಕಸ (Placenta) ಹೊರಬರದಿದ್ದಲ್ಲಿ

ಹಸು ಕರು ಹಾಕಿ ಒಂದು ಗಂಟೆಯೊಳಗೆ ಕಸ ಹೊರಬರದಿದ್ದಲ್ಲಿ ಬಿದಿರಿನ ಸೊಪ್ಪು ಅಥವಾ ಕಬ್ಬಿನ ಓಲೆಗಳನ್ನು ಅಂತಹ ಹಸುವಿಗೆ ತಿನ್ನಿಸಿದರೆ ಅರ್ಧಗಂಟೆ ಒಳಗೆ ಕಸ ಹೊರ ಬೀಳುವುದು.

ಶಂಕರ ಗೌಡ, ಕನಕಪುರ, ಚಿಕ್ಕಮಗಳೂರು ಜಿಲ್ಲೆ

ಹಿತ್ತಲ ಗಿಡಕ್ಕೆ ಮಾಹಿತಿ

ಹಿತ್ತಲಗಿಡಕ್ಕೆ ಸೂಕ್ತ ಎನಿಸಿದ ವ್ಯಕ್ತಿ ಮತ್ತು ವಿಚಾರಗಳ ಬಗ್ಗೆ ಮಾಹಿತಿ ನೀಡಿರಿ. ಉತ್ತಮ ಮಾಹಿತಿಗೆ ಬಹುಮಾನವಿದೆ.

ಸಂ.

ಪ್ರಾಣಿಗಳಿಗೆ ಜ್ವರ ಬಂದರೆ

ಒಂದು ಹಿಡಿ ಬೆಪ್ಪಾಲೆ ಅಥವಾ ಪಾಲೆ *(Wrightia tinctoria)* ಎಲೆ, ಅದೇ ಮರದ ಕೆತ್ತೆ (ಅಂಗೈ ಅಗಲ), ಕಾಳು ಮೆಣಸು ಒಂದು ಪಾವು ಮತ್ತು ಬೆಳ್ಳುಳ್ಳಿ, (3 ಅಥವಾ 4) ಇವೆಲ್ಲವನ್ನೂ ನೀರಿನ ಜೊತೆ ಚೆನ್ನಾಗಿ ಅರಿಯಬೇಕು. ಈ ಮಿಶ್ರಣವನ್ನು ಅರ್ಧ ಲೀಟರಿನಷ್ಟು ನೀರಿನ ಜೊತೆ ಬೆರೆಸಿ ಪ್ರಾಣಿಗಳಿಗೆ ಕುಡಿಸಿದರೆ ಜ್ವರವು ಸಾಯಂಕಾಲದ ಒಳಗೆ ಕಮ್ಮಿಯಾಗುತ್ತದೆ. ಈ ಪ್ರಯೋಗವನ್ನು ಮಾಡಿದವರು ತಮಿಳು ನಾಡಿನ ಸೀತಂಡಪುರಂ ಹಳ್ಳಿಯ ಶ್ರೀ ಕುಪ್ಪಯ್ಯ ಗೌಂಡರ್‌ರವರು.

ಮೂಲ : ಹನಿಬೀ, ಸಂಪುಟ 7(4), 1996

ಮೂತ್ರ ಪಿಂಡದ ತೊಂದರೆಗೆ

ಪ್ರಾಣಿಗಳ ಮೂತ್ರ ಪಿಂಡದಲ್ಲಿ ಕಲ್ಲುಕಟ್ಟಿ ಕೊಂಡರೆ ಮೂತ್ರ ವಿಸರ್ಜಿಸಲು ತೊಂದರೆ ಉಂಟಾಗುತ್ತದೆ. ರೈತರು ಗರ್ಭಧರಿಸಿದ ಪ್ರಾಣಿಗಳಿಗೆ ಈ ತೊಂದರೆ ಉಂಟಾದರೆ ಅವುಗಳಿಗೆ ಗರ್ಭಕೋಶ ಜಾರುವ ತೊಂದರೆ ಉದ್ಭವಿಸ ಬಹುದೆಂದು ನಂಬುತ್ತಾರೆ. ಈ ಕಾಯಿಲೆಯನ್ನು ಗುಣಪಡಿಸಲು ಗುಜರಾತಿನ ಪೊಗಲು ಗ್ರಾಮದ ಸಬರ್ಕಾತ ಜಿಲ್ಲೆಯ ಬಲದೇವ್‌ಭಾಯಿ ಪಾಟೀಲ್ ಎಂಬ ರೈತ ಕಾಡುಬಸಳೆ(Bryoph yllum) ಯ ಎಲೆಯನ್ನು ಉಪಯೋಗಿಸುತ್ತಾರೆ. ಸುಮಾರು 500 ಗ್ರಾಂ. ನಷ್ಟು ಎಲೆಯನ್ನು ಅರೆದು, ರಸಹಿಂಡಿ ಅದನ್ನು 500 ಮಿಲಿ ಲೀಟರ್‌ನಷ್ಟು ನೀರಿಗೆ ಬೆರೆಸಿ ಇಡಬೇಕು. ಅದರಿಂದ 250 ಮಿ.ಲೀ. ನಷ್ಟು ರಸವನ್ನು ದಿನಕ್ಕೆ ಎರಡು ಬಾರಿ ಬೆಳಿಗ್ಗೆ ಮತ್ತು ಸಂಜೆ ಸುಮಾರು 8-10 ದಿನಗಳವರೆಗೆ ಪ್ರಾಣಿಗಳಿಗೆ ಕುಡಿಸುವುದರಿಂದ ಈ ರೋಗವನ್ನು ತಡೆಗಟ್ಟಬಹುದು. 'ಕಾಡುಬಸಳೆ' ಅಥವಾ 'ಪತ್ತರ್ ಪಾನ್' ಎಂಬ ಈ ಗಿಡವು ಸುಮಾರು 30 ಸೆ.ಮಿ.ಯಿಂದ 60 ಸೆ.ಮಿ. ವರೆಗೆ ಉದ್ದವಾಗಿ ಬೆಳೆಯುತ್ತದೆ. ಈ ಗಿಡವನ್ನು ಮನುಷ್ಯರ ಮೂತ್ರ ಪಿಂಡ ತೊಂದರೆಗೂ ಬಳಸುತ್ತಾರೆ.

ಮೂಲ : ಹನಿಬೀ, ಸಂಪುಟ 7(4), 1996

ಹಸುಗಳಿಗೆ ಗರ್ಭಧಾರಣೆ

ಹಸುಗಳಿಗೆ ಗರ್ಭಧಾರಣೆ ಮಾಡಿಸಲು ಕರಿಗೇರು ಅಥವಾ ಗೊಡ್ಡುಗೇರುಮರ *(Semecarpus anacardium)* ದ ಬೀಜವನ್ನು ದಿನಕ್ಕೆ ಒಂದರಂತೆ ಮೂರು ದಿನ ನುಂಗಿಸಬೇಕು. ಇದಾದ ಮೇಲೆ 250 ಗ್ರಾಂನಷ್ಟು ಮೊಳಕೆ ಬರಿಸಿದ ಗೋಧಿಯನ್ನು ದಿನಕ್ಕೊಂದು ಬಾರಿಯಂತೆ ಹದಿನೈದು ದಿನ ಕೊಡಬೇಕು. ಕನ್ಯಾಕುಮಾರಿಯಲ್ಲಿರುವ ಶ್ರೀ ಪಿಚ್ಚಾಯಿ ಅವರ ಡೈರಿಯ ಹಸುವು ಈ ವಿಧಾನದಿಂದ ಎರಡು ವರ್ಷದ ನಂತರ ಗರ್ಭಧರಿಸಿತು.

ಮೂಲ : ಹನಿಬೀ, ಸಂಪುಟ 7(4) 1996

ಅತಿಭೇದಿ ನಿವಾರಣೆ

ಸುಮಾರು ಒಂದು ಕೆ.ಜಿ.ಯಷ್ಟು ಪಾಲೆ ಅಥವಾ ಬೆಪ್ಪಾಲೆ ಎಲೆಯನ್ನು ನೀರಿನಲ್ಲಿ ನೆನೆಸಿ ಆಮೇಲೆ ಅದನ್ನು ಚೆನ್ನಾಗಿ ಅರೆದು ಪ್ರಾಣಿಗಳಿಗೆ ಕುಡಿಸಿದರೆ ಅತಿಭೇದಿಯು ಕಮ್ಮಿಯಾಗುತ್ತದೆ ಎಂದು ಮಧುರೈ ಜಿಲ್ಲೆಯ ಅಯ್ಯತುರೈ ಕೊಣ್ಣಾರ್ ಹೇಳುತ್ತಾರೆ.

ಗುಜರಾತಿನ ವಲಸಾಡ್ ಜಿಲ್ಲೆಯ ಚೋಟುಭಾಯಿ ಭನಭಾಯಿ ಪಟೇಲ್‌ರ ಪ್ರಕಾರ ಈ ಕಾಯಿಲೆಗೆ ಉಮ್ರಾ *(Ficus racenosa)* ಎಂಬ ಮರದ ಕೆತ್ತೆ ಮತ್ತು ಬಾಳೆಗಿಡದ ದಿಂಡಿನ ರಸ ದೊಂದಿಗೆ ಚೆನ್ನಾಗಿ ಅರೆದು, ರಸವನ್ನು ಸೋಸಿ, ಪ್ರಾಣಿಗಳಿಗೆ ಕುಡಿಸಬೇಕು. ಒಂದು ಗಂಟೆಯ ಬಳಿಕ ಅವುಗಳಿಗೆ 250 ಮಿಲಿ ಯಷ್ಟು ಕಡಲೆಕಾಯಿ ಎಣ್ಣೆಯನ್ನು ಕುಡಿಸಬೇಕು. ಇದರಿಂದ ಅತಿಭೇದಿಯಿಂದ ನರಳುವ ಪ್ರಾಣಿಯು ಕೇವಲ ಒಂದು ಅಥವಾ ಎರಡು ದಿನಗಳಲ್ಲಿ ಗುಣಮುಖ ಹೊಂದುತ್ತದೆ.

ಮೂಲ : ಹನಿ ಬೀ, ಸಂಪುಟ 7(2), 1996

ಹೆಗಲು.ಗಾಯ (Yoke gall) ಕ್ಕೆ

ಹೆಗಲು ಗಾಯ ಸಾಮಾನ್ಯವಾಗಿ ಎತ್ತುಗಳಲ್ಲಿ ಜಾಸ್ತಿಯಾಗಿ ಕಂಡುಬರುವ ಕಾಯಿಲೆ. ಈ ಕಾಯಿಲೆಯನ್ನು ಸಾಂಪ್ರದಾಯಿಕವಾಗಿ ದೊಡ್ಡಹಿಂಡಿ *(Aerva tomentosa)* ಎಂಬ ಗಿಡದ ರಸದಿಂದ ಗುಣಪಡಿಸುತ್ತಾರೆ.

ಸುಮಾರು 50 ಗ್ರಾಂನಷ್ಟು ದೊಡ್ಡಹಿಂಡಿಯ ಸೊಪ್ಪನ್ನು ಸ್ವಲ್ಪ ನೀರಿನಲ್ಲಿ ನೆನೆಸಿ ಆಮೇಲೆ ಅದನ್ನು ಅರೆಯಬೇಕು. ಅರೆದ ಸೊಪ್ಪನ್ನು ಚೆನ್ನಾಗಿ ಹಿಂಡಿ ರಸ ತೆಗೆದುಕೊಂಡು ಎತ್ತಿನ ಕತ್ತಿನ ಬಾಗಕ್ಕೆ ದಿನಕ್ಕೆ ಮೂರು ಬಾರಿಯಂತೆ ಐದು ಅಥವಾ ಆರು ದಿನಗಳವರೆಗೆ ಹಚ್ಚಬೇಕು. ರೈತರ ಪ್ರಕಾರ ಹಚ್ಚಿದ ಒಂದು ವಾರದಲ್ಲಿ ರೋಗ ವಾಸಿಯಾಗುತ್ತದೆ. ಈ ಗಿಡವು ಗೋಮಾಳ ಪ್ರದೇಶ ಹಾಗೂ ಗುಡ್ಡಗಳಲ್ಲಿ ದೊರೆಯುವಂತದ್ದಾಗಿದ್ದು ಈಗ ಅಪರೂಪವಾಗಿದೆ.

ಸಬರ್ಕಾಂತ ಜಿಲ್ಲೆಯ ರಾಂಚೋದ್‌ಭಾಯಿ ಕೆಂಗಾಭಾಯಿ ದೇಸಾಯಿಯವರ ಪ್ರಕಾರ ದೊಡ್ಡಹಿಂಡಿಯ ಬದಲು ನಾಯಿಸೊಂಕು ಬಳ್ಳಿ *(Mucuna prurita)* ಎಂಬ ಈ ಗಿಡವು ದೊಡ್ಡಹಿಂಡಿಯಷ್ಟೇ ಪರಿಣಾಮಕಾರಿ.

ಹನಿಬೀ, ಸಂಪುಟ 7(2). 1996

ಎತ್ತುಗಳ ಹೃದಯರೋಗ ನಿವಾರಣೆ

ಮನುಷ್ಯನ ಮೂತ್ರ, ಬೆಪ್ಪಾಲೆ *(Wrightia tinctoria)* ಯ ಎಲೆಗಳು, ಒಣ ಮೆಣಸು ಇವುಗಳನ್ನು ಚೆನ್ನಾಗಿ ಅರಿಯಬೇಕು. ಈ ಮಿಶ್ರಣಕ್ಕೆ ಬಿಸಿನೀರನ್ನು ಬೆರಕೆಮಾಡಿ ಎತ್ತುಗಳಿಗೆ ಕುಡಿಯಲು ಕೊಡಲಾಗುವುದು. ಈ ದ್ರವವನ್ನು ಕೊಡುವ ಮೊದಲು ಎತ್ತುಗಳ ಎದೆಯ ಕೆಳಗಿನ ಭಾಗಕ್ಕೆ ಚರ್ಮದ ಎಕ್ಕಡದಿಂದ ಮೂರು ಏಟು ಹಾಕಬೇಕು.

ಮೂಲ : ಹನಿಬೀ, ಸಂಪುಟ 7 (2), 1996

ಎತ್ತುಗಳ ಶಕ್ತಿವರ್ಧಕ ಔಷಧಿ

'ಏತ' ಎಂಬುದು ಎತ್ತುಗಳಂತಹ ಪ್ರಾಣಿಯ ಸಹಾಯದಿಂದ ಮಾಡುವಂತಹ ನೀರಾವರಿ ವ್ಯವಸ್ಥೆ. ಈ ಕಾರ್ಯಕ್ಕಾಗಿ ಎತ್ತುಗಳನ್ನು ದಿನನಿತ್ಯವೂ ಬಳಸುತ್ತಿದ್ದರೆ ಅವುಗಳಿಗೆ ನಿಶ್ಶಕ್ತಿಯುಂಟಾಗುತ್ತದೆ. ಇದಕ್ಕಾಗಿ ಎತ್ತುಗಳಿಗೆ ಶಕ್ತಿವರ್ಧಕ ಔಷಧಿಯನ್ನು ಕೊಡಲಾಗುತ್ತದೆ.



'ಒಳ್ಳೆ ಹೊನ್ನೆ' ಅಥವಾ 'ಹನೆ' *(Pterocarpus marsupium)* ಎಂಬ ಮರದ ಕೆತ್ತೆ, ನೂರು ವರ್ಷ ಹಳೆಯದಾದ ಬೇವಿನ (Neem) ಮರದ ಕೆತ್ತೆ, ಹಾಗೂ ತುಂಬೆಮರ *(Acacia leucopholoea)* ದ ಕೆತ್ತೆ ಇವೆಲ್ಲವನ್ನೂ ನೀರಿನಲ್ಲಿ ಸಾರಾಯಿಯ ವಾಸನೆ ಬರುವವರೆಗೆ ನೆನೆಸಿಡಬೇಕು. ಈ ದ್ರವದ ಜೊತೆ ಕಪ್ಪು ಜೀರಿಗೆ (Black cumin), ತಾಳೆಮರದ ಬೆಲ್ಲ(Palm Jaggery)ವನ್ನು ಸೇರಿಸಿ, ಈ ಮಿಶ್ರಣವನ್ನು ದಿನಕ್ಕೆ ಮೂರು ಬಾರಿ ಎತ್ತುಗಳಿಗೆ ಕುಡಿಸಬೇಕು. ಇದು ಎತ್ತುಗಳಲ್ಲಿ ಶಕ್ತಿವರ್ಧಕವಾಗಿ ಕೆಲಸ ಮಾಡುವುದಂತೆ.

ಮೂಲ : ಹನಿಬೀ ಸಂಪುಟ 7(2), 1996

ದೇಶೀಯ ಹತೋಟಿ ಕ್ರಮಗಳು

ತುಂಗೆ ಹುಲ್ಲು ತಡೆಗಟ್ಟಲು

ತುಂಗೆ ಹುಲ್ಲು *(Cyperus rotendus)* ಎಂಬ ಕಳೆಯನ್ನು ತಡೆಗಟ್ಟಲು ಆಡಿನ ಗೊಬ್ಬರವನ್ನು ಈ ಹುಲ್ಲಿನ ಸೋಂಕು ಇಲ್ಲದಂತಹ ಹಳ್ಳಿಯಿಂದ ತಂದು ಉಪಯೋಗಿಸಬಹುದು. ಬೇವಿನ ಬೀಜದ ಪುಡಿಯನ್ನು ಕೂಡ ಗೊಬ್ಬರದಂತೆ ಕಿತ್ತಳೆ, ಸೀಬೆ, ಮಾವು ಈ ತೋಟಗಳಲ್ಲಿ ಉಪಯೋಗಿಸುವುದರಿಂದ ತುಂಗೆ ಹುಲ್ಲನ್ನು ತಡೆಗಟ್ಟಬಹುದು. ತಮಿಳುನಾಡಿನ ನೆಲ್ಲೈ ಕಟ್ಟಬೊಮ್ಮನ್ ಜಿಲ್ಲೆಯ ಶ್ರೀ ವೇಲುಮುದಲಿಯಾರ್ ಅವರು ಈ ಪ್ರಯೋಗವನ್ನು ಮಾಡಿ ಸಫಲತೆಯನ್ನು ಪಡೆದಿದ್ದಾರೆ.

ಗರಕೆಹುಲ್ಲು ತಡೆಗಟ್ಟಲು

ಗರಕೆಹುಲ್ಲು ಅಥವಾ ಕಾಡುಗರಿಕೆ*(Cynodon dactylon)* ಹುಲ್ಲನ್ನು ಸಾಧಾರಣವಾಗಿ ಕೀಳಲು ಸಾಧ್ಯವಿಲ್ಲ. ಕಾತಿ ಹಳ್ಳಿಯ ಮೆಹಾಸನಾ ಜಿಲ್ಲೆಯ ದೇವಶೀಜೀಭಾಯಿ ಠಾಕೂರ್ ಎಂಬುವವರು ಜೀರಿಗೆಗಿಡದ ಸಹಾಯದಿಂದ ಈ ಹುಲ್ಲನ್ನು ತಡೆಗಟ್ಟುವ ವಿಧಾನವನ್ನು ಕಂಡುಹಿಡಿದಿದ್ದಾರೆ.

ಅವರ ಪ್ರಕಾರ ಬೇಸಿಗೆಯಲ್ಲಿ ಜೀರಿಗೆ ಗಿಡದ ಕಡ್ಡಿಗಳನ್ನು ಹೊಲಗಳಲ್ಲಿ ಹರಡಬೇಕು. ಮಳೆಗಾಲದಲ್ಲಿ ಮಳೆನೀರು ಈ ಕಡ್ಡಿಗಳ ಮೂಲಕವೇ ಇಳಿದು ಮಣ್ಣನ್ನು ಸೇರುತ್ತದೆ. ಹೀಗೆ ಮಣ್ಣನ್ನು ಸೇರಿದ ನೀರು ಗರಿಕೆ ಹುಲ್ಲು ಬೆಳೆಯುವುದನ್ನು ತಡೆಗಟ್ಟುತ್ತದೆ. ಜೀರಿಗೆ ಕಡ್ಡಿಗಳು ಕೊಳೆತು ಮಣ್ಣಾಗಲು ಒಂದು ವರ್ಷಕಾಲ ಬೇಕಾಗುತ್ತದೆ.

ಮೂಲ : ಹನಿಬೀ, ಸಂಪುಟ 7(4) , 1996

ಬೆಳೆಗಳಿಗೆ ಬೀಳುವ ಹೇನಿನ ನಾಶಕ್ಕೆ

ಜನವರಿ ತಿಂಗಳಲ್ಲಿ ಹಿಪ್ಪೆ ಹೂ ಬೀಳಲು ಪ್ರಾರಂಭಿಸುತ್ತದೆ. ಈ ಹೂಗಳನ್ನು ಶೇಖರಿಸಿ ನೆರಳಿನಲ್ಲಿ ಒಣಗಿಸಿ ಅದರ ಕಷಾಯವನ್ನು ದ್ವಿದಳ ಧಾನ್ಯದ ಬೆಳೆಗೆ, ನಿಂಬೆ ಗಿಡಕ್ಕೆ, ಕಲ್ಲಂಗಡಿಕಾಯಿಗಳ ಮೇಲು ಭಾಗದ ತೊಗಟೆಗೆ ತಗಲುವ ಕೀಟಗಳಿಗೆ ಸಿಂಪಡಿಸಿದರೆ ಸಂಪೂರ್ಣ ಹತೋಟಿಗೆ ಬರುತ್ತದೆ. ಏಪ್ರಿಲ್ ತಿಂಗಳಲ್ಲಿ ದೊರೆಯುವ ಹೊಂಗೆ ಹೂಗಳ ಕಷಾಯವನ್ನು ಬಳಸಬಹುದು.

ಇಲಿಗಳನ್ನು ಓಡಿಸಲು

ಬೋನಿನ ಸಹಾಯದಿಂದ ಒಂದು ಇಲಿಯನ್ನು ಹಿಡಿದು ಅದರ ಮುಂಭಾಗದ ಕಾಲುಗಳ ಹಿಂಭಾಗಕ್ಕೆ ಮೃದುವಾದ ತಂತಿಯ ಸಹಾಯದಿಂದ ಸಣ್ಣ ಗೆಜ್ಜೆಯನ್ನು ಕಟ್ಟಿ ಬಿಟ್ಟರೆ, ಅದರ ಓಡಾಟದಿಂದ ಬರುವ ಗೆಜ್ಜೆಯ ಶಬ್ದಕ್ಕೆ ಎಲ್ಲಾ ಇಲಿಗಳು ಓಡಿಹೋಗುತ್ತವೆ. ಅವುಗಳನ್ನು ಈ ಇಲಿಯೂ ಹಿಂಬಾಲಿಸುತ್ತದೆ.

ಬಿ.ಬಸವರಾಜು, ಸಂಕೇಶಿವರ, ಹಾಸನ ಜಿಲ್ಲೆ

ಮಹಾರಾಷ್ಟ್ರದ ಸಮಾಜಕಾರ್ಯಕರ್ತ ಶ್ರೀ ಭಾಸ್ಕರ ಸಾವೆಯವರು ತೆಂಗಿನ ತೋಟದಲ್ಲಿ ಇಲಿಗಳ ಕಾಟ ತಡೆಯಲು ಅದರ ವೈರಿ ಬೆಕ್ಕಿನ ಮಲವನ್ನು ಸ್ವಲ್ಪ ಮರದ ಸುತ್ತ ಹಾಕುವರಂತೆ. ಯಾವುದೇ ಪ್ರಾಣಿಗಳು ಅವುಗಳ ವೈರಿಯ ಮಲದವಾಸನೆ ಬೇಗ ಗುರುತಿಸಿ, ಅದರಿಂದ ಅವುಗಳ ವೈರಿಯೇ ಅಲ್ಲಿರಬಹುದೆಂದು ಹೆದರಿ ಹತ್ತಿರವೂ ಸುಳಿಯಲಾರವಂತೆ. ಹಾಗಾಗಿಯೇ, ಈ ಸುಳಿವನ್ನು ಮುಚ್ಚಿಹಾಕಲು ಬೆಕ್ಕುಗಳು ತಮ್ಮ ಮಲವನ್ನು ಮಣ್ಣಿನಲ್ಲಿ ಹೂತಿಡುವುದು ಎಂಬುದು ನಮ್ಮ ಸಾವಯವ ಕೃಷಿಕ ನಾರಾಯಣ ರೆಡ್ಡಿಯವರ ಅನಿಸಿಕೆ.

ರೋಹಿಣಿ ರೆಡ್ಡಿ, SAARRA, ಬೆಂಗಳೂರು

150 ಗ್ರಾಂ.ನಷ್ಟು ಕಪ್ಪೆ ಚಿಪ್ಪನ್ನು ಪುಡಿಮಾಡಿ, ನೀರಲ್ಲಿ ಕುದಿಸಿ ಬಾಳೆಗುಂಡಿಗೆ ಹಾಕಿದರೆ ಬಾಳೆಗಿಡದ ಕಾಂಡಕ್ಕೆ ಹಾನಿಯುಂಟುಮಾಡುವ ಕ್ರಿಮಿಕೀಟಗಳನ್ನು ನಾಶಪಡಿಸುತ್ತದೆ ಎಂಬುದನ್ನು ಪ್ರಯೋಗ ಮಾಡಿ ನೋಡಿದವರು ಕನ್ಯಾಕುಮಾರಿ ಜಿಲ್ಲೆಯ ಶ್ರೀ ಮೇಲುಮುದಲಿಯೂರ್‌ರವರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮಳೆಯು ಅಧಿಕವಾಗಿದ್ದು ಅಲ್ಲಿನ ತೇವಾಂಶದಿಂದಾಗಿ ಬೆಳೆಯ ಸಂರಕ್ಷಣೆ ಹಾಗೂ ಬೇಳೆಕಾಳುಗಳ ಸಂಗ್ರಹಣೆ ಬಹಳ ಕಷ್ಟ. ಇಂತಹ ಸಂದರ್ಭದಲ್ಲಿ 'ರೈತರು ಧಾನ್ಯದ ಸಂರಕ್ಷಣೆಗೆ ಪಾಲಿಸುತ್ತಾ ಬಂದಿರುವ ಕೆಲವು ವಿಧಾನಗಳನ್ನು ಇಲ್ಲಿ ಪ್ರಕಟಿಸಲಾಗಿದೆ. ಇದನ್ನು ಸಂಗ್ರಹಿಸಿದವರು

ಎ. ಬೀಮಪ್ಪ ಮತ್ತು ಎಂ.ಎಂ.ಹೊಸಮನಿ
ಪ್ರಾದೇಶಿಕ ಪ್ರಯೋಗ ಕೇಂದ್ರ,
ಕೃಷಿ ವಿ.ವಿ. ನಿಲಯ, ರಾಯಚೂರು


ಧಾನ್ಯಸಂಗ್ರಹಣೆಯಲ್ಲಿ ಬೀಳುವ ಕ್ರಿಮಿ ಕೀಟಗಳ ನಾಶಕ್ಕೆ

ಬೆಳೆದ ತೆನೆಯನ್ನು ಚೆನ್ನಾಗಿ ಬಡಿದನಂತರ ಅದನ್ನು ಮೂರು ದಿನ ಭೂಮಿಯಲ್ಲೆ ಬಿಡುತ್ತಾರೆ. ಅನಂತರ ಅದನ್ನು ಮತ್ತೆ ಬಡಿದು ಬತ್ತವನ್ನು ಶೋಧಿಸದೆ ಗೋಣಿಚೀಲಗಳಲ್ಲಿ ಅಥವಾ ಹುಲ್ಲಲ್ಲಿ ಕಟ್ಟಿ ಸಂಗ್ರಹಿಸುತ್ತಾರೆ. ಒಂದು ತಿಂಗಳ ನಂತರ (ಶಿವರಾತ್ರಿಯ ಸಮಯದಲ್ಲಿ) ಅದನ್ನು ಹೊರ ತೆಗೆದು 3, 5 ಅಥವಾ 7 ದಿನಗಳವರೆಗೆ ಹಗಲೂ ರಾತ್ರಿ ಬಿಸಿಲಿನಲ್ಲಿ ಒಣಗಿಸುತ್ತಾರೆ. ನಂತರ ಅದನ್ನು ಶೋಧಿಸಿ, ಸ್ವಚ್ಛಮಾಡಿ ನೆಕ್ಕಿ ಅಥವಾ ನೆಕ್ಕಿಲಿ *(Vitex negundo)* ಗಿಡದ ಎಲೆಯ ಪುಡಿಯೊಂದಿಗೆ ಗೋಣಿ ಚೀಲಗಳಲ್ಲಿ ತುಂಬಿ ಗೋಣಿಚೀಲದ ಬಾಯಿಯನ್ನು ಹುಲ್ಲಿನಿಂದ ಕಟ್ಟುತ್ತಾರೆ. ನೆಕ್ಕಿ ಗಿಡದ ಪುಡಿಯನ್ನು ಬತ್ತದೊಂದಿಗೆ ಬೆರೆಸುವಾಗ 15:1 ಅಥವಾ 20:1 ಪ್ರಮಾಣದಲ್ಲಿ ಬೆರೆಸ ಲಾಗುತ್ತದೆ.

ಮಾಸ್ತಿ ಅವಂತಿ ಗೋಯಂಕರ್, ಮನ್ನು ಬಾಬಾ ಪಡತ್ತಿ ಮತ್ತು ಸುರೇಶ ಶಂಕರಗೌಡ ಬೇಲಂಪುರ

ತೇವಾಂಶವನ್ನು ದೂರವಿಡಲು ಗೇರು

ಬೇಳೆಕಾಳುಗಳನ್ನು ಬಿಸಿಲಿನಲ್ಲಿ 4 ರಿಂದ 5 (ಹಗಲು ಮತ್ತು ರಾತ್ರಿ) ದಿನಗಳವರೆಗೆ ಒಣಗಿಸಿದ ನಂತರ ಅದರ ಜೊತೆ ಬಿಡಿಸಿದ ಗೇರಿನ *(Anacardium occidentale)* ಹೊರಗಿನ ಸಿಪ್ಪೆಯನ್ನು ಬೆರೆಸಿ ನಂತರ ಆ ಚೀಲಗಳನ್ನು ಹುಲ್ಲಿನಿಂದ ಕಟ್ಟಲಾಗುತ್ತದೆ. ಗೇರು ಬೀಜದ ಸಿಪ್ಪೆಯಲ್ಲಿರುವ ಎಣ್ಣೆಯ ಪದಾರ್ಥಕ್ಕೆ ಕಾವನ್ನು ಉಳಿಸಿಕೊಳ್ಳುವ ಮತ್ತು ತೀಕ್ಷ್ಣವಾದ ಗುಣವಿರುವುದರಿಂದ ಅದು ಕೀಟಗಳನ್ನು ದೂರವಿಡುತ್ತದೆ. ಕೆಲವು ರೈತರು ಇದರೊಂದಿಗೆ ಬೂದಿಯನ್ನು ಬೆರೆಸುತ್ತಾರೆ.



ಶ್ರೀ ಪಾಂಡುರಂಗ ಲಕ್ಷ್ಮಣನಾಯಕ್ ಮತ್ತು ಮಾಸ್ತಿ ಅವಂತಿ ಗೋಯಂಕರ್, ಬೆಲಹಳ್ಳಿ, ಅಂಕೋಲ.

ಬೇಳೆಕಾಳುಗಳನ್ನು ಸರಿಯಾಗಿ ಒಣಗಿಸಿದ ನಂತರ ನುಗ್ಗೆ ಮರದ (*Moringa petrigosperma*) ಸೊಪ್ಪನ್ನು ಅದರ ಜೊತೆ ಸೇರಿಸಿ ಗೋಣಿ ಚೀಲಗಳಲ್ಲಿ ತುಂಬಿ ಹುಲ್ಲಿನಿಂದ ಕಟ್ಟಿಡಲಾಗುತ್ತದೆ. ಇದರಿಂದಲೂ ಧಾನ್ಯ ರಕ್ಷಣೆ ಯಾಗುವುದಂತೆ.

ಗೆದ್ದಲಿನಿಂದ ಸಂರಕ್ಷಣೆ

ಕಬ್ಬಿನ ಗದ್ದೆಗಳಲ್ಲಿ ಕಾಣಿಸಿಕೊಳ್ಳುವಂತಹ ಗೆದ್ದಲು ಮತ್ತು ಇತರ ಮಣ್ಣಿನ ಕೀಟಗಳನ್ನು ನಾಶಪಡಿಸಲು ಒಣಗಿದ ಸಗಣಿ ಮತ್ತು ಬೆಳೆಯ ನಂತರ ಉಳಿದ ಕೆಲವು ಹುಲ್ಲಿನೊಂದಿಗೆ ಕಬ್ಬಿನ ಗಿಡಗಳನ್ನು ನೆಡಲು ತೆಗೆದ ಗುಂಡಿಗಳಲ್ಲಿ ಸುಡಲಾಗುವುದು. ನಂತರ ಈ ಗುಂಡಿಗಳಲ್ಲಿ ಕಬ್ಬಿನ ಕಡ್ಡಿಗಳನ್ನು ನೆಡಲಾಗುವುದು.

ದೇವುರುಕಗೌಡ, ಕಿನಿ ಹಳ್ಳಿ, ರಾಯಚೂರು ಜಿಲ್ಲೆ

ಬೆಳೆಗಳ ಕೀಟಗಳನ್ನು ಕಡಿಮೆ ಮಾಡಲು

ಬತ್ತದ ಹೊಟ್ಟನ್ನು ರಾತ್ರಿಯ ಹೊತ್ತು ಹೊಲದಲ್ಲಿ ಸುಡುವಾಗ ಅದರಿಂದ ಬರುವ ಬೆಳಕಿಗೆ ಕೀಟಗಳು ಆಕರ್ಷಣೆ ಹೊಂದಿ ಅದರ ಬಳಿ ಹೋಗುತ್ತಿದ್ದಂತೆಯೇ ಸತ್ತು ಬೀಳುತ್ತವೆ. ಕರಂಡೆ (Spaeranthus indicus) ಗಿಡಗಳನ್ನು ಪೈರನ್ನು ಕೀಟಗಳಿಂದ ರಕ್ಷಿಸಲು ಬಳಸಲಾಗುತ್ತದೆ. ಕರಂಡೆ ಗಿಡದ ಎಲೆಗಳನ್ನು ಹೊಲಗಳಲ್ಲಿ ಹರಡಲಾಗುತ್ತದೆ. ಈ ಎಲೆಗಳಿಂದ ಹೊರ ಹೊಮ್ಮುವ ವಿಶಿಷ್ಟ ರೀತಿಯ ಸುವಾಸನೆಯು ಕ್ರಿಮಿಕೀಟಗಳನ್ನು ಪೈರಿನಿಂದ ದೂರ ಇಡಲು ಸಹಾಯವಾಗುತ್ತದೆ. ಮುಖ್ಯವಾಗಿ ಎಲೆಗಳನ್ನು ತಿನ್ನುವ ಕೀಟಗಳು ಮತ್ತು ಮಿಡತೆಯನ್ನು ದೂರವಿಡುತ್ತದೆ.

ಶ್ರೀ ಮಹದೇವ ಶೇಶುನಾಯಕ್ ಮತ್ತು
ಶ್ರೀ ತೆಕುಗಾರು ನಾಯಕ್, ಬಾವಿಕೆರೆ ಹಳ್ಳಿ,
ಅಂಕೋಲ ತಾಲ್ಲೂಕು

ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ಬಳಸಬಯಸುವ ರೈತರು ಮೊದಲು ಅವನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವವನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.

ಸಂಪಾದಕ

ದೇಶೀಯ ಬೇಸಾಯ ಕ್ರಮಗಳು

ಕಡಲೆಕಾಯಿ ಜೊತೆಗೆ ಕರ್ಪೂರ

ಕಡಲೆಕಾಯಿಯನ್ನು 6-7 ತಿಂಗಳ ಕಾಲ ಸಂಗ್ರಹಿಸಿಡಲು ಕರ್ಪೂರವನ್ನು (Camphor) ಬಳಸಲಾಗುವುದು. ಚೆನ್ನಾಗಿ ಒಣಗಿದ ಕಡಲೆಕಾಯಿಗಳನ್ನು ಪಾಲಿಥಿನ್‌ನಂತಹ ಒಳ ಅರಿವೆ ಇರುವ ಗೋಣಿ ಚೀಲಗಳಲ್ಲಿ ಒಂದು ಅಡಿಯಷ್ಟು ಎತ್ತರಕ್ಕೆ ತುಂಬಿ ಅದರ ಮೇಲೆ 8-10 ಕರ್ಪೂರದ ಚೂರುಗಳನ್ನು ಹಾಕಿ ಕಡಲೆಕಾಯಿಯನ್ನು ತುಂಬುತ್ತಾರೆ. ಹೀಗೆ ಆ ಚೀಲವನ್ನು ಪೂರ್ತಿಯಾಗಿ ತುಂಬಿದ ನಂತರ ಅದರ ಬಾಯಿಯನ್ನು ಗಟ್ಟಿಯಾಗಿ ಕಟ್ಟಲಾಗುತ್ತದೆ. ಈ ಚೀಲಗಳನ್ನು ನೀರಿನಾಂಶ ಇಲ್ಲದ ಜಾಗದಲ್ಲಿ ಇಡುತ್ತಾರೆ. ಈ ಕಾರ್ಯವನ್ನು ಮಳೆಗಾಲ ಆರಂಭವಾಗುವ ಮೊದಲೇ ಮುಗಿಸಬೇಕಾಗುತ್ತದೆ. ಇದೇ ವಿಧಾನವನ್ನು ಬೇರೆ ಬೇರೆ ಕಾಳುಗಳನ್ನು ಸಂಗ್ರಹಿಸಿಡಲು ಬಳಸುತ್ತಾರೆ.

ಅಮ್ದಳ್ಳಿ ಹಳ್ಳಿಯ ರೈತರು, ಕಾರವಾರ ತಾಲ್ಲೂಕು.

ಕರಿಬೇವಿನ ಎಲೆಯ ಸುಗಂಧ ಹೆಚ್ಚಿಸಲು

ಸುಮಾರು 1.5 ಲೀ ನಷ್ಟು ಮಜ್ಜಿಗೆಯನ್ನು ಕರಿಬೇವಿನ ಗಿಡದ ಕಾಂಡಗಳಿಗೆ ಸುರಿಯಬೇಕು. ಇದನ್ನು ವಾರಕ್ಕೆ ಒಂದು ಬಾರಿ ಮಾಡಿದರೆ ಕರಿಬೇವಿನ ಎಲೆಗಳ ಪರಿಮಳ ಹೆಚ್ಚಾಗುತ್ತದೆ ಎಂದು ಕನ್ಯಾಕುಮಾರಿ ಜಿಲ್ಲೆಯ ಶ್ರೀ ವೇಲು ಮುದಲಿಯರ್ ಹೇಳುತ್ತಾರೆ.

ಬಾಳೆ ಹಣ್ಣಿನ ಗಾತ್ರ ಹೆಚ್ಚಿಸಲು

ಬಾಳೆ ಗೊನೆ ಹಾಕುವ ಸಂದರ್ಭದಲ್ಲಿ ಅಂದರೆ ಹೂ ಆಗಿ ಕಾಯಿಬಿಡುವ ಸಂದರ್ಭದಲ್ಲಿ ಹೂವನ್ನು ಮುರಿದು ತೆಗೆಯಬೇಕು. ಹೂ ಇದ್ದ ಜಾಗದಿಂದ ರಸವನ್ನು ತಡೆಗಟ್ಟಲು ಒಂದು ಪಾಲಿಥಿನ್ ಚೀಲದಲ್ಲಿ 50 ಗ್ರಾಂ ನಷ್ಟು ಬೂದಿಯನ್ನು ನೀರು ಅಥವಾ ರಸಗೊಬ್ಬರದ ಜೊತೆ ಬೆರೆಸಿ ಬಾಳೆ ಗೊನೆಯ ತುದಿಗೆ ಅಂದರೆ ರಸ ತೊಟ್ಟಿಕ್ಕುವ ಜಾಗಕ್ಕೆ ನೇತು ಹಾಕಬೇಕು. ಇದರಿಂದ ಬಾಳೆ ಕಾಯಿಗಳು ದೊಡ್ಡ ಗಾತ್ರದಲ್ಲಿ ಬೆಳೆಯುತ್ತವೆ. ಒಂದು ತಿಂಗಳ ಬಳಿಕ ಕಾಯಿ ಬಲಿತ ಮೇಲೆ ರೈತರು ಅದರ ಮೇಲೆ ಸಣ್ಣ ಕೆರೆಗಳಲ್ಲಿ ಅಥವಾ ಹಳ್ಳಗಳಲ್ಲಿ ಸಿಗುವ ಪಾಚಿ(Algae)ಯನ್ನು ಕಾಯಿಗಳ ಮೇಲೆ ಹಚ್ಚುವುದರಿಂದ ಕಾಯಿಯು ಒಳ್ಳೆಯ ಬಣ್ಣದಿಂದ ಕಂಗೊಳಿಸುತ್ತದೆ.

ಸಮಂಜಸ ಜೊತೆಗಾರರು

ಹಿಪ್ಪುನೇರಳೆ ಕಡ್ಡಿಗಳನ್ನು ಕೊತ್ತಂಬರಿ ಗಿಡದೊಂದಿಗೆ ಬೆಳೆಯುವುದರಿಂದ ಹಿಪ್ಪುನೇರಳೆ ಗಿಡದ ಎಲೆಗಳು ಚೆನ್ನಾಗಿ ಬೆಳೆದು ಉದ್ಯಮದಲ್ಲಿ ರೇಶಿಮೆ ಗೂಡಿನ ಉತ್ಪತ್ತಿ ಹೆಚ್ಚುತ್ತದೆ. ಇದು ಕರ್ನಾಟಕ ಹಿಪ್ಪುನೇರಳೆ ಬೆಳೆಗಾರರ ಅನುಭವದಿಂದ ತಿಳಿದು ಬಂದಿದೆ.

ಮೂಲ : ಹನಿಬೀ, ಸಂಪುಟ 7(4),1996

ಮಾವನ್ನು ಹಣ್ಣಾಗಿಸುವ ವಿಧಾನ

ಮಾವಿನ ಕಾಯಿಯನ್ನೇ ಕೊಯಿದು ಒಂದು ಬುಟ್ಟಿಯಲ್ಲಿ ಮೊದಲು ಕಕ್ಕೆಗಿಡದ ಎಲೆಗಳನ್ನು ಹಾಕಿ ಅದರ ಮೇಲೆ ಮಾವಿನ ಕಾಯಿಗಳನ್ನು ಇಡಬೇಕು. ಇದಾದಮೇಲೆ ಮತ್ತೆ ಕಕ್ಕೆಗಿಡದ ಎಲೆಗಳಿಂದ ಕಾಯಿಗಳನ್ನು ಮೇಲಿನಿಂದ ಮುಚ್ಚಬೇಕು. ಸಾಮಾನ್ಯವಾಗಿ ಪದರುಗಳಲ್ಲಿ ಮೇಲೆ ಮತ್ತು ಕೆಳಗೆ ಕಕ್ಕೆ ಗಿಡದ ಎಲೆಗಳನ್ನು ಹಾಸುತ್ತಾರೆ. ಇದರಿಂದ ಮಾವಿನ ಕಾಯಿ ಬೇಗ ಹಣ್ಣಾಗುವುದೆಂದು ರಾಜಸ್ಥಾನದ ಉದಯಪುರ್ ಜಿಲ್ಲೆಯ ಅರಣ್ಯ ಅಧಿಕಾರಿಯೊಬ್ಬರು ಹೇಳುತ್ತಾರೆ.

ಮೂಲ : ಹನಿಬೀ ಸಂಪುಟ 7(3), 1996

ಅನುವಾದ : ವೀಣಾ ಎಂ.ಎಸ್.

ಯಾವುದೇ ಗಿಡಗಳ ಬೆಳವಣಿಗೆಗೆ

ರಸ್ತೆ ಬದಿಯಲ್ಲಿ ದೊರೆಯುವ ಆಲದ ಅಥವಾ ಗೋಣಿ ಹಣ್ಣುಗಳನ್ನು ಒಂದು ವಾರದವರೆಗೆ ನೀರಿನಲ್ಲಿ ಕಿವುಚಿ ಶೇಖರಿಸಿದ ಕಷಾಯವನ್ನು ಗಿಡಗಳಿಗೆ ಉಣಬಡಿಸಿದರೆ ಬೆಳವಣಿಗೆಯಲ್ಲಿ ಸೊಬಗನ್ನು ಕಾಣಬಹುದು.

ಬಿ. ಬಸವರಾಜು, ಸಂಕೇಶಿವರ, ಹಾಸನ ಜಿಲ್ಲೆ

ವಿಶೇಷ ಸೂಚನೆ

ಹಿತ್ತಲಗಿಡದಲ್ಲಿ ದಾಖಲಿಸಿರುವ ಯಾವುದೇ ಮಾಹಿತಿ, ತಂತ್ರಜ್ಞಾನ ಮತ್ತು ವಿಚಾರಗಳನ್ನು ವಾಣಿಜ್ಯ ದೃಷ್ಟಿಯಿಂದ ಉಪಯೋಗಿಸುವವರು, ಮೊದಲು ಅದನ್ನು ಹಿತ್ತಲಗಿಡದ ಮತ್ತು ಅದರ ಮೂಲ ವ್ಯಕ್ತಿಗಳು, ಸಮುದಾಯದ ಗಮನಕ್ಕೆ ತರಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

ಸಂಪಾದಕ

ಕರ್ನಾಟಕದ ಇಬ್ಬರು ಸಾವಯವ ಕೃಷಿ ಋಷಿಗಳು

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ

ಶ್ರೀ ಕುರುವಳ್ಳಿ ಪುರುಷೋತ್ತಮರಾಯರು ಮತ್ತು ಶ್ರೀ ಸೋರ ಹುಣಸೆ ನಾರಾಯಣರೆಡ್ಡಿ, ಈ ಇಬ್ಬರು ರೈತರ ಹೆಸರು ಕೇಳಿದೊಡನೆ ಇಂದು ಸಾವಯವ, ಪರ್ಯಾಯ ಕೃಷಿ ಬಗ್ಗೆ ಯೋಚಿಸುವವರಿಗೆಲ್ಲಾ ಅಪಾರ ಗೌರವ, ಭರವಸೆ ಹುಟ್ಟಿಸುವಂತಾದರೆ, ಕೃಷಿ ವಿಜ್ಞಾನಿಗಳಿಗೆ ಸಣ್ಣಗೆ ನಡುಕು ಬರುವಂತಾಗುತ್ತದೆ. ಇವರ ಸಾವಯವ ಕೃಷಿ ಪ್ರಯೋಗ ಇಂದು ದೇಶಾದ್ಯಂತ ಅಸಂಖ್ಯಾತ ರೈತರನ್ನು, ಕೃಷಿ ವಿದ್ಯಾರ್ಥಿಗಳು, ಯುವಕರು ಅಷ್ಟೇಕೆ ಸರ್ಕಾರಿ ಸ್ವಾಮ್ಯದ ಕೃಷಿ ಇಲಾಖೆ, ತೋಟಗಾರಿಕಾ ಇಲಾಖಾ ಅಧಿಕಾರಿಗಳಿಂದ, ವಿದೇಶಿ ವಿಜ್ಞಾನಿಗಳವರೆಗೆ ಆಸಕ್ತಿ ಕೆರಳಿಸಿ, ಪರೀಕ್ಷಿಸುವಂತೆ ಮಾಡಿರುತ್ತದೆ. ಕರ್ನಾಟಕದ ಎರಡು ಮೂಲೆಗಳಿಂದ, ವಿಭಿನ್ನ ಹಿನ್ನೆಲೆಯಲ್ಲಿ ನಡೆಯುತ್ತಿರುವ ಈ ಈರ್ವರು ಕೃಷಿ ಋಷಿಗಳ ಪ್ರಯೋಗದ ಬಗೆಗಿನ ತುಲನಾತ್ಮಕ ವರದಿಯನ್ನು ಈ ಮುಂದೆ ನೀಡಲಾಗಿದೆ.

ಪುರುಷೋತ್ತಮರಾಯರು ಸುಮಾರು 64 ವಯಸ್ಸು ಕಾಲೇಜು ಪದವೀಧರರು, ಶ್ರೀ ರಾಯರ "ಕೃಷಿನಿವಾಸ" ಶಿವಮೊಗ್ಗೆಯ ತೀರ್ಥಹಳ್ಳಿ ಪಟ್ಟಣದ ಹೊರವಲಯದಲ್ಲಿ ತುಂಗಾನದಿಯ ಐತಿಹಾಸಿಕ "ಕಮಾನುಸೇತುವೆ" ಬುಡದಲ್ಲೇ ಕುರುವಳಿಯಲ್ಲಿರುತ್ತದೆ.

ನಾರಾಯಣರೆಡ್ಡಿಯವರು ಸುಮಾರು 63 ವರ್ಷ, ಇಂಟರ್‌ಮಿಡಿಯೇಟ್ ಪಧವೀದರರು. ಬೆಂಗಳೂರು ದಕ್ಷಿಣ ತಾಲೋಕಿನ, ವರ್ತೂರು ಗ್ರಾಮದ ಸಮೀಪದ ಸೋರಹುಣಸೆಯಲ್ಲಿ ನಾರಾಯಣ ರೆಡ್ಡಿಯವರ ಮೂಲ ವ್ಯವಸಾಯ ಕ್ಷೇತ್ರವಿದ್ದು, ಈಗ ದೊಡ್ಡಬಳ್ಳಾಪುರದ ಸಮೀಪದ ಹಳ್ಳಿ ಒಂದಕ್ಕೆ ತಮ್ಮ ಪ್ರಯೋಗವನ್ನು ಸ್ಥಳಾಂತರಿಸುವ ಯೋಚನೆಯಲ್ಲಿರುವರು.

ಸಾವಯವ ಕೃಷಿಯತ್ತ ಒಲವು

ರಾಯರಿಗೆ ಸುಮಾರು 1988 ರ ಸಮಯದಲ್ಲಿ, ರಾಸಾಯನಿಕ ಗೊಬ್ಬರಗಳ ಅತಿ ಬಳಕೆಯಿಂದ ಸೊಕ್ಕಿದ ಅಡಿಕೆ ಮರಗಳು ಬಿರುಗಾಳಿಗೆ ಸಿಕ್ಕಿ ಸಂಪೂರ್ಣ ಧ್ವಂಸವಾದಾಗ, ಸಾವಯವ ಕೃಷಿ ಪ್ರವರ್ತಕ ದಾರವಾಡದ ಶ್ರೀ ಪ್ರದೀಪ್ ತಪಸ್‌ರಿಂದ ಈ ಬಗ್ಗೆ ಪರಿಚಯ ಮತ್ತು ಪ್ರೇರಣೆ ದೊರೆಯಿತು.

ರೆಡ್ಡಿಯವರು 1977-78ರ ಸಮಯದಲ್ಲಿ ಬೆಳೆದ ಕೋಸು ತರಕಾರಿ ಬೆಳೆಗೆ ರಾಸಾಯನಿಕಗಳು ಅತಿಯಾದ್ದರಿಂದ ಬಳಸಿಕೊಳ್ಳುವವರೇ ಇಲ್ಲವಾಗಿ, ಮಧ್ಯವರ್ತಿಗಳ ಅಡ್ನಾದಿಡ್ಡಿ ಬೆಲೆಗೆ ರೋಷಗೊಂಡು, ಪೂರ್ತಿ ಬೆಳೆಯನ್ನು ಗದ್ದೆಯಲ್ಲೇ ಕೊಚ್ಚಿ, ಭೂಮಿಗೆ ಸೇರಿಸುವಂತಾಯ್ತು. ಇದು ಮುಂದೆ ರಾಸಾಯನಿಕ ರಹಿತ, ವೈವಿಧ್ಯ ಬೆಳೆಗಳ ಸಾವಯವ ಬೇಸಾಯಕ್ಕೆ ಹಾದಿಯಾಯ್ತು. ನಂತರ ಅಮೇರಿಕಾದಿಂದ, ಹತ್ತಿರದ ವೈಟ್‌ಫೀಲ್ಡ್‌ನ ಸಾಯಿಬಾಬ ಕೇಂದ್ರಕ್ಕೆ ಬಂದಿದ್ದ ಸಾವಯವ ಪಂಡಿತನೊಬ್ಬನಿಂದ ಮಾರ್ಗದರ್ಶನ ಸಹಾಯಗಳೆಲ್ಲಾ ದೊರೆತು, ಸಾವಯವ ಕೃಷಿಯಲ್ಲಿ ಸಂಪೂರ್ಣ ತೊಡಗಿಕೊಳ್ಳುವಂತಾಯ್ತು.

ಪುರುಷೋತ್ತಮ ರಾಯರು : ನದಿ ನೀರಾವರಿ

ಭಾಗ	*ಬೆಳೆಗಳು*	*ವಿಸ್ತೀರ್ಣ (ಎಕರೆ)*
1.	ಹೂವು + ತರಕಾರಿ + ದನದಕೊಟ್ಟಿಗೆ + ಗೊಬ್ಬರದ ಗುಂಡಿ	0.50
2.	ಅಡಿಕೆ + ತೆಂಗು + ವೆನಿಲಾ + ಕಾಳು ಮೆಣಸು	2.00
3.	ತೆಂಗು + ಕಾಫಿ + ವೆನಿಲಾ + ಬಾಳೆ	2.50
4.	ಹಿಪ್ಪುನೇರಳೆ + ವೆನಿಲಾ + ಗ್ಲಿರಿಸೀಡಿಯ	0.50
5.	ತೆಂಗು + ಏಲಕ್ಕಿ + ವೆನಿಲಾ + ಒಕ್ಕುವ ಜಾಗ	0.50
6.	ಮಳೆ ಆಶ್ರಯದ ಬತ್ತ	4.00
	ಒಟ್ಟು	***10.00***

ನಾರಾಯಣ ರೆಡ್ಡಿ : ಕೊಳವೆ ಬಾವಿ ನೀರಾವರಿ

ಭಾಗ	*ಬೆಳೆಗಳು*	*ವಿಸ್ತೀರ್ಣ (ಎಕರೆ)*
1.	ತೆಂಗು + ಸಪೋಟಗಳ + ಮಧ್ಯದಲ್ಲಿ ಅವರೆ	1-50
2.	ತೆಂಗು + ಕಾಫಿ + ಕರಿಬೇವು	1-50
3.	ತೆಂಗು + ಅವೆಕಾಡೊ (ಬೆಣ್ಣೆ ಹಣ್ಣು) + ತೇಗ (ಅಂಚಿನಲ್ಲಿ)	1-50
4.	ಸೀಬೆ + ತೆಂಗು (ಅಂಚಿನಲ್ಲಿ)	1-50
5.	ತೇಗ + ಬಾಳೆ + ಹುಲ್ಲು + ಸುಬಾಬುಲ್ (ಅಂಚಿನಲ್ಲಿ)	0-75
6.	ರಾಗಿ + ಅವರೆ + ಹುಲ್ಲು + ಸುಬಾಬುಲ್ (ಅಂಚಿನಲ್ಲಿ)	1-50
7.	ಹಿಪ್ಪುನೇರಳೆ + ತೇಗ + ಹುಲ್ಲು + ಸುಬಾಬುಲ್ (ಅಂಚಿನಲ್ಲಿ)	1-50
8.	ಹಿಪ್ಪುನೇರಳೆ + ತೇಗ + ಪುಷ್ಪಗಳು (ಸೇವಂತಿಗೆ , ಜರಬೆರಾ)	2-00
9.	ಬತ್ತ	0.25
	ಒಟ್ಟು	***12-00***

ಬೆಳೆ ವೈವಿಧ್ಯತೆ

ಈ ವಿಚಾರದಲ್ಲಿ ಈ ಇಬ್ಬರು ರೈತರು ಅಪಾರ ಯಶಸ್ಸನ್ನು ಸಾದಿಸಿದ್ದು, ವಿವಿಧ ಹಂತದಲ್ಲಿ ಮಣ್ಣಿನ ಫಲವತ್ತತೆಯನ್ನು ಬಳಸುವ ವಿವಿಧ ಮಟ್ಟದಲ್ಲಿ ನೆರಳಿಗೆ ಹೊಂದಿಕೊಳ್ಳುವ ಬೆಳೆ ವೈವಿಧ್ಯತೆ ಮುಂದುವರಿಸಿಕೊಂಡು ಬಂದಿರುವರು. ಪ್ರತಿ ಪ್ಲಾಟ್‌ಗಳಲ್ಲೂ ಈ ಇಬ್ಬರೂ ರೈತರು ತೆಗೆಯುತ್ತಿರುವ ವಿವಿಧ ಬೆಳೆಗಳ ಪಟ್ಟಿಯನ್ನು ಮೇಲೆ ಕೊಡಲಾಗಿದೆ. ಯಾವ ಕೃಷಿ ಪಂಡಿತರೂ ಕಂಡು ಕೇಳರಿಯದಂತಹ ಬೆಳೆ ವೈವಿಧ್ಯತೆಯನ್ನು ನಾವಿಲ್ಲಿ ನೋಡಬಹುದಾಗಿದೆ. ಇಲ್ಲಿ ಯಾವುದು ಮುಖ್ಯ ಬೆಳೆ ಎಂದು ಹೇಳುವುದು ಅಸಾಧ್ಯ. ಒಟ್ಟಾರೆ, ಎಲ್ಲಾ ಬೆಳೆಗಳಿಂದ ಸುಸ್ಥಿರ ಉತ್ಪಾದನೆ ಪಡೆಯುವಲ್ಲಿ ಇವರಿಬ್ಬರು ಪಡೆದ ಯಶಸ್ಸು ಮಾತ್ರ ಅಗಾಧವಾಗಿರುತ್ತದೆ.


ಸಾವಯವ ಗೊಬ್ಬರ ವಿಧಗಳು

ರಾಯರ "ಕೃಷಿ ನಿವಾಸ ಕುರುವಳ್ಳಿ ಕಂಪೋಸ್ಟ್" ಸಮತಟ್ಟಾಗಿದ್ದು, ಸ್ವಚ್ಛಗೊಳಿಸಿದ ನೆಲದ ಮೇಲೆ ನಾಲ್ಕಡಿ ಪದರಗಳಂತೆ ಈ ಮುಂದಿನ ವಸ್ತುಗಳ ರಾಶಿ ಹಾಕುವುದು.

ಮೊದಲ ಪದರ: ಒಣಗಿದ ಎಲೆ ಮತ್ತು ಕೃಷಿ ತ್ಯಾಜ್ಯ ವಸ್ತುಗಳು, ಎರಡನೇ ಪದರ: ಗೋಬರ್‌ಅನಿಲ ಸ್ಥಾವರದ ತ್ಯಾಜ್ಯ (Slurry) ಮೂರನೇ ಪದರ : ಕೋಳಿ ಗೊಬ್ಬರ, ನಾಲ್ಕನೇ ಪದರ : ಕಾಡಿನಿಂದ ತಂದ ಮಣ್ಣು, ಐದನೇ ಪದರ: ಸಕ್ಕರೆ ಕಾರ್ಖಾನೆ ತ್ಯಾಜ್ಯ (Press mud).

ಇದಕ್ಕೆ ದನದ ಮೂತ್ರ (ಗಂಜಳ), ಗೋಬರ್ ಅನಿಲದ ಜೊತೆ ಬರುವ ತ್ಯಾಜ್ಯಗಳನ್ನು ಸೇರಿಸಿದಷ್ಟೂ ಉತ್ತಮ. ಇದನ್ನು ಮಳೆಗಾಲ ಮುಗಿದ ನಂತರ, ಅಂದರೆ ಸೆಪ್ಟೆಂಬರ್ ನಂತರ ಕೈಗೊಳ್ಳಲಾಗುವುದು. ಈ ರಾಶಿಯನ್ನು ಒಣ ಸೊಪ್ಪು, ಎಲೆಗಳಿಂದ ಬಿಸಿಲು ಬೀಳದಂತೆ ಒಂದು ತಿಂಗಳು ಮುಚ್ಚಿಡಬೇಕು. ನಂತರ 100 ಲೀಟರ್ ಗೋ ಮೂತ್ರವನ್ನು 1500 ಲೀಟರ್ ನೀರಿನಲ್ಲಿ ಬೆರೆಸಿ, ರಾಶಿಯ ಸುತ್ತಲೂ ಸಿಂಪಡಿಸಬೇಕು. ನಂತರ ಇಡೀ ರಾಶಿಯನ್ನೇ ಅಗೆದು, ಮಿಶ್ರಣಮಾಡಿ ಒಣ ಕೃಷಿ ತ್ಯಾಜ್ಯ ವಸ್ತುಗಳಿಂದ ಮುಚ್ಚಿಡಬೇಕು. 45 ದಿನಗಳ ನಂತರ, 10 ಲೀಟರ್ ಹುಳಿ ಮಜ್ಜಿಗೆಗೆ, ಒಂದು ಲೀಟರ್‌ನಷ್ಟು ಜೇನುತುಪ್ಪ, 10 ಲೀಟರ್‌ನಷ್ಟು ಬೆಣ್ಣೆಯ ನೀರುಗಳನ್ನು 500 ಲೀಟರ್ ನೀರಿನಲ್ಲಿ ಮಿಶ್ರಮಾಡಿ, ರಾಶಿಗೆ ಚೆನ್ನಾಗಿ ಸಿಂಪಡಿಸಬೇಕು. ಇದು ಕಾಂಪೋಸ್ಟಿನೊಳಗಡೆ ಬ್ಯಾಕ್ಟೀರಿಯಾದ ಚಟುವಟಿಕೆಯನ್ನು ಉತ್ತಮಗೊಳಿಸಿ, ಅದು ಹದಗೊಳ್ಳಲು ಅನುಕೂಲ ಮಾಡಿಕೊಡುವುದಂತೆ. ಜೊತೆಗೆ, ದನ ಕರು ಹಾಕುವಾಗ ಬರುವ "ಜೀವಜಲ" ದ್ರಾವಣ (Omnoitic liquid) ನ್ನು ಸೇರಿಸಿದರಂತೂ, ಈ ಕಾಂಪೋಸ್ಟಿನೊಳಗೆ ಜೀವ ಚಟುವಟಿಕೆ ಚುರುಕಾಗುವುದಂತೆ. ಈ ರೀತಿ ತಯಾರಾದ ಕಾಂಪೋಸ್ಟ್ ಗೊಬ್ಬರವನ್ನು ಪ್ರತಿ ಅಡಿಕೆ ಮರಗಳಿಗೆ 10 ಕೆ.ಜಿ. ಯಷ್ಟು ಹಾಕಿ ಎಕರೆ ಒಂದಕ್ಕೆ 40 ಕ್ವಿಂಟಾಲ್‌ನಷ್ಟು ಅಡಿಕೆ ಪಡೆಯಬಲ್ಲೆ ಎಂಬ ವಿಶ್ವಾಸ ರಾಯರಿಗಿದೆ!

(ಆ) ಎರೆಜಲ (Earth werm cast liquid) ಭೂಮಟ್ಟದಿಂದ ನಾಲ್ಕು-ಐದು ಅಡಿ ಎತ್ತರದಲ್ಲಿ ಐದು ಅಡಿ ಉದ್ದ, ಎರಡುವರೆ ಅಡಿ ಅಗಲ ಮತ್ತು ಎರಡುವರೆ ಅಡಿ ಎತ್ತರದ ಸಿಮೆಂಟ್ ತೊಟ್ಟಿ ಒಂದನ್ನು ನಿರ್ಮಿಸಲಾಗಿದೆ. ಇದರೊಳಗೆ ಕೃಷಿ ತ್ಯಾಜ್ಯ ವಸ್ತುಗಳು, ಕೊಟ್ಟಿಗೆ ಗೊಬ್ಬರ, ಸಗಣಿ, ಆಹಾರ, ತರಕಾರಿ ತ್ಯಾಜ್ಯ ಪದಾರ್ಥಗಳೆಲ್ಲವನ್ನೂ ತುಂಬಲಾಗುವುದು. ಗಾಳಿ ಆಡಲು ಅನುಕೂಲವಾಗುವಂತೆ ತಳದಲ್ಲಿ ಹಂಚಿನ ಚೂರುಗಳನ್ನು ಇಡಬೇಕು. ನೀರು ಹೊರಬರಲು ತಳದಲ್ಲಿ ಒಂದು ಚಿಕ್ಕ ಪೈಪನ್ನು ಇಡಲಾಗಿದೆ.



ಈ ತೊಟ್ಟಿಗೆ ಅಲ್ಲಿ, ಇಲ್ಲಿ ಆರಿಸಿ ತೆಗೆದ ಸುಮಾರು 100 ನಾಟಿ ತಳಿ ಎರೆಹುಳಗಳನ್ನು ಬಿಡಬೇಕು. ಒಳಗೆ ಸಾಕಷ್ಟು ತೇವಾಂಶವಿರುವಂತೆ ನೋಡಿಕೊಳ್ಳಬೇಕು. ತೊಟ್ಟಿ ಒಳಗೆ ಇರುವೆಗಳು ಬಂದು ಎರೆಹುಳುಗಳನ್ನು ತಿನ್ನದಂತೆ ನೋಡಿಕೊಳ್ಳಲು ತೊಟ್ಟಿಯ ಸುತ್ತಾ ಚಿಕ್ಕ ಸಿಮೆಂಟ್ ಕಾಲುವೆ ಮಾಡಿ, ನೀರು ನಿಲ್ಲುವಂತೆ ಮಾಡಬೇಕು. ಹಾಗೇ, ತೊಟ್ಟಿ ಒಳಗಡೆ ಇಲಿ, ಹೆಗ್ಗಣ ಇತ್ಯಾದಿ ಪ್ರಾಣಿಗಳ ಹಾವಳಿ ತಡೆಯಲು ಕಬ್ಬಿಣದ ಮೆಶ್‌ನಿಂದ ತೊಟ್ಟಿಯನ್ನು ಮುಚ್ಚಬೇಕು. ಎರೆಹುಳಗಳ ಚಟುವಟಿಕೆಯಿಂದ ಸಾಕಷ್ಟು ಎರೆಗೊಬ್ಬರ ತಯಾರಾದಾಗ, ಒಂದು ಬಕೆಟ್ ತುಂಬಾ ನೀರನ್ನು ತೊಟ್ಟಿ ಒಳಗೆ ಸುರಿದು, ಆ ನೀರು ಎರೆಗೊಬ್ಬರದ ಮೇಲೆ ಎರೆಹುಳಗಳನ್ನು ಸ್ನಾನಮಾಡಿಸುತ್ತಾ ಹರಿದು, ತಳದ ಪೈಪಿನ ಮೂಲಕ ಹೊರಬಂದು ಮತ್ತೊಂದು ಬಕೆಟ್‌ನಲ್ಲಿ ಸಂಗ್ರಹವಾಗುವಂತೆ ನೋಡಿಕೊಳ್ಳಬೇಕು. ವಿವಿಧ ಸಸ್ಯಪೋಷಕಾಂಶಗಳು ತುಂಬಿತುಳುಕುತ್ತಿರುವ ಈ ಎರೆಜಲವನ್ನು ದ್ರವಗೊಬ್ಬರವಾಗಿ ಹರಿವೆ, ಬಸಳೆ, ಮುಂತಾದ ಸಸ್ಯರೂಪದ ತರಕಾರಿಗಳಿಗೆ, ವೆನಿಲ್ಲಾ ಬೆಳೆಗೆ ರಾಯರು ಸಿಂಪರಣೆಮಾಡಿ ಸಮೃದ್ಧ ಫಸಲು ಪಡೆಯುವುದಾಗಿ ಬೀಗುತ್ತಿರುವರು.

ಇದೇ ರೀತಿ ಉರಿಚುಟ್ಲ (Stinging nettle) ಅಥವಾ ತುರುಚೆ ಅಥವಾ ಯುಫಟೋರಿಯಂ ಅಥವಾ ಗ್ಲಿರಿಸೀಡಿಯಾ ಸಸ್ಯಗಳನ್ನು ಕೊಚ್ಚಿ ಒಂದು ಡ್ರಂನಲ್ಲಿ 15 ದಿನಗಳಷ್ಟು ನೆನೆಹಾಕಿ, ಕೊಳೆಸಿ ಅದರಿಂದ ತೆಗೆದ, ದ್ರವವನ್ನೂ ಕೂಡ ದ್ರವ ಗೊಬ್ಬರವಾಗಿ ವಿವಿಧ ಬೆಳೆಗಳಿಗೆ ಸಿಂಪರಣೆ ಮಾಡುವ ಕ್ರಮವನ್ನೂ ರಾಯರು ಅನುಸರಿಸುತ್ತಿರುವರು.

ರೆಡ್ಡಿಯ ಪರ್ಯಾಯ ನಡಪ್ ಗೊಬ್ಬರ

ರಾಶಿ ಭೂಮಿ ಸಮಮಾಡಿ, ಕಲ್ಲು ಚಪ್ಪಡಿ, ತೆಂಗಿನ ಗರಿ ಹಾಕುವುದು, ಅದರ ಮೇಲೆ ಆರು ಅಡಿ ಅಗಲ, ಮೂರು ಅಡಿ ಎತ್ತರ, ಸುಮಾರು 20 ಅಡಿ ಉದ್ದದ ಗೊಬ್ಬರ ರಾಶಿಯನ್ನು ಈ ಕೆಳಗಿನ ವಸ್ತುಗಳನ್ನು ಮಿಶ್ರಣಮಾಡಿ ತಯಾರಿಸುವುದು.

1. ಕೃಷಿ ತ್ಯಾಜ್ಯ, ಅಡುಗೆ ಮನೆ ತ್ಯಾಜ್ಯ ಹಾಗು ಮೇವಿನ ತ್ಯಾಜ್ಯ ವಸ್ತುಗಳು, ಒಣಗಿದ ಎಲೆ ಮತ್ತು ಹಸಿರೆಲೆಗಳ ಮೊದಲ ಪದರ, ಇದು ಶೇ.50 ರಷ್ಟು ತೇವಾಂಶದಿಂದ ಕೂಡಿರಬೇಕು. ಹಸಿರೆಲೆಗೆ ರಸ್ತೆಯ ಬದಿಯ ಕಳೆಗಳನ್ನೂ ಹಾಕಬಹುದು ಈ ಪದರ ಒಂದು ಅಡಿ ಎತ್ತರ ಇರಬಹುದು.

2. ಗೋಬರ್ ಗ್ಯಾಸ್ ತ್ಯಾಜ್ಯ ದ್ರವ ಅಥವಾ 1:2 ರ ಪ್ರಮಾಣದಲ್ಲಿ ಸಗಣಿ ಮತ್ತು ನೀರಿನ ಮಿಶ್ರಣದ ಪದರ ಒಂದು ಇಂಚು.

3. ಕೆರೆ ಸೀಳುಮಣ್ಣು (Silt) ಅಥವಾ ಬೇರೆಡೆ ಯಿಂದ ತೇವಾಂಶದ ಮೇಲ್ಪದರದ ಮಣ್ಣು ಒಂದು ಇಂಚು.

ಈ ರೀತಿಯ ಏಳು ಪದರಗಳನ್ನು ಹಾಕಿ ಒಂದು ರಾಶಿ ಮಾಡಬೇಕು. ಈ ರಾಶಿಯ ಸುತ್ತಲೂ ಕಲ್ಲು, ಇಟ್ಟಿಗೆಗಳ ಚಿಕ್ಕ ಸಾಲನ್ನು ಮಾಡಿ, ಅದು ಭದ್ರವಾಗಿ ನಿಲ್ಲುವಂತೆ ನೋಡಿಕೊಳ್ಳಬೇಕು. ಈ ಮಿಶ್ರಣವನ್ನು ಮಣ್ಣಿನಿಂದ ಮುಚ್ಚಿಡಬೇಕು. ಮೂರು ತಿಂಗಳಲ್ಲಿ ಎರೆಹುಳ, ಹಾಗೂ ಸೂಕ್ಷ್ಮಾಣು ಜೀವಿಗಳ ತೀವ್ರ ಚಟುವಟಿಕೆಯಿಂದ ಕೊಳೆತು ಒಂದು ರಾಶಿಯಿಂದ ಕನಿಷ್ಟ 60 ಟನ್‌ಗಳಷ್ಟು ಉತ್ಕೃಷ್ಟ ಕಾಂಪೋಸ್ಟ್ ಗೊಬ್ಬರ ತಯಾರಾಗುವುದು. ಸತತ ಪೂರೈಕೆಗೆ ಒಂದಾದ ನಂತರ ಮತ್ತೊಂದರಂತೆ ಎರಡು ರಾಶಿ ಹಾಕಿಕೊಂಡರೆ ಉತ್ತಮ.

ಈ ಇಬ್ಬರು ತಯಾರಿಸುವ ಕಾಂಪೋಸ್ಟ್‌ಗೊಬ್ಬರದ ಪೌಷ್ಟಿಕದಾಯಕತೆಯನ್ನು ವೈಜ್ಞಾನಿಕವಾಗಿ ಪರೀಕ್ಷಿಸಿದರೆ ಯಾರ ಪದ್ಧತಿ ಅತ್ಯುತ್ತಮ ವಾಗಿರುತ್ತದೆ ಎಂದು ಅರಿಯಬಹುದು. ರೆಡ್ಡಿಯವರು ಬಹುತೇಕ ನಿರುಪಯುಕ್ತ, ತ್ಯಾಜ್ಯ ವಸ್ತುಗಳ ಜೊತೆಗೆ ಕೆರೆಹೂಳು ತೆಗೆದು ಅದನ್ನು ಬಳಸುವುದರಿಂದ ಇದು ಹೆಚ್ಚು ಸುಸ್ಥಿರವಾದದೆನ್ನಬಹುದು. ಆದರೆ ರಾಯರು ಬಳಸುವ ಜೀವಜಲ (Omniotic fluid) ಸದಾಸಿಗುವುದು ಕಷ್ಟ. ಮಿಗಿಲಾಗಿ ಇವರು ಕಾಡು

ಮಣ್ಣು ಬಳಸುವುದರಿಂದ ಕಾಡಿನ ಫಲವತ್ತತೆಯನ್ನು ನಾಶಮಾಡಿಸಿ ದಂತಾಗುವುದಿಲ್ಲವೆ ಎಂದು ಕೆಲವರು ಆಕ್ಷೇಪಿಸಿರುವರು. ಇದೇ ರೀತಿ ರೆಡ್ಡಿಯವರು ಬೇರೆಡೆಯಿಂದ ತೇವಾಂಶದ ಮೇಲ್ಮಣ್ಣು ಬಳಸುವುದೂ ಕೂಡ ಮಿಗಿಲಾಗಿ ಮಣ್ಣಿನ ಫಲವತ್ತತೆಯನ್ನು ಒಂದೆಡೆ ನಾಶಮಾಡಿ ಇನ್ನೊಂದೆಡೆ ಉಪಯೋಗ ಪಡೆಯುವುದು ನೈತಿಕತೆ ಮತ್ತು ಪರಿಸರದ ರಕ್ಷಣೆ ಈ ಎರಡೂ ದೃಷ್ಟಿಯಿಂದ ಸರಿಯೆ ಎಂದು ಖ್ಯಾತ ಬರಹಗಾರ ಹಾಗು ಪರಿಸರವಾದಿ ಪೂರ್ಣಚಂದ್ರ ತೇಜಸ್ವಿ ಪ್ರಶ್ನಿಸಿರುವರು.

ಸಸ್ಯ ಸಂರಕ್ಷಣೆ

ರಾಯರು ಮತ್ತು ರೆಡ್ಡಿಯವರು ಇಬ್ಬರೂ ಮೂಲತಃ ಭೂಮಿ, ಪರಿಸರದ ಆರೋಗ್ಯ ಕಾಪಾಡುವುದರ ಮೂಲಕ ಮತ್ತು ಸಸ್ಯತಳಿಗಳಲ್ಲಿ ನಿರೋಧಕ ಶಕ್ತಿ ಗಟ್ಟಿಮಾಡುವುದರ ಬಗ್ಗೆ ಹೆಚ್ಚು ಒತ್ತುಕೊಟ್ಟಿರುವರು. ಸಸ್ಯಗಳಿಗೆ ಯಾವುದೇ ರೋಗ ರುಜಿನಗಳು ಬೀಳದಂತೆ ಮುಂಜಾಗುರೂಕತೆ ಕ್ರಮವಾಗಿ ಕೆಲವು ನಾಟೀ ಜೈವಿಕ ದ್ರಾವಕವನ್ನು ಬಳಸುವರು. ಅಂತಹ ಸಾಮಾನ್ಯ ಪದ್ಧತಿಗಳನ್ನು ಈ ಕೆಳಗೆ ಕೊಡಲಾಗಿದೆ.

ರಾಯರ ಪದ್ಧತಿ : ಮುಕ್ಕಡಕ (*Lasiosiphon exrioephalus*) ಅಥವಾ ಕಾಸರಕ (*Stryn chnos nuxivomica*) ಅಥವಾ ಬೇವು ಅಥವಾ ಕಳ್ಳಿ (*Agave americana*) ಎಲೆಗಳನ್ನು ಪ್ರತ್ಯೇಕವಾಗಿ ಅಥವಾ ಮಿಶ್ರ ಮಾಡಿ ಒಂದು ಬಕೆಟ್‌ನಲ್ಲಿ ಹಾಕಿ, ಬಿಸಿ ನೀರು ಮಿಶ್ರಣಮಾಡಿ ಒಂದು ದಿನ ಕೊಳೆಯುವಂತೆ ಮಾಡುವುದು. ಮಾರನೆಯ ದಿನ ಅದರ ತಿಳಿ ದ್ರಾವಣವನ್ನು ತೆಗೆದು, ಬಿಸಿಲಿನಲ್ಲಿ ಇಡುವುದು. ಈ ದ್ರಾವಣವನ್ನು ರೋಗ ರುಜಿನಗಳ ಲಕ್ಷಣ ಕಂಡು ಬಂದ ಯಾವುದೇ ಬೆಳೆಗೆ 1:10 ರ ಪ್ರಮಾಣದಲ್ಲಿ ನೀರಿನಲ್ಲಿ ಬೆರೆಸಿ ಸಿಂಪಡಣೆ ಮಾಡುವುದು.

ರೆಡ್ಡಿಯವರ ಕ್ರಮ : ಹಸುವಿನ ಗಂಜಲ ಪ್ರತಿದಿನ ಕೊಟ್ಟಿಗೆಯಿಂದ ಹರಿದು, ಪಕ್ಕದ ಒಂದು ಚಿಕ್ಕ ಸಿಮೆಂಟ್ ತೊಟ್ಟಿಯಲ್ಲಿ ಶೇಖರವಾಗುವಂತೆ ನೋಡಿಕೊಳ್ಳುವುದು. ಆ ತೊಟ್ಟಿಯೊಳಗೆ ಬೇವು, ಅಥವಾ ಕಳ್ಳಿ ಅಥವಾ ಉರಿಜಿಟ್ಲು ಅಥವಾ ಲಕ್ಕಿ (*Jassica prostrata*) ಅಥವಾ ಉಮ್ಮತ್ತಿ (*Datura fastuoa*) ಸೊಪ್ಪುಗಳನ್ನು ಬಿಡಿಯಾಗಿ ಅಥವಾ ಪೂರೈಕೆ ನೋಡಿಕೊಂಡು ಸಾಧ್ಯವಿರುವಷ್ಟನ್ನು ಮಿಶ್ರಣ ಮಾಡಿ ಬಳಸಬಹುದು. ಇವುಗಳು ಒಂದೆರಡು ದಿನ ಕೊಳೆಯುವಂತೆ ಮಾಡಿ, ನಂತರ 15 ದಿನಕ್ಕೊಂದು ಬಾರಿಯಂತೆ ಕ್ರಿಮಿಕೀಟಗಳು ಬೀಳಲಿ, ಬೀಳದಿರಲಿ, ರೆಡ್ಡಿಯವರು ತಮ್ಮ ಎಲ್ಲಾ ಬೆಳೆಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಸಿಂಪಡಣೆ ಮಾಡಿಕೊಂಡು ಬಂದಿರುವರು.

ರಾಯರ ಕೆಲವು ನಿರ್ದಿಷ್ಟ ಕ್ರಮಗಳು

(ಅ) ತಮ್ಮ ತೋಟದ ಬೆಳೆಗಳಿಗೆ ಬೀಳುವ ಶಿಲೀಂದ್ರ ಅಥವಾ ವೈರಸ್ ರೋಗಗಳಿಗೆ ರಾಯರ ಬಜೆ (*Acorus calamus*) ಸಸ್ಯದ ಎಲೆಗಳನ್ನು ಈ ಹಿಂದೆ ತಿಳಿಸಿರುವಂತೆ ಕೊಳೆಸಿ, ದ್ರಾವಣ ಮಾಡಿ ಸಿಂಪರಿಸುತ್ತಾರೆ.

(ಆ) ಪಂಚಗವ್ಯ : ಕಾಫಿ ಮತ್ತು ಮೆಣಸಿಗೆ ಬೀಳುವ ವೈರಸ್‌ನಿಂದ ಬರುವ ಸೊರಗು ರೋಗಕ್ಕೆ (Wilt disease); ಗೋವಿನ ಮೂಲದ ಐದು ಪದಾರ್ಥಗಳು, ಸಗಣಿ, ಗೋಮೂತ್ರ, ಹಾಲು, ತುಪ್ಪ ಮತ್ತು ಮೊಸರು, ಇವುಗಳನ್ನು ಪಲಾಶ (*Butea monosperma*) ದ ಕಡ್ಡಿಯಿಂದ ಮಿಶ್ರಣಮಾಡಿ ದರ್ಬೆ(*Saccharum spontaneum*) ಎಲೆಗಳನ್ನು ವೈದೀಕ ಕಾರ್ಯದಲ್ಲಿ ಬಳಸುವಂತೆ ಬಳಸಿ, ಕೆಲಕಾಲ ಅದ್ದಿಡುವುದು ನಂತರ ಸಿಂಪರಣೆ ಮಾಡುವುದು. ಇದರಿಂದಾಗಿ ಪರಿಹಾರವೇ ಇಲ್ಲದ ಕಾಫಿ ಮತ್ತು ಮೆಣಸಿನ ಸೊರಗು ರೋಗಕ್ಕೆ ಔಷಧಿ ಕಂಡುಹಿಡಿದಿರುವುದಾಗಿ ರಾಯರು ಹೇಳಿರುವರು.

ರಾಯರು ಬಳಸುವ ಮುಕ್ಕಡಕ, ಕಾಸರಕ ಕಳ್ಳಿಗಳನ್ನು ಬುಡಕಟ್ಟು ರೈತರೂ ಬಳಸುತ್ತಿದ್ದು, ಅದರ ಪರಿಣಾಮ ಅವರಲ್ಲಿ ಈಗಾಗಲೇ ಮನವರಿಕೆಯಾಗಿದೆ. ಆದರೆ ಪಂಚಗವ್ಯ ಪ್ರಯೋಗ ಮಾತ್ರ ಪುರುಷೋತ್ತಮ ರಾಯರ ಆಧ್ಯಾತ್ಮಿಕ ಮನಸ್ಸಿನ ಅನ್ವೇಷಣಾ ಪ್ರವೃತ್ತಿಗೆ ಸಾಕ್ಷಿಯಾಗಿದ್ದು, ಇದರ ಬಗ್ಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಪ್ರಯೋಗ ನಡೆದಿದ್ದು ಅದರ ಉತ್ತಮ ಪರಿಣಾಮ, ಆರ್ಥಿಕದಾಯಕತೆ, ಪರಿಸರ ದೃಷ್ಟಿಯಿಂದ ಉಪಯುಕ್ತತೆ ದೃಢವಾಗಿದೆ.

(ಹಿತ್ತಲ ಗಿಡ ಸಂಪುಟ 1 ಸಂಚಿಕೆ 2-3, 1995 ನೋಡಿರಿ)

ಇಳುವರಿ ಮತ್ತು ಆರ್ಥಿಕದಾಯಕತೆ

ಈ ಇಬ್ಬರು ಕೃಷಿಕರು ಸುತ್ತಮುತ್ತಲಿನ ಇತರ ರೈತರಿಗಿಂತ ಹಲವು ಬೆಳೆಗಳಲ್ಲಿ ಅಧಿಕ ಇಳುವರಿ ಪಡೆಯುತ್ತಿರುವರು. ಉದಾಹರಣೆಗೆ ರಾಯರು ತಮ್ಮ ತೆಂಗಿನ ಮರದಲ್ಲಿ 150-160 ಕಾಯಿಗಳನ್ನು ಪಡೆಯುತ್ತಿದ್ದರೆ ಸುತ್ತಮುತ್ತಲಿನ ಇಳುವರಿ 70-80 ಮಾತ್ರ. ಹಾಗೇ ಅವರು ಎಕರೆಗೆ 40 ಕ್ವಿಂಟಾಲ್‌ವರೆಗೆ ಅಡಿಕೆ ಪಡೆಯಬಲ್ಲೆ ಎನ್ನುತ್ತಿರುವರು. ಇದು ಊಹಿಸಲೂ ಅಸಾಧ್ಯವಾಗಿದೆ. ಕಾರಣ ಮಲೆನಾಡು ಪ್ರಾಂತ್ಯದಲ್ಲಿ ಅಡಿಕೆ ಇಳುವರಿ ಸಾಧಾರಣ 10-12 ಕ್ವಿಂಟಾಲ್‌ಗಳಿರಬಹುದು. ಅದೇ ರೀತಿ ಅವರು ಎಕರೆ ಒಂದಕ್ಕೆ 19-20 ಕ್ವಿಂಟಾಲ್ ಬತ್ತದ ಇಳುವರಿ ಪಡೆಯುತ್ತಿದ್ದು ಇದು ಸುತ್ತಮುತ್ತಲಿನವರಿಗಿಂತ ಶೇ. 75 ಕ್ಕೂ ಅಧಿಕವಾಗಿರುತ್ತದೆ ಎನ್ನಬಹುದು.

ಹಾಗೇ ನಾರಾಯಣ ರೆಡ್ಡಿಯವರೂ ಕೂಡ. ಅವರು ಎಕರೆಗೆ 18 ಕ್ವಿಂಟಾಲ್ ರಾಗಿ, 20 ಕ್ವಿಂಟಾಲ್ ಬತ್ತ, ಮರ ಒಂದಕ್ಕೆ 180 ಕೆ.ಜಿ. ಸೀಬೆ, 200 ತೆಂಗಿನ ಕಾಯಿ ಪಡೆದಿದ್ದು, ಇವು ಸುತ್ತಮುತ್ತಲಿನ ರೈತರಿಗಿಂತ ಬಹಳ ಅಧಿಕ ಎನ್ನಬಹುದು.

ಖರ್ಚು ವೆಚ್ಚದ ಉಳಿತಾಯದಲ್ಲಿ ಈ ಇಬ್ಬರು ರೈತರು ಎಲ್ಲರೂ ಬೆರಗುಗೊಳ್ಳುವಂತಹ ಯಶಸ್ಸು ಸಾಧಿಸಿರುವರು. ಉದಾಹರಣೆಗೆ ಬತ್ತದ ಬೇಸಾಯಕ್ಕೆ ಆಳು ಮತ್ತು ಬೀಜದ ಖರ್ಚು ಬಿಟ್ಟರೆ ಬೇರೇನನ್ನೂ ಇವರು ಬರಿಸುವುದಿಲ್ಲ. ರಾಯರು ಪುಕುವೋಕನ ಸಹಜ ಕೃಷಿಯ ಮಾದರಿಯಲ್ಲಿ ಕಳೆಕೂಡ ತೆಗೆಯುವುದಿಲ್ಲ. ಹಾಗಾಗಿ ಸುತ್ತಮುತ್ತಲಿನ ಬೇರೆ ರೈತರು ಬತ್ತದ ಬೇಸಾಯದಲ್ಲಿ ಮಾಡುವ ಒಟ್ಟು ವೆಚ್ಚದಲ್ಲಿ ಶೇ.30-40 ಕೂಡ ಇವರಿಬ್ಬರಿಗೆ ತಗುಲುವುದಿಲ್ಲವಂತೆ. ಹಾಗೇ ರೆಡ್ಡಿಯವರು ರಾಗಿ ಬೆಳೆಯಲು ತಗುಲುವ ವೆಚ್ಚ ಇತರ ಸ್ಥಳೀಯ ರೈತರು ಮಾಡುವ ವೆಚ್ಚದಲ್ಲಿ ಕಾಲು ಭಾಗ ಕೂಡ ಇರದು ಎನ್ನುತ್ತಾರೆ.

ಇವೆಲ್ಲಕ್ಕಿಂತ ಮುಖ್ಯವಾಗಿ ಏರಿಳಿತವಿಲ್ಲದ ಸ್ಥಿರವಾದ ಆದಾಯ ಅದೂ ವರ್ಷವಿಡೀ ಪಡೆಯುವಲ್ಲಿ ಈ ಇಬ್ಬರು ಕೃಷಿಋಷಿಗಳು ಪಡೆದ ಯಶಸ್ಸು ಹೇಳತೀರದು.

(ಅ) ರಾಯರ 12 ತಿಂಗಳು 12 ಕೊಯಿಲಿನ ಕೃಷಿ

ತಮ್ಮ ಈ ಸಾವಯವ ವೈವಿಧ್ಯಮಯ ಕೃಷಿಯ ಉದ್ದೇಶವೇನೆಂದು ಕೇಳಿದರೆ "ಸರ್ಕಾರ, ಕಾರ್ಖಾನೆ ಅಥವಾ ಬೇರೆಡೆ ನೌಕರರಂತೆ ನಾವೇಕೆ ಪ್ರತಿ ತಿಂಗಳೂ ಆದಾಯ ಪಡೆಯಬಾರದು". ಎನ್ನುವ

ಪ್ರಯತ್ನ ಎನ್ನುತ್ತಾರೆ. ಅವರು ಈ ರೀತಿ ಪ್ರತೀ ತಿಂಗಳೂ ಪಡೆಯುತ್ತಿರುವ ಬೆಳೆಗಳ ಚಿತ್ರ ಈ ಮುಂದೆ ಕೊಡಲಾಗಿದೆ.

(ಆ) ನಾರಾಯಣ ರೆಡ್ಡಿಯ ವೈವಿಧ್ಯಮಯ ಕಸುಬುಗಾರಿಕೆ


ಬೆಳೆ ವೈವಿಧ್ಯತೆ, ಅಂದರೆ, ಬತ್ತ, ರಾಗಿ, ತೆಂಗು, ಹಿಪ್ಪುನೇರಳೆ, ಚಿಕ್ಕು, ಹೂವು, ಸೀಬೆ, ಕರಿಬೇವು, ತೇಗ ಇತ್ಯಾದಿಗಳ ಜೊತೆ ಸುಮಾರು 15-20 ಸೀಮೆ ಹಸು, ಕುರಿ, 40 ಕೋಳಿಗಳ 'ವೈವಿಧ್ಯಮಯ' ಕಸುಬುಗಳಿಂದ ರೆಡ್ಡಿಯವರು ರಾಯರಂತೆ ಸುಸ್ಥಿರವಾದ ಆದಾಯ ಪಡೆಯುವಲ್ಲಿ ಯಶಸ್ವಿಗಿರುವರು. ತಮ್ಮ ಹಸುಗಳಿಂದ ದಿನಕ್ಕೆ ಕನಿಷ್ಟ 25-30 ಲೀಟರ್ ಹಾಲು ಪಡೆದರೆ ಇದಕ್ಕೆ ಮಾಡುವ ಖರ್ಚಾದರೂ ಅಷ್ಟಕ್ಕಷ್ಟೆ. ಹಾಗಾಗಿ ರೆಡ್ಡಿಯವರು ವ್ಯಾಪಾರಸ್ತರಂತೆ ದಿನನಿತ್ಯ ಆದಾಯ ಪಡೆಯುವಂತಾಗಿರುವರು.

ಮಾರಾಟ ವಿಧಾನ

ಸಾವಯವ ಉತ್ಪನ್ನ ಎಂದು ಈ ಕೃಷಿಕರ ಬೆಳೆಗೆ ಬೆಂಗಳೂರಿನ ಸ್ವಯಂ ಸಂಸ್ಥೆಗಳಾದ ICRA, Econet, Cocoa, GREEN Foundaron ಮುಂತಾದವುಗಳು ಮಾರಾಟ ವ್ಯವಸ್ಥೆ ಈಗಾಗಲೇ ಏರ್ಪಾಡು ಮಾಡಿವೆ. ರಾಯರು ಬೆಳೆಯುತ್ತಿರುವ ಸಾವಯವ ವೆನಿಲಾಕ್ಕಂತೂ ವಿದೇಶಗಳಿಂದ ಬೇಡಿಕೆ ಬರಲು ಶುರುವಾಗಿದೆ. ರಾಯರು ಬೆಂಗಳೂರಿನಲ್ಲಿ ತಮ್ಮದೇ ಆದ ಒಂದು Retail ಮಳಿಗೆ ತೆಗೆದು, ಮತ್ತು ದೊಡ್ಡ ದೊಡ್ಡ ವಸ್ತು ಪ್ರದರ್ಶನಗಳಲ್ಲೂ ಮಳಿಗೆ ತೆಗೆದು ತಾವು ಬೆಳೆದ ಸಾವಯವ ಏಲಕ್ಕಿ, ಕಾಳು ಮೆಣಸು, ಕೊಬ್ಬರಿ, ಗೋಡಂಬಿಗಳಿಗೆ ಮಾರಾಟವ್ಯವಸ್ಥೆಗೆ ಪ್ರಯತ್ನಿಸಿ ಕೈಸುಟ್ಟು ಕೊಂಡಿರುವರು.

ಮರ ಮತ್ತು ಹಸುಗಳು

ಈ ಇಬ್ಬರೂ ಕೃಷಿಕರ ವ್ಯವಸಾಯ ಪದ್ಧತಿಯ ಕೇಂದ್ರ ಅಂಶವಾಗಿ ಮರ ಮತ್ತು ಹಸುಗಳು ನಿಂತಿದ್ದರೂ ಅವುಗಳಿಗೆ ನೀಡಿರುವ ಸ್ಥಾನ ಮಾನಗಳಲ್ಲಿ ವ್ಯತ್ಯಾಸವಿದೆ. ನಾರಾಯಣ ರೆಡ್ಡಿ ಮರಗಳು, ಪರಿಸರ ದೃಷ್ಟಿಯಿಂದ, ಮಣ್ಣು, ನೀರು ಸಂರಕ್ಷಣೆಗಾಗಿ, ಹಸಿರೆಲೆ ಗೊಬ್ಬರ ಮತ್ತು ನಿರಂತರ ಆದಾಯ ಉಪಯೋಗಕ್ಕಾಗಿ ವ್ಯಾವಹಾರಿಕ ಸ್ಥಾನನೀಡಿರುವರು. ಹಾಗಾಗಿ ಇವರ ಫಾರಂನಲ್ಲಿ ಸುಮಾರು 450 ತೇಗದ ಮರಗಳು, 50 ಸಿಲ್ವರ್ ಓಕ್ ಮರಗಳು, 20 ಹಲಸು, ನಾಲ್ಕು



ಪುರುಷೋತ್ತಮ ರಾಯರ ಹನ್ನೆರಡು ತಿಂಗಳೂ ಬೆಳೆಗಳು

ಹುಣಸೆ, 50 ಬಿದಿರು, 15 ನೀಲಗಿರಿ, 15 ತಗಡ, 20 ಬೇವು ಮತ್ತು ನೂರಾರು ಗ್ಲಿರಿಸೀಡಿಯ ಮರಗಳನ್ನು ಮನೆಯ ಸುತ್ತ ಮುತ್ತ, ಹೊಲದ ಅಂಚಿನಲ್ಲಿ ನೆಡಲಾಗಿದೆ.

ಆದರೆ ರಾಯರ ತೋಟವಿರುವುದು ಪಶ್ಚಿಮ ಘಟ್ಟ ಪ್ರದೇಶದಲ್ಲಿ ಇಲ್ಲಿ ಮರ ಬೆಳೆಸುವುದಕ್ಕಿಂತ ಉಳಿಸುವದೇ ಮುಖ್ಯ ಗುರಿ. ಹಾಗಾಗಿ ರಾಯರ ಮನೆಯ ಸುತ್ತ ಮುತ್ತ ಪೇರಳೆ, ಮಾವು, ಹಲಸುಗಳ ಮರಬಿಟ್ಟರೆ ಬೇರೆ ಮರ ಬೆಳೆಸಲು ಒತ್ತು ಕೊಡಲಾಗಿಲ್ಲ.

ಹಸುಗಳು ನಾರಾಯಣರೆಡ್ಡಿಯವರ ಕೃಷಿ ಪದ್ಧತಿಯಲ್ಲಿ ನಿರಂತರ ಆದಾಯ, ಕೃಷಿಗೆ ಗೊಬ್ಬರದ ದೃಷ್ಟಿಯಿಂದ ಮುಖ್ಯಸ್ಥಾನ ಪಡೆದಿದ್ದರೆ, ರಾಯರ ಕೃಷಿಯಲ್ಲಿ ಪಂಚಗವ್ಯದ ಉತ್ಪಾದನೆಗೆ, ಜೀವಜಲ (Omniotic fluid) ಇತ್ಯಾದಿಗಳಿಗೆ ಆಧ್ಯಾತ್ಮಿಕ ದೃಷ್ಟಿಯಿಂದ ಕೇಂದ್ರ ಸ್ಥಾನ ಪಡೆದಿದೆ.

ಆಶ್ಚರ್ಯವೆಂದರೆ ಇಬ್ಬರ ಫಾರಂನಲ್ಲಿ ಬಹು ಉಪಯೋಗಿ, ಧಾರ್ಮಿಕ ದೃಷ್ಟಿಯಿಂದ ಮಹತ್ವದ್ದಾಗಿರುವ ಗಿಡಮರಗಳ ಬದಲಿಗೆ ವಾಣಿಜ್ಯ ದೃಷ್ಟಿಯಿಂದ ಮರಗಳೇ ಜಾಸ್ತಿ ಕಂಡು ಬರುತ್ತಿದೆ. ಹಾಗೇ ನಾಟಿತಳಿ ಹಸುಗಳ ಬದಲಿಗೆ ಸೀಮೆ ಹಸುಗಳು ಇಬ್ಬರ ಹತ್ತಿರವೂ ಇದ್ದು, ಕೃತಕ ಗರ್ಭದಾರಣೆಗೆ ಮಾತ್ರ ಇಬ್ಬರೂ ಆಸ್ಪದ ಕೊಟ್ಟಿರುವಂತೆ ಕಾಣುವುದಿಲ್ಲ. ಹಾಗೇ ಇವುಗಳ ಔಷಧಿ ಉಪಚಾರಕ್ಕೆ ನಾಟೀ ಪದ್ಧತಿ ಬದಲು, ಪಶುವೈದ್ಯರನ್ನೆ ಹೆಚ್ಚು ನಂಬಿರುವರು.

ಹೊರಗಿನ ಅವಲಂಬನೆ

ನಾರಾಯಣ ರೆಡ್ಡಿಯ ತೋಟದಲ್ಲಿ ಅವರು, ಅವರ ಪತ್ನಿ, ಮೂವರು ಗಂಡುಮಕ್ಕಳು, ಸೊಸೆ ಯಂದಿರೆಲ್ಲಾ ಅನ್ಯೋನ್ಯವಾಗಿ ಕೆಲಸಮಾಡುವವರೆ. ಹಾಗಾಗಿ ಹೊರಗಿನ ಆಳುಗಳ ಮೇಲೆ ಅವರು ಅಷ್ಟು ನಂಬಿಕೊಂಡಿಲ್ಲ. ಆದರೂ ಕೂಪ ಕಾಂಪೋಸ್ಟ್ ತಯಾರಿಸಲು ಪಶುಪಾಲನೆ ಇತ್ಯಾದಿ ಕಾರ್ಯಗಳಿಗೆ ಬಹಳಷ್ಟು ಕೂಲಿಗಳು ಬೇಕಾಗಿದ್ದಾರೆ. ಸುತ್ತಮುತ್ತಲಿನ ಹೊಲಗಳಿಗೆ ಹೋಲಿಸಿದಲ್ಲಿ, ಕ್ರಿಮಿನಾಶಕಗಳ ಹಾವಳಿ, ಬಿಸಿಲಿನ ಬವಣೆ ಇತ್ಯಾದಿಗಳ ತೊಂದರೆ ಇಲ್ಲದೆ ಹಿತಕರ ವಾತಾವರಣದಲ್ಲಿ ಇಲ್ಲಿ ಕೆಲಸ ಮಾಡುವಂತಾಗಿದೆ. ಇದೇ ರೆಡ್ಡಿ ಫಾರಂನ ಯಶಸ್ಸು ಎಂದರೆ ತಪ್ಪಾಗಲಾರದು. ಹಣಕಾಸು, ಮತ್ತಿತರ ಕೃಷಿಗೆ ಅಗತ್ಯವೆನಿಸಿದ ಹೂಡಿಕೆಗಳನ್ನು ಆಂತರಿಕವಾಗಿಯೇ ಹೊಂದಿಸಿಕೊಂಡಿರುವುದರಿಂದ, ಇವರ ಕೃಷಿ ಬಹುತೇಕ ಸ್ವಾವಲಂಬಿ ಕೃಷಿಯಾಗಿದೆ ಎಂದರೆ ತಪ್ಪಾಗಲಾರದು.

ಆದರೆ ದೊಡ್ಡ ಅಪವಾದವೆಂದರೆ ನಾರಾಯಣರೆಡ್ಡಿಯವರು ಹೈಬ್ರಿಡ್ ಅಥವಾ ಸುಧಾರಿಸಿದ ತಳಿಗಳ ಬಗ್ಗೆ ಬಲವಾಗಿ ನಂಬಿರುವರು ಮತ್ತು ಇದಕ್ಕಾಗಿ, ಬೀಜಗಳ ವಿಚಾರದಲ್ಲಿ ಹೊರಗಿನ ಮೂಲಗಳನ್ನು ಆಶ್ರಯಿಸಿರುತ್ತಾರೆ.

ಇವರ ತೋಟದಲ್ಲಿ ತಿಪಟೂರು ಟಾಲ್ ತೆಂಗು, ಅಲಹಾಬಾದ್ ಸಫೇದ್ ಸೀಬೆ, ಕಾಲಿಪತ್ತಿ ಸಪೋಟ, M5 ಹಿಪ್ಪುನೇರಳೆ, ಕಾವೇರಿ ಕಾಫಿ,

ಜಯ ಮತ್ತು ಮಸೂರಿ ತಳಿ ಬತ್ತ, ಇಂಡಾಫ್ ರಾಗಿ ತಳಿ ಇರುತ್ತವೆ. ಜೊತೆಗೆ ಇವರ ಪಂಪ್‌ಸೆಟ್‌ಗೆ ವಿದ್ಯುಚ್ಛಕ್ತಿ, ಕಂಪೋಸ್ಟ್‌ಗೆ ಬಳಸುವ ಕೆರೆಯ ಮಣ್ಣು, ಹೊರಗಡೆಯಿಂದ ಬರುವಂತಹವು. ಆದರೆ ಅದಕ್ಕೂ ಅಷ್ಟೇನು ವೆಚ್ಚ ತಗಲುವುದಿಲ್ಲ.

ರಾಯರ ಕುಟುಂಬದಲ್ಲಿ ವಯಸ್ಸಾದ ದಂಪತಿಗಳು ಮತ್ತು ದತ್ತು ಪುತ್ರ ಮಾತ್ರ. ಜೊತೆಗೆ ದಿನನಿತ್ಯ ಇವರಿಗೆ ಕನಿಷ್ಟ, 8-10 ಹೊರಗಿನ ಆಳುಗಳ ಅಗತ್ಯವಿದೆ. ಮೂರು ಕುಟುಂಬಗಳಿಗೆ ತಾವೇ ಸ್ವತಃ ಮನೆಮಾಡಿಕೊಟ್ಟು, ಪ್ರತಿವರ್ಷ ಕಂಬಳಿ, ದೀಪಾವಳಿಗೆ ಬೋನಸ್ ರೂಪದಲ್ಲಿ ಹೆಚ್ಚಿಗೆ ಹಣ, ದಿನಕ್ಕೆ 2 ರೂ ಉಳಿತಾಯ ಯೋಜನೆ, ಔಷಧಿ ಭತ್ಯ ಇತ್ಯಾದಿ ಪ್ರೋತ್ಸಾಹಗಳನ್ನು ನೀಡುವುದರ ಮೂಲಕ ಆಳುಗಳ ಕಲ್ಯಾಣಕ್ಕೆ ಒತ್ತು ಕೊಟ್ಟಿರುವರು. ರೆಡ್ಡಿಯವರಂತೆ, ಹೈಬ್ರಿಡ್ ತಳಿಗಳ ಅಗತ್ಯ ಇವರಿಗೆ ಹೆಚ್ಚು ಕಂಡು ಬಂದಿಲ್ಲವಾದರೂ, *ರಾಯರ ವೆನಿಲ್ಲಾ ತಳಿ ಮಾತ್ರ ಆ ಪ್ರದೇಶಕ್ಕೇ ಅಪರಿಚಿತ ಎನ್ನಬಹುದು.*

ವೆನಿಲ್ಲಾ ಹಬ್ಬುವ, ಬಳ್ಳಿರೂಪದ ಸಸ್ಯವಾದ್ದರಿಂದ, ಅದಕ್ಕೆ ಚಪ್ಪರದ ಅಗತ್ಯವಿದ್ದು, ಇದಕ್ಕಾಗಿ ಕಬ್ಬಿಣ, ಕಲ್ಲುಕಂಬ, ಮರ ಮಟ್ಟು ಬೇರೆಡೆ ಬಳಸಿದರೆ, ರಾಯರು ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮ ಅಪಾರ ಪ್ರಮಾಣದಲ್ಲಿ ವೆಚ್ಚ ಕಡಿಮೆ ಮಾಡುವಂತಾಗಿದ್ದು ಇದು ರಾಯರ ಅನ್ವೇಷಣಾ ಪ್ರವೃತ್ತಿಗೆ ಸಾಕ್ಷಿಯಾಗಿದೆ. ರಾಯರು ತಮ್ಮ ತೋಟದಲ್ಲಿರುವ ನೂರಾರು ವೆನಿಲ್ಲಾ ಬಳ್ಳಿ ಹಬ್ಬಲು ಕಾಫಿ ಗಿಡಗಳನ್ನೋ, ಅಥವಾ ಗ್ಲಿರಿಸೀಡಿಯಾ ಹಾಗೆ ಹಿಪ್ಪುನೇರಳೆ ಮರಗಳನ್ನೂ ಉಪಯೋಗಿಸಿ, ಎರಡು ಮರಗಳ ನಡುವೆ ಅಡ್ಡ ಅಡ್ಡಲಾಗಿ ಅಡಿಕೆ ಬಲಗುಗಳನ್ನು ಇಟ್ಟು ಬಳ್ಳಿ ಹಬ್ಬಲು ಮತ್ತಷ್ಟು ಅನುವು ಮಾಡಿಕೊಟ್ಟಿರುವರು. ಇದರಿಂದಾಗಿ ರಾಯರಿಗೆ ವೆನಿಲಾ ಬೆಳೆ ಮತ್ತಷ್ಟು ಲಾಭದಾಯಕವಾಗುವಂತಾಗಿದೆ.

ಬದಲಾವಣೆಯ ಅಡ್ಡಿ ಆತಂಕಗಳು

ಈ ಇಬ್ಬರಿಗೂ ರಾಸಾಯನಿಕ ಕೃಷಿಯ ವೈಪರೀತ್ಯ, ಆ ಮೂಲಕದ ಬೆಳೆ ನಷ್ಟ, ವೆಚ್ಚ, ಹೀಗೆ ಆರ್ಥಿಕ ಕಾರಣಗಳು ಸಾವಯವ ಕೃಷಿಯತ್ತ ಒಲೆಯಲು ಮೂಲಕಾರಣವಾಗಿತ್ತು. ಆದರೆ ಇದು ಸಾಧ್ಯವಾಗಿದ್ದು, ಇತರ ವ್ಯಕ್ತಿ ಮೂಲದಿಂದ ಬಂದ ಪ್ರೇರಣೆ ಮತ್ತು ಭರವಸೆಗಳಿಂದ. ರಾಸಾಯನಿಕ ಕೃಷಿಗೆ ಹೊಂದಿಕೊಂಡಂತೆ, ಮಾರುಕಟ್ಟೆ ಸಮಸ್ಯೆ ಕೂಡ ಶ್ರೀ ರೆಡ್ಡಿಯವರ ವಿಚಾರದಲ್ಲಿ ಮುಖ್ಯ ಪಾತ್ರ ವಹಿಸಿರುತ್ತದೆ. ಈ ಇಬ್ಬರ ಹಿನ್ನೆಲೆಯನ್ನು ಗಮನಿಸಿದಾಗ, ರೆಡ್ಡಿಯವರು ಸಾವಯುವದತ್ತ ಒಲಿಯುವಂತಾಗಿರುವುದು ದೊಡ್ಡ ಸಾಧನೆಯಾಗಿರುತ್ತದೆ. ರಾಯರ ಮಲೆನಾಡಿನ ಅಡಿಕೆ, ಭತ್ತದ ಕೃಷಿಯಲ್ಲಿ ರಾಸಾಯನಿಕಗಳು ಅಷ್ಟೇನೂ ದಾಳಿ ನಡೆಸಿರಲಿಲ್ಲ. ಅಡಿಕೆಗೆ ಹೊಡೆಯುವ ಬೋರ್ಡೋ ದ್ರಾವಣ ಬಿಟ್ಟರೆ, ಮೂಲತಃ, ಸಾವಯವ ಕೃಷಿಯೇ ಅಲ್ಲಿರುವುದೂ. ಆದರೆ ರೆಡ್ಡಿಯವರ ಕೃಷಿ ಪ್ರದೇಶವಾದರೋ ಹೇಳಿ ಕೇಳಿ ರಾಸಾಯನಿಕಗಳು, ಹೈಬ್ರಿಡ್ ತಳಿಗಳು ದಟ್ಟವಾಗಿ ಹಬ್ಬಿರುವಂತಹದ್ದು. ಇವಕ್ಕೆ ಇತಿಶ್ರೀ ಹೇಳುವುದು ರೆಡ್ಡಿಯವರಿಗೆ ಸ್ವಲ್ಪ ಪ್ರಯಾಸದ ಕಾರ್ಯವೇ ಆಗಿತ್ತು. ಊರವರ ಅಪಹಾಸ್ಯ, ಮನೆ ಮಂದಿಯ ಅಂಜಿಕೆಗಳನ್ನು ರೆಡ್ಡಿಯವರು ಎದುರಿಸ ಬೇಕಾಯ್ತು. ಆರಂಭದ ದಿನಗಳಲ್ಲಿ ಫಸಲಿನ ವಿಪರೀತ ಇಳಿತವನ್ನು ಇಬ್ಬರೂ ಎದುರಿಸಬೇಕಾಯ್ತು. ಹಾಗೇ ಪರ್ಯಾಯ, ಸಾವಯುವ ಕೃಷಿ ತಂತ್ರಜ್ಞಾನ, ಸಣ್ಣ ಪುಟ್ಟ ವಿಚಾರಗಳ ಬಗ್ಗೆ ಮಾರ್ಗದರ್ಶನ ಇಬ್ಬರಿಗೂ ತಕ್ಷಣ ದೊರಕದಾಯ್ತು. ಈ ರೀತಿಯ ಹೊಸ ಪ್ರಯೋಗಗಳಿಗೆ, ಸಾಂಸ್ಥಿಕ ಮೂಲದ ಸಾಲವೂ ದೊರೆಯದಾಯ್ತು. ಅದೇನಿದ್ದರೂ ರಾಸಾಯನಿಕ ಕೃಷಿಗೆ ಮಾತ್ರ ತಾನೆ. ರೆಡ್ಡಿಯವರಿಗೆ ಬಂದ ಹಣದ ಅಡಚಣೆ ಸ್ನೇಹಿತರ ನೆರವಿನಿಂದ ಸ್ವಲ್ಪ ಶಮನವಾಯ್ತಂತೆ. *ಈ ಇಬ್ಬರ ಕೆಚ್ಚೆದೆ, ಸ್ನೇಹಿತರು ನೀಡಿದ ಧೈರ್ಯ, ತಮ್ಮಷ್ಟಕ್ಕೆ ತಾವೇ ಪ್ರಯತ್ನಿಸುತ್ತಾ, ತಪ್ಪನ್ನು ಸರಿಪಡಿಸಿಕೊಳ್ಳುತ್ತಾ ಮುಂದುವರೆಯುವ ಶಕ್ತಿ ಇವರಿಗೆ ಯಶ ದೊರೆಯುವಂತೆ ಮಾಡಿದೆ.*

ಆಧ್ಯಾತ್ಮಿಕ ದೃಷ್ಟಿಕೋನ

ಮೇಲ್ಜಾತಿಯ, ವೈಧಿಕ ಕುಟುಂಬದಿಂದ ಬಂದಿರುವ ರಾಯರು ತಮ್ಮ ಕೃಷಿ ಪ್ರಯೋಗಗಳಲ್ಲಿ ಆಧ್ಯಾತ್ಮಿಕ ವಿಚಾರಗಳಿಗೆ ಹೆಚ್ಚು ಒತ್ತು ಕೊಡುವಂತಾಗಿರುವರು. ಹಾಗಾಗಿ ಪಂಚಗವ್ಯ, ಪಲಾಶ, ಧರ್ಬೆ ಇತ್ಯಾದಿ ವೈಧೀಕ ಆಚರಣೆಯ ವಿಚಾರ, ವಸ್ತುಗಳನ್ನು ಅವರು ತಮ್ಮ ಕೃಷಿಯಲ್ಲಿ ಹೇರಳವಾಗಿ ಬಳಸುತ್ತಿರುವರು. ಅವರ ದಿನನಿತ್ಯದ ಕೃಷಿಕಾರ್ಯ ಪ್ರಾರಂಭವಾಗುವುದೇ 'ಅಗ್ನಿ ಹೋತ್ರದ' ಆಚರಣೆಯ ಮೂಲಕ. ತಾಮ್ರದ ಪಾತ್ರೆಯಲ್ಲಿ ಅದೂ ಈಜಿಪ್ಟ್‌ನ ಪಿರಮಿಡ್ ತಲೆ ಆಕಾರದ್ದು, ಆಕಳ ಬೆರಣಿ, ತುಪ್ಪ ಪಾಲೀಶ್ ಮಾಡದ ಅಕ್ಕಿ ಇವುಗಳ ಧೂಪವನ್ನು ಆಕಾಶಕ್ಕೆ ಹರಿಸುವುದರಿಂದ ಗಾಳಿ ಶುದ್ಧವಾಗಿ, ಫಸಲು ರೋಗ ಮುಕ್ತವಾಗುವುದಾಗಿ ಇವರು ನಂಬಿರುವರು. ಇದೇ ರೀತಿ ಪಿರಮಿಡ್ ರಚನೆಯಲ್ಲೂ ಅಪಾರ ನಂಬಿಕೆ ಹೊಂದಿರುವರು. ಈ ಆಧ್ಯಾತ್ಮಿಕ ದೃಷ್ಟಿಕೋನದಿಂದ ತಮ್ಮ ಕೃಷಿ ಕಾರ್ಯವನ್ನು ನೋಡುವುದರಿಂದಲೇ ರಾಯರಿಗೆ ಪ್ರಾಣಿಗಳು, ಪಶುಪಕ್ಷಿ, ನೆಲ, ಜಲ, ನಿರುಪಯುಕ್ತ ಕಳೆಗಳು, ಕೂಡ ಅತ್ಯಂತ ಪವಿತ್ರವೂ, ಗೌರವಯುಕ್ತವಾಗಿಯೂ ಕಂಡುಬರುತ್ತದೆ. ಇನ್ನು ಇವರ ಮನೆ ಕೃಷಿ ನಿವಾಸಕ್ಕೆ ಬರುವ ನೂರಾರು ಸಂದರ್ಶಕರೂ, ರೈತರೂ, ಇತರರ ಬಗ್ಗೆಯೂ ಕೂಡ ಅಷ್ಟೇ ಪ್ರೀತಿ ಗೌರವದಿಂದ ಉಪಚಾರ ಮಾಡಲು, ಮುಂದಾಗಲು ರಾಯರ ಈ ಆಧ್ಯಾತ್ಮಿಕ ದೃಷ್ಟಿಕೋನವೇ ಮೂಲ ಕಾರಣವಾಗಿದೆ. ತಮ್ಮ ರೀತಿಯ ಕೃಷಿಯಲ್ಲಿ ತೊಡಗಬೇಕೆನ್ನುವವರಿಗೆ, ರಾಯರು ಈ ಮೂರು ಪ್ರಶ್ನೆಗಳನ್ನು ಹಾಕುತ್ತಾರೆ.

> "ನೀವು ನಿಮ್ಮ ಜಮೀನಿನಲ್ಲಿರುವ ಎಲ್ಲಾ ಸಸ್ಯಗಳನ್ನು ಒಮ್ಮೆಯಾದರು ಮುಟ್ಟಿ ಮಾತಾಡಿಸಿರುವಿರಾ ? ನಿಮ್ಮ ಪಾದ ನಿಮ್ಮ ಭೂಮಿಯ ಉದ್ದಗಲಕ್ಕೂ ಮುಟ್ಟಿದೆಯೆ ? ಎಂದಾದರೂ ಬಿಳಿ ಹಾಳೆಯ ಮೇಲೆ ಗಿಡಕ್ಕೆ ಏನು ಮಾಡಿಲ್ಲಾಂತ ಬರೆದಿರುವಿರುವಿರಾ?"

ರೆಡ್ಡಿಯವರ ಕೃಷಿ ಪದ್ಧತಿಯಲ್ಲಿ: ಆಧ್ಯಾತ್ಮಿಕತೆಯಾದರೋ ವ್ಯಾವಹಾರಿಕತೆಯೊಡನೆ ಬೆಸೆದುಕೊಂಡಿರುತ್ತದೆ. ಅವರು ಪೀಟರ್ ಪ್ರಾಕ್ಟರ್‌ರ ದನದ ಕೊಂಬಿನೊಳಗೆ ಸಗಣಿ ತುಂಬಿಸಿ, ಶಕ್ತಿಯುತ ಕಾಂಪೋಸ್ಟ್ ತಯಾರಿಸುವಿಕೆಯು, ಬಯೊಡೈನಾಮಿಕ್ ಕೃಷಿಯನ್ನು, "ಕೊಂಬು T V ಆ್ಯಂಟಿನಾ ರೀತಿ ಸೌರವಶಕ್ತಿಯುನ್ನು ಹೀರಿಕೊಂಡು, ಈ ಕಾಂಪೋಸ್ಟ್‌ನ್ನು ಶಕ್ತಿಯುತ ಗೊಳಿಸ ಬಲ್ಲದಲ್ಲವೇ" ಎಂದು ತಾರ್ಕಿಕವಾಗಿ ಕಾಣುತ್ತಾರೆ. "ಹಾಗೇ, ನನ್ನ ಈ ಜೈವಿಕ ಕೀಟ ಹತೋಟಿ ಕ್ರಮಗಳಿಂದ ಕ್ರಿಮಿ ಕೀಟಗಳನ್ನು ಓಡಿಸುವುದು ಉದ್ದೇಶವೇ ಹೊರತು, ಕೊಲ್ಲುವುದಲ್ಲ" ಎಂಬ ಮಾನವೇತರ ಜೀವಿಗಳ ಮೇಲಿನ ಅನುಕಂಪ ವ್ಯಕ್ತಪಡಿಸುತ್ತಾರೆ. ಅವರ ಮನೆಯಲ್ಲಿ ಪ್ರತಿನಿತ್ಯ ವಯಸ್ಸಾದ ನಿರ್ಗತಿಕರು ಊಟ ತಿಂಡಿಗೆ ಇದ್ದೇ ಇರುತ್ತಾರೆ. ಅವರ ಫಾರಂಗೆ ಬೇಟಿ ನೀಡಿದವರಿಗಂತೂ ಊಟ ತಿಂಡಿ ಹಾಕದೇ

ಹಿಂತಿರುಗಿಸುವುದು ಅವರ ಕುಟುಂಬದ ಯಾವ ಸದಸ್ಯರಿಗೂ ಅಸಾಧ್ಯದ ಮಾತಾಗಿರುತ್ತದೆ.

ಪ್ರಚಾರ, ಪ್ರಸರಣ ಮತ್ತು ಭವಿಷ್ಯ

ಈ ಇಬ್ಬರ ಕೃಷಿ ಪದ್ಧತಿಗೆ ರಾಜ್ಯಾದ್ಯಂತ ಅಷ್ಟೇಕೆ ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲೂ ಸಾಕಷ್ಟು ಪ್ರಚಾರ ಸಿಕ್ಕಿರುತ್ತದೆ. ಸಾವಯವ ಕೃಷಿಯಲ್ಲಿ ಆಸಕ್ತ ರೈತರು, ವಿದ್ಯಾರ್ಥಿಗಳು, ಸ್ವಯಂಸೇವಾ ಸಂಸ್ಥೆಗಳಿಂದ, ಕೃಷಿ, ತೋಟಗಾರಿಕಾ ಇಲಾಖಾ ಅಧಿಕಾರಿಗಳ ಹಿಂಡೇ ಇವರ ಫಾರಂಗೆ ದಿನನಿತ್ಯ ದೌಢಾಯಿಸುತ್ತಿರುತ್ತದೆ. ಸಾಲದ್ದಕ್ಕೆ ಇವರನ್ನು ಕರೆಸಿ ಚರ್ಚಾಗೋಷ್ಠಿ, ಸಮ್ಮೇಳನ, ತರಬೇತಿ ಶಿಬಿರಗಳಲ್ಲಿ ಗಂಟೆಗಟ್ಟಲೆ ಭಾಷಣವನ್ನೂ ಬಿಗಿಸಲಾಗುತ್ತಿದೆ. ಇವರುಗಳ ಈ ಸಾಧನೆಯನ್ನು ಗುರುತಿಸಿ ಇವರಿಬ್ಬರಿಗೂ ಆದರ, ಸನ್ಮಾನ, ಸ್ಥಾನಮಾನಗಳು ಹರಿದು ಬಂದಿರುತ್ತದೆ. ಶ್ರೀ ರೆಡ್ಡಿಯವರಿಗೆ ರಾಜ್ಯೋತ್ಸವ ಪ್ರಶಸ್ತಿಯಿಂದ ಹಿಡಿದು, 1995 ರಲ್ಲಿ ಕೃಷಿಕ ಸಮಾಜದವರು "ರಾಷ್ಟ್ರೀಯ ಏಕತಾ ಮತ್ತು ಕೃಷಿ ಮಿತ್ರ" ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಿರುತ್ತವೆ. ಹಾಗೇ ರಾಯರಿಗೆ ಕೃಷಿ ಸಂಬಂಧಿತ ಹಲವು ಸಂಘ ಸಂಸ್ಥೆಗಳು ಗೌರವಿಸಿದ್ದು, ಸಿಂಡಿಕೇಟ್ ಅಗ್ರಿಕಲ್ಚರಲ್ ಫೌಂಡೇಷನ್ ಆಡಳಿತ ಮಂಡಳಿ ಸದಸ್ಯತ್ವ, ಭಾರತೀಯ ಕಿಸಾನ್ ಸಂಘದ ಅಖಿಲಭಾರತ ಉಪಾಧ್ಯಕ್ಷ ಸ್ಥಾನದಿಂದ ಹಿಡಿದು 1995 ರಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ "ಚಿಂತನಾ" ಬಳಗವೆಂಬ ಸಾವಯವ ಕೃಷಿಗಾಗಿ ವಿದ್ಯಾರ್ಥಿಗಳ ಸಂಘಟನೆ ಕೂಡ ಸನ್ಮಾನಿಸಿ ಅಭಿನಂದನಾ ಪತ್ರ ನೀಡಿ ಗೌರವಿಸಿರುತ್ತದೆ.

ಇಷ್ಟಾದರೂ, ಈ ಇಬ್ಬರ ಕೃಷಿಪದ್ಧತಿಗಳು ಬೇರೆಡೆ ಪ್ರಸಾರವಾಗಿವೆಯೆ ಎಂಬ ಪ್ರಶ್ನೆಗೆ ಅಷ್ಟೇನೂ ತೃಪ್ತಿಕರ ಉತ್ತರ ದೊರೆಯಲಾರದು. ರೆಡ್ಡಿಯವರ ಕೃಷಿ ಪದ್ಧತಿಯನ್ನು ಮೊದಲು ಸುತ್ತಲಿನ ರೈತರು ಸಂಶಯದಿಂದ ನೋಡಿ, ಕೆಲವರು ಅಪಹಾಸ್ಯಮಾಡಿದ್ದೂ ಉಂಟು. ಈಗ ಅವರ ಬಗೆಗಿನ ಪ್ರಚಾರ, ಪುರಸ್ಕಾರ ನೋಡಿ ಸುತ್ತಮುತ್ತಲಿನವರು ಆ ಬಗ್ಗೆ ಗಮನ ಹರಿಸಿದರೆ ಮೌನವಾಗಿರುವರೇ ಹೊರತು ಅವರ ಪದ್ಧತಿಯನ್ನು ಸುತ್ತಮುತ್ತಲಿನ ರೈತರು, ಅಷ್ಟೇಕೆ ಸ್ವತಃ ಅವರ ಸಹೋದರ, ಶ್ರೀ ಚಂದ್ರಾ ರೆಡ್ಡಿಯೇ ಒಪ್ಪಲು ತಯಾರಿಲ್ಲ. ಆದರೆ ಈ ನಿಟ್ಟಿನಲ್ಲಿ ರಾಯರ ಪದ್ಧತಿ ಸಂಪೂರ್ಣವಲ್ಲದಿದ್ದರೂ, ಸ್ವಲ್ಪ ಮಟ್ಟಿಗಾದರೂ, ಮಲೆನಾಡ ಪ್ರಾಂತ್ಯದಲ್ಲಿ ಸುತ್ತಮುತ್ತಲಿನ ಕೆಲ ಸಾಹಸಿ ರೈತರ ಮೆಚ್ಚಿಗೆ ಪಡೆದು ಪ್ರಸರಿಸುವಂತಾಗಿದೆ. ಇದಕ್ಕೆ ರಾಯರ ಕೃಷಿ ನಿವಾಸದಲ್ಲಿ "ಪ್ರಯೋಗ ಪರಿವಾರದ" ಮೂಲಕ ತಿಂಗಳಿಗೊಮ್ಮೆ ನಡೆಸುವ ರೈತರ ಸಭೆ, ಪ್ರಾತ್ಯಕ್ಷಿಕೆ, ಅವರ ಕಿಸಾನ್ ಸಭೆಯ ಸಹವಾಸಗಳು ಸ್ವಲ್ಪ ಮಟ್ಟಿಗೆ ಕಾರಣವಾಗಿವೆ. ಜೊತೆಗೆ ಅವರ ಮಲೆನಾಡಿನ ಅಡಿಕೆ ಆಧಾರಿತ ಕೃಷಿ ಅಷ್ಟೇನೂ ರಾಸಾಯನಿಕಗಳನ್ನು ಬೇಡದೇ ಸಾವಯವ ಕೃಷಿಗೆ ಬೇಗನೇ ಹೊಂದಿಕೊಳ್ಳುವುದೂ, ಜೊತೆಗೆ ಹಸಿರೆಲೆಗೊಬ್ಬರ, ಕೃಷಿ ಮೂಲಕ ತ್ಯಾಜ್ಯ ಇತ್ಯಾದಿ ಸಾವಯವ ಪದಾರ್ಥಗಳು ಕಾಂಪೋಸ್ಟ್‌ಗೆ ಹೇರಳವಾಗಿ ದೊರಕುವುದೂ ಕಾರಣ ಗಳಿರಬಹುದು.

ಈ ನಿಟ್ಟಿನಲ್ಲಿ ರೆಡ್ಡಿಯವರ ಸಾಧನೆ ಒಂದು ಪಟ್ಟು ಹೆಚ್ಚಿನದು ಎಂದರೆ ತಪ್ಪಾಗಲಾರದು. ಅವರದ್ದು ಹೇಳಿಕೇಳಿ ಬೆಂಗಳೂರು ನಗರದ ಹೊರವಲಯದ ಒಣ ಪ್ರದೇಶ. ಇಲ್ಲಿ ಕಾಂಪೋಸ್ಟ್‌ಗೆ ಅಗತ್ಯದ ಸಾವಯವ ಪದಾರ್ಥಗಳ ಹೊಂದಾಣಿಕೆ ಸ್ವಲ್ಪ ಕಷ್ಟವೇ ಸರಿ. ಈ ಕಾಂಪೋಸ್ಟ್ ತಯಾರು ಮಾಡಲು ತಗುಲುವ ಶ್ರಮವಾದರೂ ಅಪಾರವಾಗಿರುತ್ತದೆ. ಜೊತೆಗೆ ಸುತ್ತಲೆಲ್ಲಾ ರಾಸಾಯನಿಕಗಳನ್ನು ಬೇಡುವ ತರಕಾರಿ, ಹಿಪ್ಪುನೇರಳೆ, ಪುಷ್ಪ ಕೃಷಿ ಮುಂತಾದ ವಾಣಿಜ್ಯ ಬೆಳೆಗಳೇ. ಈ ಪರಿಸರದಲ್ಲಿ ನಾರಾಯಣರೆಡ್ಡಿ ಸಾವಕೃಷಿಯಲ್ಲಿ ತೊಡಗುವಂತಾಗಿರುವುದೇ ಒಂದು ದೊಡ್ಡ ಸಾಧನೆಯಾದರೆ ಇದೇ ಪರಿಸರವೇ ಅವರ ಈ ಕೃಷಿ ಪದ್ಧತಿ ಪಸರಿಸದಂತಾಗಲು ಒಂದು ದೊಡ್ಡ ತೊಡಕಾಗಿದೆ ಎಂದರೆ ತಪ್ಪಾಗಲಾರದು.

ಇನ್ನು ಇವರಿಬ್ಬರ ಕೃಷಿ ಪದ್ಧತಿಗಳು ಮುಂದುವರಿಯುವ ಲಕ್ಷಣ ಇದೆಯೆ ? ಈ ನಿಟ್ಟಿನಲ್ಲಿ ರಾಯರು ಅಪಾರ ನಿಗವಹಿಸಿರುವರು. ಅವರ ಕುರುವಳ್ಳಿ "ಕೃಷಿ ನಿವಾಸ" - ನಿಜವಾಗಿಯೂ ಒಂದು ಪ್ರಯೋಗ ಶಾಲೆಯಾಗಿದ್ದು, ಅಲ್ಲೊಂದು ಪುಟ್ಟ ಪರಿವಾರವೇ ಈಗ ರೂಪುಗೊಳ್ಳುತ್ತಿದೆ. ಸಾಂಪ್ರದಾಯಕ ಬೇಸಾಯ ಪದ್ಧತಿಗಳ ಬಗೆಗಿನ ಎಲ್ಲಾ ಪುಸ್ತಕ, ಬರಹಗಳ ಒಂದು ಗ್ರಂಥಾಲಯವನ್ನೇ ತಮ್ಮ "ಕೃಷಿ ನಿವಾಸದಲ್ಲಿ" ಸ್ಥಾಪಿಸುತ್ತಲಿರುವರು. ತಮ್ಮ ಈ ಪ್ರಯೋಗವನ್ನು ಮುಂದುವರೆಸಲು ಇಬ್ಬರು ಉತ್ಸಾಹಿ ಕೃಷಿ ಪದವೀಧರರಾದ ಆನಂದ ಮತ್ತು ಅರುಣಕುಮಾರರನ್ನು ಈಗಾಗಲೇ ರಾಯರು ಸಾಕಷ್ಟು ತಯಾರುಮಾಡಿ, ಇವರ ಮೇಲ್ವಿಚಾರಣೆಯಲ್ಲಿ ಸಾಗರದ ಸಮೀಪ "ಸಂಜೀವನಾ ಸಾವಯವ ಕೃಷಿ ಸಂಶೋಧನಾ ಸಂಸ್ಥೆ" ಯನ್ನು ಈಗಾಗಲೇ ಹುಟ್ಟುಹಾಕಿರುವರು. ಭಾರತೀಯ ಕಿಸಾನ್ ಸಂಘ, ಅದರ ಪೋಷಕ ರಾಜಕೀಯ ಪಕ್ಷವಾದ ಭಾರತೀಯ ಜನತಾ ಪಕ್ಷದ ತತ್ವಧಾರೆಗೆ ರಾಯರ ಈ ಕೃಷಿ ಪದ್ಧತಿ ವಿಚಾರಧಾರೆಗಳು ಹೇಳಿ ಮಾಡಿಸಿದಂತಿರುವುದರಿಂದ, ರಾಯರ ಈ ಪ್ರಯತ್ನ ಒಂದು ಸಾಂಸ್ಥಿಕ ರೂಪ ಪಡೆದು, ಸುವ್ಯಸ್ಥಿತಗೊಳ್ಳುವುದೇನೂ ಕಷ್ಟವಾಗಲಾರದು.

ರಾಯರ ಕೃಷಿ ಪದ್ಧತಿ ಮುಂದುವರೆಯಲು ಹೀಗೆ ಬಾಹ್ಯದಿಂದ ಶಕ್ತಿ ದೊರೆತಿದ್ದರೆ, ರೆಡ್ಡಿಯವರ ಕೃಷಿ ಮುಂದುವರೆಯುವಂತಾಗಲು ಆಂತರಿಕವಾಗಿ ಅಷ್ಟೆ ಸತ್ವಶಾಲಿಯಾಗಿದೆ. ಇವರ ಇಡೀ ಕುಟುಂಬವೇ ಇವರ ಈ ಪದ್ಧತಿಯನ್ನು ಒಪ್ಪಿ ಇವರ ಜೊತೆ ಕೈಗೂಡಿಸಿರುವರು. ದೊಡ್ಡ ಮಗ ಮಂಜುನಾಥ ನಂತೂ ಈಗಾಗಲೇ ರೆಡ್ಡಿಯ ಸಕಲ ಜ್ಞಾನ ವಿದ್ಯೆಗಳನ್ನೂ ಪಡೆದು ಸೊರಹುಣಸೆಯ ಫಾರಂನ ಜವಾಬ್ದಾರಿ ಹೊತ್ತಿರುವನು. ಬೆಂಗಳೂರು ಬೃಹತ್‌ನಗರದ ಕೈಗಾರಿಕಾ ಬೆಳವಣಿಗೆಯ ಹಾವಳಿಯಿಂದ ಸುತ್ತಮುತ್ತಲಿನ ಕೃಷಿ ಭೂಮಿಗೆ ಸಿಕ್ಕಾಪಟ್ಟೆ ಬೆಲೆ ಬಂದು ರೆಡ್ಡಿಯವರ ಹಳ್ಳಿಯ ರೈತರು ಈಗಾಗಲೇ ತಮ್ಮ ಭೂಮಿಯನ್ನು ಮಾರಾಟಮಾಡಿ ಪಟ್ಟಣ ಸೇರಿದ್ದರೂ, ರೆಡ್ಡಿಯವರ ಕುಟುಂಬ, ಅದರಲ್ಲೂ ಈ ಹಿರಿಮಗ ಸಡ್ಡು ಹೊಡೆದು ನಿಂತು ತಂದೆಯ ಈ ಪ್ರಯೋಗವನ್ನು ಮುಂದುವರೆಸುವ ಪಣ ತೊಟ್ಟಿರುವನು. ಆದರೆ ಈ ಬಗ್ಗೆ ಮುಂದಾಲೋಚನೆ ಮಾಡಿದ ರೆಡ್ಡಿಯವರಾದರೂ ದೊಡ್ಡಬಳ್ಳಾಪುರದ ಹತ್ತಿರದ ಹಳ್ಳಿಯೊಂದಕ್ಕೆ ತಮ್ಮ ಕಾರ್ಯಕ್ಷೇತ್ರವನ್ನು ನಿಧಾನವಾಗಿ ಬದಲಾಯಿಸುವ ತಯಾರಿ ನಡೆಸಿರುವರು. ಇವೆಲ್ಲಕ್ಕಿಂತ ಮುಖ್ಯವಾಗಿ, ದೊಡ್ಡ ದೊಡ್ಡ ಕಂಪೆನಿಗಳೂ, ವಾಣಿಜ್ಯಪತಿಗಳೂ ರೆಡ್ಡಿಯವರ ಈ ಕೃಷಿ ಪದ್ಧತಿಯ ಮೇಲೆ ಈಗಾಗಲೇ ಕಣ್ಣು ಹಾಕಿದ್ದು, ಅವರ ನೆರವಿನಿಂದ ಈ ಸಾವಯವ ಕೃಷಿಯನ್ನು ವಾಣಿಜ್ಯಮಯ ಗೊಳಿಸುವ ತಯಾರಿ ನಡೆಸಿರುವರು. (ಈ ಅಪಾಯ ರಾಯರ ವೆನಿಲ್ಲಾ ತತ್ವದ ಆದಾರಿತ ಕೃಷಿಗೂ ತಾಗಬಹುದಾಗಿದೆ). ಇಂದು ಈ ಸಾವಯವ ಕೃಷಿ ಜಾಗತಿಕ ಮಟ್ಟದಲ್ಲಿ ಅತ್ಯಂತ ಅಷ್ಟೇ ಆಕರ್ಷಣೀಯವಾಗಿದ್ದು, ಸಾವಯವ ವಸ್ತುಗಳು ಅಷ್ಟೇ ಲಾಭದಾಯಕವಾಗುತ್ತಿರುವಾಗ ರೆಡ್ಡಿ, ರಾಯರ ಮೇಲೆ ಈ ನವಜಾಗತೀಕರಣ ಶಕ್ತಿಗಳ ಕಣ್ಣು ಬೀಳುವಂತಾದಲ್ಲಿ ಆಶ್ಚರ್ಯ ಪಡಬೇಕಾಗಿಲ್ಲ.

ಆದರೆ ರಾಯರ ಪದ್ಧತಿ ಮತ್ತು ತತ್ವಗಳು ಭಾ.ಜ.ಪ ದಂತಹ ಪ್ರತಿಗಾಮಿ ಪಕ್ಷಗಳ ಕೈವಶವಾಗಿ ರಾಜಕೀಯ ವಾಗುವುದಾಗಲೀ ಹಾಗೆಯೇ ಇವರಿಬ್ಬರ ಪದ್ಧತಿಗಳು ಜಾಗತೀಕರಣ ಶಕ್ತಿಗಳ ವಶವಾಗಿ 'ವಾಣಿಜ್ಯ'ಮಯ ವಾಗುವುದಾದಲ್ಲಿ, ಅದರಿಂದ ಈ ದೇಶದ ಕೃಷಿಗೆ, ಭೂಮಿಗೆ, ರೈತರಿಗೆ ಏನೂ ಉಪಕಾರವಾಗುವುದಿಲ್ಲ ಮಾತ್ರವಲ್ಲ ಅದೊಂದು ದೊಡ್ಡ ದುರಂತವಾಗುವ ಅಪಾಯವಿರುತ್ತದೆ.

ಅದೇನೇ ಆದರೂ ಇಳುವರಿ ಹೆಚ್ಚಳ, ವೆಚ್ಚದ ಉಳಿತಾಯ, ಆರ್ಥಿಕವಾಗಿ ಲಾಭದಾಯಕತೆ, ಪರಿಸರದ ಸಂರಕ್ಷಣೆ, ಮನೆಮಂದಿಗೆಲ್ಲಾ ತೃಪ್ತಿ, ಕೂಲಿಗಾರರಿಗೆ ಅಧಿಕ ಮತ್ತು ಹಿತಕರ ವಾತಾವರಣದ ಉದ್ಯೋಗ, ಪ್ರಾಣಿ, ಪಶು ಪಕ್ಷಿಗಳಿಂದ ಇತರ ಎಲ್ಲಾ ಮಾನವೇತರ ಜೀವಿಗಳ ಬಗ್ಗೆ ಕಾಳಜಿ, ಕೃಷಿಯಲ್ಲಿ ವ್ಯಾವಹಾರಿಕ ದೃಷ್ಟಿಕೋನದ ಜೊತೆಗೆ, ಆಧ್ಯಾತ್ಮಿಕತೆಯ ಅನುಬಂಧ, ಸಮುದಾಯಕ್ಕೆ ರಾಸಾಯನಿಕಗಳಿಂದ ಮುಕ್ತ ಪುಷ್ಟಿದಾಯಕ ಆಹಾರ, ಇನ್ನೂ ಹೇಳಬೇಕೆಂದರೆ ಪುರುಷೋತ್ತಮ ರಾಯರಿಂದ ದೇಶ ವಿದೇಶಿಗರಿಗೆ ಸಾವಯವ ವೆನಿಲ್ಲಾ ಮತ್ತು ಆ ಮೂಲಕ ವಿದೇಶಿ ವಿನಿಮಯದ ಸಾಧ್ಯತೆ, ಹೀಗೇ ಇಂದು ನಮ್ಮ ಕಲ್ಪನೆಯ ಸುಸ್ಥಿರ ಕೃಷಿಯ ಹಲವು ಹತ್ತಾರು ಲಕ್ಷಣಗಳನ್ನು ಈ ಇಬ್ಬರು ಕೃಷಿ ಋಷಿಗಳ ಬೇಸಾಯ ಪದ್ಧತಿ ಒಳಗೊಂಡಿರುತ್ತದೆ ಎಂಬುದು ನಿರ್ವಿವಾದ ವಿಚಾರಗಳಾಗಿರುತ್ತವೆ.

ಅಂದ ಮಾತ್ರಕ್ಕೆ ಸಮಗ್ರ ಮಟ್ಟದಲ್ಲಿ ಬೇರೆಲ್ಲಾ ರೈತರು ನಕಲು ಮಾಡಲು ಈ ಇಬ್ಬರ ಕೃಷಿ ಪದ್ಧತಿ ಯೋಗ್ಯ ಮಾದರಿಯಾಗಬಲ್ಲದೆ ಎಂಬ ಪ್ರಶ್ನೆಗೆ ಸಮಂಜಸ ಉತ್ತರ ಸಿಗಲಾರದು. ಈ ಪದ್ಧತಿ ಈ ಇಬ್ಬರು ರೈತರಿಗೆ ವ್ಯಾವಹಾರಿಕವಾಗಿ ಲಾಭ, ತೃಪ್ತಿ, ಹೆಸರು ದೊರಕಿಸಬಹುದು. ಸಮಗ್ರ ಮಟ್ಟದಲ್ಲಿ, ಅದು ಲಕ್ಷಾಂತರ ಜನ ಈ ದೇಶದಲ್ಲಿ ಊಟವಿಲ್ಲದೇ ಬಳಲುತ್ತಿರುವಾಗ, ಅಧಿಕ ಆಹಾರ ಉತ್ಪಾದಿಸಿ, ಅವರ ಹಸಿವು ಬಡತನ ನೀಗಿಸುವಲ್ಲಿ ಇದೇ ಮಾದರಿ ಸೂಕ್ತ ಪರಿಹಾರವಾಗಲಾರದು. ರಾಗಿ, ಬತ್ತಗಳಂತಹಾ ಅತ್ಯಗತ್ಯ ಆಹಾರ ಬೆಳೆಗಳು ಇವರಿಬ್ಬರ ಕೃಷಿ ಪದ್ಧತಿಯಲ್ಲಿ ಅಲ್ಪ ಸ್ಥಾನ ಪಡೆದಿರುತ್ತದೆ. ಬದಲಿಗೆ ಅಡಿಕೆ, ಹಿಪ್ಪುನೇರಳೆ, ವೆನಿಲಾಗಳು ಇಲ್ಲಿ ಪ್ರಮುಖವಾಗಿವೆ. ಇದು ವೈವಿಧ್ಯಮಯ ಬೇಸಾಯದ ಒಂದು ಮಿತಿಯೂ ಹೌದು.

ಮಿಗಿಲಾಗಿ ವೈಯಕ್ತಿಕವಾಗಿ ರೈತರ ಮಟ್ಟದಲ್ಲಿ ನೋಡಿದರೆ, ಅದರಲ್ಲಿ ಸ್ವಹಿತ, ಲಾಭ, ಸಂತೃಪ್ತಿ ಮುಖ್ಯವಾಗಿದ್ದು, ಸಮೂಹದ ಹಿತದ ದೃಷ್ಟಿಯಿಂದ, ದೇಶಕ್ಕೆ ಅನ್ನ ನೀಡುವಂತೆ ಮಾಡಲು ಈ ಸ್ವಹಿತವನ್ನು ಬಲಿಕೊಡುವಂತೆ ಮಾಡುವುದು ಕಷ್ಟಸಾಧ್ಯವಾಗುತ್ತದೆ.

ಸುಸ್ಥಿರ ಕೃಷಿ ಅಭಿವೃದ್ಧಿಯ ಸಾಧನೆಯಲ್ಲಿ ರೈತ ಅಥವಾ ಆತನ ಹೊಲ ಅಥವಾ ಫಾರಂ ಸೂಕ್ತ ಅನ್ವಯಕ ಘಟಕವಾಗಲಾರದು. ಇದಕ್ಕಿಂತ ವಿಸ್ತೃತವಾದ, ಸಾಮಾಜಿಕ ಮತ್ತು ಪರಿಸರ ಲಕ್ಷಣಗಳನ್ನು ಒಳಗೊಂಡಿರುವಂತಹ ಘಟಕ ಅಗತ್ಯವಾಗಿರುತ್ತದೆ.

ಗ್ರಾಮ ಅಥವಾ ಜಲಾಯನ ಪ್ರದೇಶ, ಅದಕ್ಕಿಂತ ಮೇಲ್ಪಟ್ಟ ಘಟಕ ಈ ದೃಷಿಯಿಂದ ಸೂಕ್ತವಾಗಿರುತ್ತದೆ.

ಅಂದ ಮೇಲೆ, ಈ ದೃಷ್ಟಿಯಿಂದ ಇಲ್ಲಿ ರಾಯರು, ರೆಡ್ಡಿಯವರ ಸ್ಥಾನ ಮಾನವೇನು ?

ಕೃಷಿ ಅಭಿವೃದ್ಧಿ ಎಂಬುದು ಹೊಸ ತಂತ್ರಜ್ಞಾನವನ್ನು ರೈತರೆಡೆಗೆ ವರ್ಗಾಯಿಸುತ್ತಾ, ಅವರಿಗೆ ಹೊರಗಿನಿಂದ ಹಣ, ಹೂಡಿಕೆಗಳನ್ನು ಸರಬರಾಜು ಮಾಡುತ್ತಾ, ಹೊಸ ಪದ್ಧತಿ, ತಂತ್ರಗಳನ್ನು ಅವರ ತಲೆಯಲ್ಲಿ ತುಂಬುವುದರಿಂದ ಮಾತ್ರ ಸಾಧ್ಯ ಎಂಬ ನಮ್ಮ ಕೃಷಿ ಪಂಡಿತರ ನಂಬಿಕೆಗಳನ್ನು ಹುಸಿಗೊಳಿಸಿ, ರೈತರಲ್ಲೇ ಅಡಕವಾಗಿರುವ ಅದ್ಭುತ ಅನ್ವೇಷಣಾ ಪ್ರವೃತ್ತಿ, ಸಾಹಸಗಳಿಂದ ಅಪಾರ ಪ್ರಗತಿ ಸಾಧಿಸಬಹುದೆಂಬುದನ್ನು ಈ ಇಬ್ಬರು ರೈತರು ತೋರಿಸಿಕೊಟ್ಟಿರುವರು. ಹೊರಗಿನ ತಂತ್ರಜ್ಞಾನ, ಹಣ, ಹೂಡಿಕೆ, ಮಾರುಕಟ್ಟೆ ವ್ಯವಸ್ಥೆ ಇವೆಲ್ಲಾ ಅಗೌಣವಾಗಿ ವ್ಯಕ್ತಿ ಕೇಂದ್ರೀಕೃತವಾಗಿದ್ದಲ್ಲಿ ಅದರಿಂದ ಅದ್ಭುತ ಅಭಿವೃದ್ಧಿ ಸಾಧ್ಯತೆ ಇದೆ ಎನ್ನುವುದಕ್ಕೆ ಇವರಿಬ್ಬರೂ ಜೀವಂತ ನಿದರ್ಶನವಾಗಿದ್ದು, ಇಂತಹಾ ರಾಯರು, ರೆಡ್ಡಿಯವರು ನಮ್ಮ ಪ್ರತಿ ಹಳ್ಳಿಯಲ್ಲಿ ಹುಟ್ಟುವಂತೆ ಮಾಡಬೇಕಾಗಿದ್ದು, ಅನಂತರ ತಂತ್ರಜ್ಞಾನ ಇತ್ಯಾದಿಗಳ ಬಗ್ಗೆ ಯೋಚಿಸುವುದನ್ನು ನಮ್ಮ ಕೃಷಿ ಪಂಡಿತರು ಕಲಿಯಬೇಕಾಗಿದೆ. ಅದಕ್ಕಾಗಿ *ಈ ಇಬ್ಬರ ಪ್ರಯೋಗ, ಬದುಕಿನ ರೀತಿ 'ಮಲಿನ'ವಾಗದಂತೆ, ಸತ್ವ ಕಳೆದುಕೊಳ್ಳದಂತೆ ನೋಡಿಕೊಳ್ಳುವುದು ನಮ್ಮ ನಿಮ್ಮ ಎಲ್ಲರ ಕರ್ತವ್ಯವಾಗಿದೆ.*

ಪುಷ್ಟಿಕರ ಹುರಿಹಿಟ್ಟು

ವ್ಯವಸ್ಥಿತಗೊಳ್ಳುತ್ತಿರುವ ಹಿತ್ತಲಗಿಡ

ಹುರಿಹಿಟ್ಟು ಎಂದೊಡನೇ ನಮ್ಮ ಬಾಲ್ಯದಲ್ಲಿ ಅಜ್ಜಿ ಅಥವಾ ತಾತ ರಾತ್ರಿ ಫಲಹಾರಕ್ಕೆ ಹುರಿಹಿಟ್ಟು ತಿನ್ನುವಾಗ ನಾವೂ ಹೋಗಿ ಕೈಚಾಚಿ ತಿನ್ನುತ್ತಿದ್ದ ಮಧುರಸ್ಮೃತಿ ತೇಲಿ ಬರುತ್ತದೆ. ಏಕದಳ ಧಾನ್ಯ ಅಥವಾ ಒರಟು ಧಾನ್ಯಗಳಾದ ಅಕ್ಕಿ, ಜೋಳ, ರಾಗಿ ಮುಂತಾದವುಗಳನ್ನು ಅರಳು ಮಾಡಿ ಹಿಟ್ಟು ಮಾಡಿಸಿದಾಗ ಹುರಿಹಿಟ್ಟು ದೊರೆಯುತ್ತದೆ. ಆಕರ್ಷಕ ರೂಪ, ವಿಶಿಷ್ಟ ಸುವಾಸನೆ ಹಾಗೂ ರುಚಿಕರ ಸ್ವಾದವುಳ್ಳ ಅರಳು ಹಾಗೂ ಅದರಿಂದ ತಯಾರಿಸುವ ಹುರಿಹಿಟ್ಟು ತಿನ್ನಲು ಸಿದ್ಧವಾಗಿರುವ, ಸುಲಭವಾಗಿ ಪಚನವಾಗುವ ಎಲ್ಲ ವಯಸ್ಸಿನ ಜನರಿಗೆ ತಕ್ಕುದಾದ ಉಪಯುಕ್ತ ಆಹಾರ.

ಹೆಚ್ಚು ಜನರಿಗೆ ಪರಿಚಿತವಾದದ್ದು ಮುಸುಕಿನ ಜೋಳದ ಅರಳು (Popcorn), ಬತ್ತದ ಅರಳು ಹಾಗೂ ಪುರಿ. ಉತ್ತರ ಕರ್ನಾಟಕದ ಕಡೆ ಜೋಳದ ಅರಳು ಜನಪ್ರಿಯವಾದರೆ ದಕ್ಷಿಣ ಕರ್ನಾಟಕದಲ್ಲಿ ರಾಗಿ ಹಾಗೂ ಭತ್ತದ ಅರಳು ಸಾಮಾನ್ಯ. ಸಜ್ಜೆ, ದಂಟಿನ ಬೀಜದಿಂದಲೂ ಅರಳನ್ನು ತಯಾರಿಸುತ್ತಾರೆ. ಉತ್ತಮ ಅರಳು ಎಂದರೆ 100 ಧಾನ್ಯಕ್ಕೆ 90 ಅರಳುಗಳಾದರೂ ಅರಳಬೇಕು. ಹಾಗೂ ಕಾಳಿನ ಮೂಲ ಗಾತ್ರಕ್ಕಿಂತ 8 ರಿಂದ 20 ಪಟ್ಟು ಉಬ್ಬಬೇಕು. ಅರಳು ಹೆಚ್ಚು ಉಬ್ಬಿದಷ್ಟು ಅದರ ಗುಣಧರ್ಮ ಹಾಗೂ ಪಾಕಗುಣ ಉತ್ತಮಗೊಳ್ಳುವುದು.

ಅರಳು ಮಾಡುವಿಕೆ ಎಂದರೆ ಕಾಳನ್ನು ಅತಿ ಹೆಚ್ಚು ಉಷ್ಣತೆಗೆ ಕಡಿಮೆ ಸಮಯ ಒಡ್ಡುವುದು. ಆಗ ಕಾಳಿನಲ್ಲಿಯ ನೀರಿನಂಶ ಒಮ್ಮೆಲೇ ಆವಿಯಾಗಿ ಒಳಗೆ ಒತ್ತಡ ಉಂಟಾಗಿ ಹೊರಪೈಯನ್ನು ಒಡೆದು ಹೊರಬರುವುದು. ಹೀಗಾಗುವಾಗ ಕಾಳಿನಲ್ಲಿಯ ಪಿಷ್ಟಮಯ ಪದಾರ್ಥವು ಆವಿಯಲ್ಲಿ ಬೆಂದರೀತಾಗುವುದು. ಇದರಿಂದಾಗಿಯೇ ಅರಳುಗಳನ್ನು ಮತ್ತೆ ಬೇಯಿಸದೇ ಹಾಗೆಯೇ ತಿಂದು ಯಾವ ತೊಂದರೆಯೂ ಇಲ್ಲದೆ ಜೀರ್ಣಿಸಿಕೊಳ್ಳಬಹುದು. ಧಾನ್ಯಗಳಲ್ಲಿ ಚೆನ್ನಾಗಿ ಅರಳಾಗುವ ಯೋಗ್ಯ ತಳಿಗಳನ್ನು ಆಯ್ದುಕೊಂಡು ಮಾಡುವುದು ಉತ್ತಮ. ರಾಗಿಗಳಲ್ಲಿ 'ಪೂರ್ಣಾ' ತಳಿಯು ಅರಳು ಮಾಡಲು ಯೋಗ್ಯ ತಳಿ. ಕಾಳುಗಳಲ್ಲಿ ಶೇ 18 ರಿಂದ 20 ರಷ್ಟು ನೀರಿನಂಶ ಇರುವಂತೆ ನೀರನ್ನು ಸಿಂಪಡಿಸಿ ಅಥವಾ 5 ನಿಮಿಷ ನೀರಿನಲ್ಲಿ ನೆನೆಸಿ ಬಸಿದು ಗಂಟೆಗಳ ನಂತರ ಅರಳು ಮಾಡಲು ಉಪಯೋಗಿಸಬೇಕು. ಅರಳು

ಮಾಡುವಾಗ ಮರಳನ್ನು ಕಾಯಿಸಿ ಅದರಲ್ಲಿ ಕಾಳುಗಳನ್ನು ಹಾಕುವುದು ವಾಡಿಕೆ. ಆದರೆ ಅದಕ್ಕಿಂತ ಅರ್ಧ ಕೆ.ಜಿ.ಪುಡಿ ಉಪ್ಪನ್ನು ಚೆನ್ನಾಗಿ ಕಾಯಿಸಿ ಅದರಲ್ಲಿ ಅರಳು ಮಾಡಿ ನಂತರ ದೊಡ್ಡಕಣ್ಣಿನ ಜರಡಿಯಲ್ಲಿ ಶೋಧಿಸಿದರೆ ಉತ್ತಮ. ಅಧಿಕ ಪ್ರಮಾಣದಲ್ಲಿ ತಯಾರಿಸಿ ಹಿಟ್ಟನ್ನು ಮಾಡಿಸಿಟ್ಟುಕೊಳ್ಳಬಹುದು. ಹುರಿದ ಹೆಸರುಹಿಟ್ಟು, ಕಡಲೆಪುರಿಯ ಹಿಟ್ಟುಗಳೊಂದಿಗೆ ಈ ಹಿಟ್ಟನ್ನು ಬೆರೆಸಿ ಬೆಲ್ಲದ ಪುಡಿ ಅಥವಾ ಸಕ್ಕರೆ, ಏಲಕ್ಕಿಪುಡಿ, ಬಿಸಿಹಾಲಿಗೆ ಬೆರೆಸಿ ಹುರಿಹಿಟ್ಟನ್ನು ತಯಾರಿಸಿ ತಿನ್ನಬಹುದು. ಇಲ್ಲವೇ ಕೊಬ್ಬರಿತುರಿ, ಹುರಿಗಡಲೆ ಪುಡಿ, ಬೆಲ್ಲದ ಪುಡಿ, ಏಲಕ್ಕಿಯೊಂದಿಗೆ ಬೆರೆಸಿ ಪುಡಿಮಾಡಿ ಅಥವಾ ಉಂಡೆಗಳನ್ನು ತಯಾರಿಸಿ ಸೇವಿಸಬಹುದು. ಚೆನ್ನಾಗಿ ಪುಡಿಮಾಡಿದ ಅರಳು, ಪುಡಿಮಾಡಿದ ಕಡಲೆಪುರಿ, ಕೆನೆರಹಿತ ಹಾಲಿನಪುಡಿ ಇವನ್ನು 60:30:10 ಪ್ರಮಾಣದಲ್ಲಿ ಬೆರೆಸಿ ಏಲಕ್ಕಿ ಪುಡಿಯನ್ನು ಬೆರೆಸಿಟ್ಟುಕೊಂಡು ಗಾಳಿಯಾಡದ ಡಬ್ಬಗಳಲ್ಲಿ ತುಂಬಿಟ್ಟುಕೊಳ್ಳ ಬಹುದು. ಬೇಕಾದಾಗ ಕಾಯಿಸಿದ ಹಾಲು ಮತ್ತು ಬೆಲ್ಲ ಸಕ್ಕರೆ ಬೆರೆಸಿ ಚಿಕ್ಕಮಕ್ಕಳು, ವೃದ್ಧರಿಗೆ ಆಹಾರರೂಪದಲ್ಲಿ ಕೊಡಬಹುದು. ಹಾಲಿನ ಬದಲಾಗಿ ಬಿಸಿನೀರನ್ನು ಸೇರಿಸಿದರೂ ಸಾಕು ಸಾಕಷ್ಟು ಪುಷ್ಟಿಕರ ಆಹಾರ. ಸುಲಭವಾಗಿ ಜೀರ್ಣವಾಗುವ ರೂಪದಲ್ಲಿ ಸಿಕ್ಕಂತಾಗುವುದು. ಹುರಿಹಿಟ್ಟನ್ನು ಕಾಲುಭಾಗದಷ್ಟು ರೊಟ್ಟಿಹಿಟ್ಟಿಗೆ ಬೆರೆಸಿ ಪುಷ್ಟಿಕರ ರೊಟ್ಟಿಯನ್ನು ತಯಾರಿಸಬಹುದು. ರುಚಿಕರ, ಪುಷ್ಟಿಕರ ಹುರಿಹಿಟ್ಟನ್ನು ನೀವೂ ತಯಾರಿಸಿ ತಿಂದು ನೋಡುವಿರಿ ತಾನೆ ?

ಬನುದೇಶಪಾಂಡೆ
ಗ್ರಾಮೀಣ ಗೃಹ ವಿಜ್ಞಾನ ವಿಭಾಗ,
ಕೃ.ವಿ.ವಿ. ಬೆಂಗಳೂರು.

ಸ್ಪಷ್ಟೀಕರಣ

ಪತ್ರಿಕೆ ನೋಂದಣಿ ಕಾರಣ 1996ರ ಸಂಪುಟ, ಸಂಚಿಕೆಯ ಕ್ರಮ ಸಂಖ್ಯೆಯಲ್ಲಿ ವ್ಯತ್ಯಾಸವಾಗಿದೆ. ಹಿತ್ತಲಗಿಡ ವರ್ಷಕ್ಕೆ ಒಂದು "ಪೈರು" (Volume) ಅದರಲ್ಲಿ ಮೂರು "ಕೊಯಿಲ" (Number) ಸಂತ ಹೊರಬರುತ್ತದೆ. ಅನಿವಾರ್ಯ ಕಾರಣಗಳಿಂದ ಕೆಲವೊಮ್ಮೆ ಸಂಚಿತ (Combined) ಕೊಯಿಲುಗಳಿರುತ್ತವೆ. 1996, Vol.1, No.2, October-December ನ ಸಂಚಿಕೆಯನ್ನು ಪೈರು ೧, ಕೊಯಿಲು ೧,೨ ಎಂದು ಪರಿಗಣಿಸ ಬೇಕಾಗಿ ವಿನಂತಿ. ಸಂ.

ಕಾಣೆಯಾಗುತ್ತಿರುವ ಹಿತ್ತಲಗಿಡ

ಕಮಲಾಪುರದ ಕೆಂಪುಬಾಳೆ

ಗುಲಬರ್ಗಾ ನಗರದಿಂದ 40 ಕಿ.ಮಿ. ದೂರದಲ್ಲಿ ಕಮಲಾಪುರ ಎಂಬ ಒಂದು ಗ್ರಾಮ. ಗುಲಬರ್ಗಾ ಬೀದರ್ ರಸ್ತೆಯಂಚಿಗಿರುವ ಈ ಗ್ರಾಮ ಅಲ್ಲಿ ಬೆಳೆಯುವ ಕೆಂಪು ಬಣ್ಣದ ವಿಶಿಷ್ಟ ರುಚಿಯ ಬಾಳೆಯ ಹಣ್ಣುಗಳಿಂದಾಗಿ ಹೆಸರುವಾಸಿಯಾಗಿದೆ. ಅಷ್ಟೇ ಅಲ್ಲದೆ ನೆರೆಯ ಮಹಾರಾಷ್ಟ್ರ, ಆಂಧ್ರ ರಾಜ್ಯಗಳಿಗೂ ಇದು ಚಿರಪರಿಚಿತ. ಕಮಲಾಪುರದ ಅತಿ ಕಪ್ಪೂ ಅಲ್ಲದ, ಅತಿ ಕೆಂಪೂ ಅಲ್ಲದ ಮಣ್ಣಿನ ಗುಣ ಕೆಂಪು ಬಾಳೆ ಬೆಳೆಯಲು ಪೂರಕವಾಗಿದೆ. ಕಮಲಾಪುರಕ್ಕೂ ಕೆಂಪುಬಾಳೆಗೂ ಪುರಾಣ ಕಾಲದಿಂದಲೇ ನಂಟಿದೆ ಎಂಬುದು ಅಲ್ಲಿನ ಹಿರಿಯರು ಹೇಳುವ ಮಾತಾಗಿದೆ. ಅವರ ಪ್ರಕಾರ ಲಂಕೆಯಲ್ಲಿ ರಾವಣನನ್ನು ಕೊಂದ ಶ್ರೀರಾಮ ಅಯೋಧ್ಯೆಗೆ ಮರಳುವಾಗ ದಾರಿಯಲ್ಲಿ ಕಮಲದಿಂದ ಕೂಡಿದ ಸುಂದರ ತಾಣವನ್ನು ಕಂಡು ದಣಿವಾರಿಸಿಕೊಳ್ಳಲು ಅಲ್ಲಿ ವಿರಮಿಸಿದ. ಆಗ ಅಲ್ಲೆಲ್ಲ ಬೆಳೆದು ನಿಂತಿದ್ದ ಬಾಳೆಯ ಬನದಿಂದ ಹನುಮಂತ ರಾಮನಿಗಾಗಿ ಹಣ್ಣನ್ನು ನೀಡಿದ. ಹೀಗೆ ಬಾಳೆಯ ಸಂಪರ್ಕ ಪಡೆದ ರಾಮ ಅಲ್ಲಿಂದ ನಿರ್ಗಮಿಸುವಾಗ ಈ ಸ್ಥಳದ ಬಾಳೆ ಮುಂದೆ ಪ್ರಸಿದ್ಧಿಪಡೆಯಲಿ ಎಂದು ಹಾರೈಸಿದನಂತೆ.

ಕಮಲಾಪುರದ ಬಾಳೆ ಉಳಿದ ಬಾಳೆ ಫಲಗಳಿಗಿಂತ ಹೆಚ್ಚು ಔಷಧೀಯ ಗುಣಗಳನ್ನು ಹೊಂದಿರುವುದು ಒಂದು ವೈಶಿಷ್ಟ್ಯ. ಇದನ್ನು ಸರ್ವರುಜಾಪಹಾರಿ ಬಾಳೆಹಣ್ಣು ಎಂದು ಹೇಳಲೂಬಹುದು. ಆಯುರ್ವೇದ ಪಂಡಿತರ ಪ್ರಕಾರ ಇದನ್ನು ಜ್ವರ ಬಂದಾಗಲೂ ತಿನ್ನಬಹುದು. ಜ್ಞಾಪಕ ಶಕ್ತಿ ವರ್ಧಕವಾಗಿ, ಇತರೆಲ್ಲ ರೋಗಗಳಿಂದ ಉಂಟಾಗುವ ನಿಶಕ್ತತೆಯ ನಿವಾರಣೆಗಾಗಿ, ಸುಲಭ ಜೀರ್ಣಕ್ರಿಯೆಗಾಗಿ ಈ ಬಾಳೆ ರಾಮ ಬಾಣ. ಚಿಕ್ಕ ಮಕ್ಕಳ ಆರೋಗ್ಯಕರ ಬೆಳವಣಿಗೆಗೂ ತುಂಬಾ ಸಹಾಯಕವಾಗಿದೆ. ಇದನ್ನು ದಿನಕ್ಕೊಂದರಂತೆ ಸೇವಿಸಿದರೆ ಮಲ ಬದ್ಧತೆ, ಜೀರ್ಣತೆಗೆ ಸಂಬಂಧಿಸಿದ ಸಮಸ್ಯೆಗಳು ಮಾಯವಾಗುತ್ತದೆ. ಈ ಗಿಡದ ಔಷಧೀಯ ಗುಣದಿಂದಾಗಿ ಹಣ್ಣಿನ ಜೊತೆ ಹಣ್ಣಿನ ಸಿಪ್ಪೆ, ಗಿಡದ ಕಾಂಡಗಳೂ ಸಹ ದಿನದ ಆಹಾರದಲ್ಲಿ ಬಳಕೆ ಮಾಡಲಾಗುತ್ತದೆ.

ಆದರೀಗ ನೀರಿನ ಅಭಾವ, ಮಾರುಕಟ್ಟೆಯ ಕೊರತೆ, ಹೀಗೆ ಹತ್ತು ಹಲವಾರು ಸಮಸ್ಯೆಗಳಿಂದಾಗಿ ಕಮಲಾಪುರದ ಕೆಂಪುಬಾಳೆ ನಶಿಸಿಹೋಗಿದೆ. 60 ರ ದಶಕದಲ್ಲಿ ಊರ ಸುತ್ತೆಲ್ಲ ತುಂಬಿದ್ದ ಬಾಳೆಯ ಬನಗಳೀಗ ಕಣ್ಮರೆಯಾಗಿದೆ. ಈ ಮಧ್ಯೆ ಬಾಳೆಯ ನಿರ್ವಹಣಾ ವೆಚ್ಚ ಗಗನಕ್ಕೇರಿದ್ದು ಇದು ಕೂಡಾ ಇಲ್ಲಿನ ಕೆಂಪು ಬಾಳೆಯ ಅಸ್ತಿತ್ವಕ್ಕೆ ಸವಾಲೆಸೆದಿದೆ. ಹೀಗಾಗಿ ಇಲ್ಲಿ 3-4 ಬನಗಳಲ್ಲಿ ಮಾತ್ರ ಕಾಣಸಿಗುತ್ತದೆ.

ಮೂಲ : ವಿತ್ತ ಪ್ರಭ, ಕನ್ನಡ ಪ್ರಭ, 2.6.97

ಮಲೆನಾಡಿನ ಕರಿಬಾಳೆ

ಇದೇ ರೀತಿ ಮಲೆನಾಡಿನ ಪ್ರಾಂತ್ಯದಲ್ಲಿ ಕರಿಬಾಳೆ ಎಂಬ ಸಿಹಿ ಸ್ವಲ್ಪ ಹುಳಿ ಮಿಶ್ರಿತ ರುಚಿಯಾದ ಬಾಳೆ ಇದೆ. ಇದರಲ್ಲೂ ಇಷ್ಟೇ ಔಷಧೀಯ ಗುಣಗಳು ಇರುತ್ತವೆ. ಶಿರಸಿಯ ಪ್ರಾಂತ್ಯದಲ್ಲಿ ಕೆಲವರು ಇದನ್ನು ಹೋಳುಮಾಡಿ ಒಣಗಿಸಿ ಬಹುಕಾಲ ಜಗಿಯುತ್ತಾ ಸವಿಯಲು ಕೂಡಿಡುವರು. ಆದರೆ ಕಟ್ಟೆರೋಗ ಬಂದು ಇದಕ್ಕೂ ಈಗ ಅವಸಾನ ಸಮೀಪಿಸುತ್ತಿದೆ.

ನವಿಲೂರ ಪೇರಳೆ

ಧಾರವಾಡಕ್ಕೆ ಆರು ಕಿ.ಮೀ ದೂರದಲ್ಲಿರುವ ನವಿಲೂರು ಧಾರವಾಡ ಹುಬ್ಬಳ್ಳಿ ರಸ್ತೆಯಿಂದ ಒಂದು ಕಿ.ಮೀ. ಒಳಗಿದೆ. ಈ ಹೆದ್ದಾರಿಯ ಎರಡು ಬದಿಗೆ ಸಾವಿರಾರು ಎಕರೆ ಪೇರಲೆ ತೋಟವಿದ್ದ ಕಾಲವೊಂದಿತ್ತು. ಈ ನವಿಲೂರ ಪೇರಲೆ ರುಚಿಯಲ್ಲಿ ಅದ್ಭುತವಾಗಿದ್ದು, ಬೇಡಿಕೆ ಅಪಾರವಾಗಿತ್ತು. ಆದರೆ ಈಗ ಭಾರಿ ಕಾರ್ಖಾನೆಗಳು ತಲೆ ಎತ್ತಿ ನಿಂತಿರುವ ಕಾರಣ ಸೀಬೆ ತೋಟವು ಮಂಗಮಾಯವಾಗುತ್ತಿವೆ. ಇದರ ಜೊತೆಗೆ ನೀರಾವರಿ ಸೌಲಭ್ಯದ ಕೊರತೆ, ಮಳೆ ಅಭಾವ, ಇತ್ಯಾದಿ ಕಾರಣಗಳಿಂದ ನವಿಲೂರಿನ ಪೇರಲೆ ತೋಟಕ್ಕೆ ಕೊಡಲಿ ಪ್ರಹಾರವಾಗಿದೆ.

ನವಿಲೂರಿನವರೇ ಹೇಳುವಂತೆ ಪೇರಲೇ ಗಿಡವನ್ನು 10-12 ಅಡಿ ದೂರಕ್ಕೆ ಒಂದರಂತೆ ಎಕರೆಗೆ ಸುಮಾರು 200 ರಿಂದ 250 ಗಿಡವನ್ನು ನೆಡಲಾಗುತ್ತದೆ. ಇದಕ್ಕೆ ಕೇವಲ ವರ್ಷಕ್ಕೆರಡು ಬಾರಿ ಹಾಕುವ ಸಗಣಿ ಗೊಬ್ಬರ ಮತ್ತು ಮಳೆ ಬಂದಾಗ ಬಿದ್ದ ನೀರು ಇಷ್ಟೇ ಆಹಾರ. ಚಿಕ್ಕ ಸಸಿಯಾದರೆ ಅದಕ್ಕೆ ಆಗಾಗ್ಗೆ ನೀರು ಹಾಕಲಾಗುತ್ತದೆ. ಸುಮಾರು ಏಪ್ರಿಲ್, ಮೇ ತಿಂಗಳಲ್ಲಿ ಹೂವು ಪ್ರಾರಂಭವಾಗಿ ಗೌರಿ ಹಬ್ಬದ ಹೊತ್ತಿಗೆ ಫಸಲು ಬಿಡುವ ಇವುಗಳಿಂದ ನಿರಂತರ ಫಸಲು ಪಡೆಯಬಹುದು.

ಆಧಾರ : ಸಾಪ್ತಾಹಿಕ ಪ್ರಭ, ಕನ್ನಡಪ್ರಭ, 8.6.97

ಮರೆತು ಹೋಗುತ್ತಿರುವ ಭಾರತದ ನೈಸರ್ಗಿಕ ಬಣ್ಣಗಳು

ಪ್ರಾಚೀನ ಭಾರತದಲ್ಲಿ ಉಪಯೋಗಿಸುತ್ತಿದ್ದ ಸಸ್ಯಮೂಲದ ವಿವಿಧ ನೈಸರ್ಗಿಕ ಬಣ್ಣಗಳ ಕುರಿತಾದ ಪರಿಚಯಾತ್ಮಕ ಲೇಖನ ಇದು. ಉತ್ತರ ಪ್ರದೇಶದ ಲಕ್ನೋದಲ್ಲಿರುವ ರಾಷ್ಟ್ರೀಯ ಸಸ್ಯ ಸಂಶೋಧನಾ ಸಂಸ್ಥೆಯ ಶ್ರೀ ಸಿದ್ದಿಕಿ, ಸಂಶೋಧನಾ ಅಧಿಕಾರಿ, ಇವರು ಭಾರತದ ವಿವಿಧ ಪ್ರಾಂತ್ಯಗಳಲ್ಲಿ ಸರ್ವೆ ಮಾಡಿ ಸಂಗ್ರಹಿಸಿದ ಮಾಹಿತಿಗಳನ್ನು ಇಲ್ಲಿ ತಿಳಿಸಲಾಗಿದೆ

ಹರಪ್ಪ ನಾಗರೀಕತೆಯ ಸಮಯದಲ್ಲಿ ಕೆಂಪು ಬಣ್ಣವನ್ನು ಉಪಯೋಗಿಸುತ್ತಿದ್ದ ಕುರುಹುಗಳಿವೆ. ಈ ಬಣ್ಣವನ್ನು ಪ್ರಾಯಶಃ 'ಮ್ಯಾಡರ್' (Madder) ಎಂಬ ಹಬ್ಬುವ ಸಸ್ಯದ ಬೇರುಗಳಿಂದ ಉತ್ಪತ್ತಿಸಲಾಗುತ್ತಿತ್ತು. ನಮ್ಮ ಭಾರತದ ವಸ್ತುಪ್ರದರ್ಶನಾಲಯಗಳಲ್ಲಿ ಇಟ್ಟಿರುವಂತಹ ಬಟ್ಟೆಗಳು, ಹಸ್ತಪ್ರತಿಗಳು, ಮತ್ತು ಚಿತ್ರಕಲೆಗಳು ಇವಲ್ಲದೇ ಸ್ಮಾರಕಗಳಲ್ಲಿ ದೊರೆಯುವಂತಹ ವಿವಿಧ ತರದ ಬಣ್ಣದ ಅಲಂಕಾರಗಳು ಮತ್ತು ಅಲಂಕೃತವಾದ ಒಳಮಾಳಿಗೆಗಳು, ಇವೆಲ್ಲ ಹಿಂದಿನಕಾಲದಲ್ಲೂ ಮತ್ತು ಮೊಗಲರ ಕಾಲದಲ್ಲೂ ನಾವು ಕಾಣುತ್ತೇವೆ. ಇದೆಲ್ಲ ನಮ್ಮ ಭಾರತದ ಶಿಲ್ಪಿಗಳು ಬಣ್ಣಗಳನ್ನು ಉಪಯೋಗಿಸುವಲ್ಲಿ ತೋರಿಸುತ್ತಿದ್ದ ನೈಪುಣ್ಯವನ್ನು ಸಾರುತ್ತವೆ.

ಗಿಡಮೂಲಿಕೆಗಳಿಂದ ದೊರಕುವ ಬಣ್ಣಗಳು ಹೆಚ್ಚಾಗಿ ನಾರಿಯರು ಉಪಯೋಗಿಸುವ ಸೌಂದರ್ಯವರ್ಧಕಗಳಿಗೆ ಮೀಸಲಾಗಿತ್ತು. ಉದಾಹರಣೆಗೆ ಮೆಹೆಂದಿ ಅಥವಾ ಮಧುರಂಗಿ *(Lawsonia inermis)* ಸೊಪ್ಪನ್ನು ಕೈ ಮತ್ತು ಕಾಲುಗಳನ್ನು ಅಲಂಕರಿಸಲು ಬಳಸಲಾಗುತ್ತದೆ. ಸುಣ್ಣ ಹಚ್ಚಿದ ಎಲೆ ಅಡಿಕೆಯನ್ನು ತುಟಿಗಳಿಗೆ ರಂಗನ್ನು ಬರಿಸಲು ಉಪಯೋಗಿಸಲಾಗುತ್ತದೆ. ಒಸಡುಗಳನ್ನು ಅಂದವಾಗಿಸಲು 'ಮಿಸ್ಸಿ' (Missi) ಯನ್ನು ಉಪಯೋಗಿಸಲಾಗುತ್ತದೆ. ಗಿಡಗಳಿಂದ ತಯಾರಿಸಲ್ಪಡುವ ಬಣ್ಣಗಳು ಅಂದರೆ ಕೇಸರಿ, ಹಳದಿ, ಮುಂತಾದವುಗಳನ್ನು ವಿವಿಧ ರೀತಿಯ ತಿಂಡಿಗಳನ್ನು ತಯಾರಿಸಲು ಉಪಯೋಗಿಸುತ್ತಾರೆ. ಆದರೆ ಈಗೀಗ ಇವುಗಳ ಬದಲು ರಾಸಾಯನಿಕ ಪದಾರ್ಥಗಳಿಂದ ತಯಾರಿಸಲ್ಪಟ್ಟ ಕೃತಕ ಬಣ್ಣಗಳನ್ನು ಉಪಯೋಗಿಸಲಾಗುತ್ತಿದೆ. ಯಾಕೆಂದರೆ ಇದನ್ನು ಸಣ್ಣಪ್ರಮಾಣಗಳಲ್ಲಿ ಬಳಸಬಹುದು ಮತ್ತು ಇವುಗಳನ್ನು ಉಪಯೋಗಿಸುವುದು ಬಹಳ ಸುಲಭ. ಈ ಎಲ್ಲಾ ಕಾರಣಗಳು ನೈಸರ್ಗಿಕ ಬಣ್ಣಗಳನ್ನು ದೂರವಿರಿಸಲು



ಕಾರಣವಾಗಿದೆ. ಸಿದ್ದಿಕಿಯವರ ಪ್ರಕಾರ ಒಂದು ಕಾಲದಲ್ಲಿ ಬಿಹಾರದ ಚಂಪಾರಣ್ ಬೆಳೆಗಾರರ ಏಳಿಗೆಗೆ ಸಹಕಾರವಾಗಿದ್ದ ನೀಲಿ ಬಣ್ಣವು ಅದರ ಬೆಲೆ ಮತ್ತು ವೈಭವವನ್ನು ಕಳೆದುಕೊಂಡು ಈಗ ಮೂಲೆಗುಂಪಾಗಿದೆ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅದರ ವ್ಯಾಪಾರ ಕೆಲವೇ ಟನ್ನುಗಳಿಗಿಳಿದಿದೆ.

ಹೊರದೇಶಗಳಲ್ಲಿ ಕೃತಕ ಬಣ್ಣದಿಂದ ಉಂಟಾಗುವ ಹಾನಿಯನ್ನು ಗಮನದಲ್ಲಿರಿಸಿ ಅದರ ತಯಾರಿಕೆಗೆ ತಡೆ ಒಡ್ಡಿ ಉತ್ಪತ್ತಿಯನ್ನು ಕಡಿಮೆ ಮಾಡಲಾಗುತ್ತಿದೆ. ಈಗಾಗಲೇ ಜರ್ಮನಿಯಂತಹ ದೇಶಗಳು ಇದನ್ನು ಸಾಧಿಸಿ ತನ್ನ ಸಾಧನೆಯಲ್ಲಿ ಮುನ್ನಡೆಯುತ್ತಿದೆ. ಇವೆಲ್ಲವೂ ಮತ್ತೆ ನಿಸರ್ಗದ ಕಡೆಗೆ ವಾಲುವ ಸಂಕೇತಗಳನ್ನು ಹೊರಸೂಸುತ್ತದೆ. ಈ ಹೊಸ ತಿರುವಿನಿಂದಾಗಿ ಮೂಲೆ ಗುಂಪಾದ ನೈಸರ್ಗಿಕ ಬಣ್ಣಗಳನ್ನು ಮತ್ತೆ ಮೇಲೆತ್ತಲು ಸಹಾಯವಾಗುತ್ತದೆ ಮತ್ತು ಸೌಂದರ್ಯ ವರ್ಧಕಗಳನ್ನು ನೈಜರೀತಿಯಿಂದ ಸುರಕ್ಷಿತ ವಿಧಾನದಲ್ಲಿ ತಯಾರಿಸಲು ಸಾಧ್ಯವಾಗುತ್ತದೆ. ನಿಸರ್ಗದ ಬಣ್ಣಗಳ ಆಯ್ಕೆಯಲ್ಲಿ ವಿವಿಧ ರೀತಿಯವು ದೊರೆಯುತ್ತದೆ. ಕರಿಜಾಲಿ *(Acacia nilotica)* ಮರದ ಬೀಜ ಮತ್ತು ಕೆತ್ತೆಗಳಿಂದ ಕಪ್ಪು, ಕಂದು ಮತ್ತು ಕಾಕಿ ಬಣ್ಣಗಳು ದೊರಕುತ್ತವೆ. ಇದಲ್ಲದೆ ಉಪಯೋಗಕ್ಕೆ ಬಾರದ ನೀರುಳ್ಳಿ ಸಿಪ್ಪೆಯಿಂದಲೂ ಹಳದಿ ಮತ್ತು ಕಿತ್ತಳೆ ಬಣ್ಣ ದೊರೆಯುತ್ತದೆ.

ಈ ಅಧ್ಯಯನವು ಕಾಮನ ಬಿಲ್ಲಿನ ವಿವಿಧ ಬಣ್ಣಗಳ ಉಗಮದ ಬಗ್ಗೆ ತಿಳಿಸುತ್ತದೆ. ಮುತ್ತುಗದ ಮರವು *(Butea monosperma)* ಕಾಲ ಕಾಲಕ್ಕೆ ತನ್ನ ಎಲೆಗಳನ್ನು ಕಳಚಿಕೊಳ್ಳುವ ಒಂದು ಮರ. ಇದು ಭಾರತದಾದ್ಯಂತ ದೊರೆಯುತ್ತದೆ. ಇದರ ಹೂಗಳು ಅತ್ಯಂತ ಕಾಂತಿಯುಳ್ಳ ಅರಿಶಿನ ಬಣ್ಣವನ್ನು ಕೊಡುತ್ತದೆ. ಈ ಮರದಿಂದ ಉತ್ಪತ್ತಿಯಾಗುವ ಅಂಟಿನಿಂದ ನೀಲಿ ಬಣ್ಣವನ್ನು ತಯಾರಿಸಲಾಗುತ್ತದೆ. ಮಧುರಂಗಿ ಗಿಡದ ಎಲೆಗಳು ಕೆಂಪು ಮಿಶ್ರಿತ ಕಂದು ಬಣ್ಣವನ್ನು ಕೊಡುತ್ತದೆ. ಹಳದಿ, ಕಂದು, ಹಸಿರು ಮತ್ತು ಬಂಗಾರದ ಬಣ್ಣಗಳು ದಾಳಿಂಬೆಯ ಹಣ್ಣು ಮತ್ತು ಸಿಪ್ಪೆಗಳಿಂದ ದೊರೆಯುತ್ತದೆ. ಹಸಿರು ಬಣ್ಣ ಸೀಗೆಕಾಯಿಯ *(Acacia concinna)* ಎಲೆಗಳಿಂದ ದೊರೆಯುತ್ತದೆ. ಹರಳು ಮರದಿಂದ ದೊರಕುವ ಬಣ್ಣವನ್ನು ಹತ್ತಿಯ ಬಟ್ಟೆಗಳಿಗೆ ಬಣ್ಣ ಹಾಕಲು ಮತ್ತು ಅವುಗಳ ಮೇಲೆ ಚಿತ್ರಗಳನ್ನು ಮೂಡಿಸಲು ಉಪಯೋಗಿಸಲಾಗುತ್ತದೆ. ಹಳದಿ ಮತ್ತು ಮಂದವಾದ ಹಸಿರು ಬಣ್ಣಗಳ ಚೆಂಡು ಹೂವಿನ ಗಿಡ *(Tagetes erecta)* ದೊಂದಿಗೆ ಪಟಿಕ (Alum)ವನ್ನು ಸೇರಿಸುವುದರಿಂದ ದೊರೆಯುತ್ತದೆ. ಹೀಗೆ ಈ ಎಲ್ಲಾ ರೀತಿಯ ಗಿಡಗಳಿಂದ ಕಪ್ಪು, ನೀಲಿ, ಕಂದು, ಕುಂಕುಮ ಕೆಂಪು, ರಕ್ತಕೆಂಪು, ಕಡುಗೆಂಪು, ಹಸಿರು, ಬೂದು, ನೇರಳೆ, ಕಿತ್ತಳೆ, ನೀಲಲೋಹಿತ, ಅಚ್ಚಕೆಂಪು, ಗುಲಾಬಿ ಬಣ್ಣ ಇವುಗಳೆಲ್ಲಾ ದೊರೆಯುತ್ತವೆ.

ಗಿಡಮೂಲಿಕೆಗಳಿಂದ ತಯಾರಾಗುವ ಬಣ್ಣಗಳನ್ನು ಸಂಗ್ರಹಿಸುವುದು, ಬಳಸುವುದು ಮತ್ತು ಉಪಯೋಗಿಸುವುದರಿಂದ ಯಾವುದೇ ರೀತಿಯ ಹಾನಿ ಇರುವುದಿಲ್ಲ.

ಆದರೆ ಇವುಗಳಿಗೆ ಕೆಲವು ತೊಂದರೆಯೆಂದರೆ ಗುಣಮಟ್ಟವನ್ನು ಕಾಪಾಡುವುದು, ಗಿಡಗಳನ್ನು ಬೆಳೆಸಲು ಜಾಗದ ಅಭಾವ ಇತ್ಯಾದಿ. ನಮ್ಮಲ್ಲಿ ದೊರೆತ ಸಾಹಿತ್ಯದ ಪ್ರಕಾರ ಭಾರತದಲ್ಲಿ ಸುಮಾರು 500 ಜಾತಿಯ ಬಣ್ಣದ ಗಿಡಗಳಿವೆ. ಇದರಲ್ಲಿ ಈಗ ಕೆಲವೇ ಬಣ್ಣದ ಗಿಡಗಳ ಉಪಯೋಗವಾಗುತ್ತಿದೆ. ಇನ್ನೂ ಕೆಲವು ಜಾತಿಯ ಬಣ್ಣದ ಗಿಡಗಳನ್ನು ಬೆಳೆಸುವ ವಿಧಾನವು ತಿಳಿದು ಬಂದಿಲ್ಲ. ಭಾರತದ ಉಷ್ಣಪ್ರದೇಶಗಳಲ್ಲಿ ವಿವಿಧ ರೀತಿಯ ಬಣ್ಣದ ಗಿಡಗಳು ಹೇರಳವಾಗಿದೆ. ಈ ಮರಗಳನ್ನು ಸರ್ವೆ ಮಾಡಲು ಕೆಲವು ಪ್ರಯತ್ನಗಳನ್ನು ನಮ್ಮ ಸಸ್ಯಶಾಸ್ತ್ರಜ್ಞರು ಮಾಡಿದ್ದಾರೆ. ನಮ್ಮ ವಿಜ್ಞಾನಿಗಳು ಈ ಬಣ್ಣದ ಗಿಡಗಳ ಬಗ್ಗೆ ಹೆಚ್ಚು ಮಾಹಿತಿಗಳನ್ನು ತಿಳಿದುಕೊಂಡು ನಮಗೆ ಸುರಕ್ಷಿತವಾದ ಬಣ್ಣಗಳನ್ನು ನೀಡುವ ಸನ್ನಾಹದಲ್ಲಿದ್ದಾರೆ.

ಮೂಲ ಹನಿ ಬೀ, ಸಂಚಿಕೆ 7(4), 1996

ಅನುವಾದ ವೀಣಾ ಎಂ.ಎಸ್.

ಹಬ್ಬಗಳು, ಕಥೆಗಳು, ಕೃಷಿ ಮತ್ತು ಬೆಳೆ ಆಚರಣೆಗಳು

ಡಾ. ಕೃಷ್ಣಮೂರ್ತಿ ಹನೂರು ಮತ್ತು ಡಾ. ಎಂ.ಜಿ. ಈಶ್ವರಪ್ಪ

ಸಂಕ್ರಾಂತಿ ಹಬ್ಬ ರೈತನ ಆಧಾರವಾಗಿರುವ ಎತ್ತು ದನಕರುಗಳ ಸಂಬಂಧದಲ್ಲಿ ಆಚರಿಸುವ ಹಬ್ಬ. ಈ ಹಬ್ಬದ ಹೊತ್ತಿಗೆ ಹೊಲಗದ್ದೆಗಳ ಕೊಯ್ಲು ಮುಗಿದು ದನಕರುಗಳು ಕೂಡ ಕೊಂಚ ಬೇಸಾಯದ ಕೆಲಸದಿಂದ ವಿರಾಮ ಹೊಂದುತ್ತಿರುತ್ತವೆ. ರೈತರು ದನಕರುಗಳನ್ನು ಪೂಜಿಸುವುದರೊಂದಿಗೆ ಅಂದು ಗೋವಿನ ಕಥೆಯನ್ನು ಓದಲಾಗುತ್ತದೆ. ಈ ಕಥೆ ಒಂದು ಹಸುವಿನ ಸತ್ಯ ಸ್ವಭಾವವನ್ನು, ಸಾಧುತ್ವವನ್ನು ವಿವರಿಸುವಂಥದ್ದು. ಹುಲಿ ನಮ್ಮ ಸಾಂಸ್ಕೃತಿಕ ಪರಂಪರೆಯಲ್ಲಿ ಆಯಾ ವ್ಯಕ್ತಿಯ ಶಕ್ತಿಯನ್ನು ಅಳೆಯುವ ಸಾಧನವಾಗಿದೆ. ಎಂದರೆ ವೀರರೊಡನೆ ಅದು ಹೋರಾಡುವಂಥದ್ದು. ಸಾಧು ಶರಣರಿಗೆ ಋಷಿಗಳಿಗೆ ಅದು ಚರ್ಮದ ಹಾಸಿಗೆಯಾದರೆ, ದೇವತೆಗಳಿಗೆ ಹುಲಿ ವಾಹನವೇ ಆಗಿ ಬಿಡುತ್ತದೆ. ಇಂಥ ಹುಲಿ ಜನಪದರು ಸೃಷ್ಟಿಸಿರುವ ಗೋವಿನ ಕಥೆಯಲ್ಲಿ, ಪುಣ್ಯಕೋಟಿಯ ಸತ್ಯಕ್ಕೆ ಮೆಚ್ಚಿ ಅದರ ಎದುರೇ ಆತ್ಮಹತ್ಯೆ ಮಾಡಿಕೊಳ್ಳುತ್ತದೆ. ಹೀಗೆ ಗೋವು ಜನಪದರಿಗೆ ದೇವರು, ಸಾಧು ಸಂತರು, ವೀರರಿಗಿಂತ ಪೂಜ್ಯ ಎಂದಾಯಿತು. ಪ್ರಾಚೀನ ಕಾಲದಿಂದಲೂ ರೈತವರ್ಗಕ್ಕೆ ಜೀವನಾಡಿಯಾಗಿ ಬಂದಿರುವ ಪಶು ಸಮೂಹದ ಬಗ್ಗೆ ಕಾಲಕ್ರಮೇಣ ಇಂಥ ಮಹತ್ವದ ಕಥೆಯೊಂದು ಹುಟ್ಟಿಕೊಂಡು ಬಂದಿರುವುದರಲ್ಲಿ ಆಶ್ಚರ್ಯವಿಲ್ಲ.

ಸಂಕ್ರಾಂತಿ ಮತ್ತು ದೀಪಾವಳಿ ಈ ಎರಡು ಹಬ್ಬಗಳ ಮೊದಲೇ ಗೌರಿ ಗಣೇಶ ಹಬ್ಬದ ಆಗಮನವಾಗುತ್ತದೆ. ಈ ಗೌರಿ ಮತ್ತು ಗಣೇಶನ ಹಬ್ಬ ಮುಖ್ಯವಾಗಿ ಭೂಮಿ ಮತ್ತು ಜಲ ಸಂಬಂಧದ ಆಚರಣೆಗಳನ್ನು ಹೊಂದಿವೆ. ಹೊಲಗದ್ದೆಗಳಲ್ಲಿ ಪೈರು ಮೊಳೆತು ಬೆಳೆ ಏಳುವುದರ ಆರಂಭಕಾಲ ಗೌರಿ ಗಣೇಶ ಹಬ್ಬದ ಕಾಲ. ಗಣೇಶನ ಇನ್ನೊಂದು ಹೆಸರು ವಿಘ್ನೇಶ್ವರ ಎಂಬುದು ಇಲ್ಲಿ ಗಮನಾರ್ಹ. ರೈತರು ಹೊಲಗದ್ದೆಗಳ ಕಡೆಯಿಂದಲೇ ಮರಳು ಮಿಶ್ರಿತ ಕೆಂಪು ಮಣ್ಣನ್ನು ತಂದು, ಅದರಿಂದಲೇ ಗಣೇಶನನ್ನು ನಿರ್ಮಿಸಿ, ಅದರ ಮುಂದೆ ಪೂಜಾ ಸಾಮಗ್ರಿಗಳನ್ನು ಇರಿಸುವರು. ಪೂಜಾ ಸಾಮಗ್ರಿಯಲ್ಲಿ ಮುಖ್ಯವಾದುದು ಗರಿಕೆ. ತೋಟಗಳಲ್ಲಿ ಬೆಳೆಗೆ ತೊಂದರೆ ಕೊಡುವ ಮುಖ್ಯ ಕಳೆ ಗರಿಕೆ. ಈ ಗರಿಕೆಯ ಜತೆಗೆ ಧಾನ್ಯಶತ್ರು ಇಲಿಯೂ ಇರುತ್ತದೆ. ಗಣೇಶನ ಕಾಲ ಅಡಿಯಲ್ಲಿ ಇಲಿ, ಗಣೇಶನ ಕೈಯಲ್ಲಿ ಧಾನ್ಯದ ತೆನೆ, ಇನ್ನೊಂದು ಕೈಯಲ್ಲಿ ಅದೇ ಧಾನ್ಯದಿಂದ ತಯಾರಿಸಿದ ಕಡುಬು ಇರುತ್ತದೆ. ಜನಪದಗೀತೆಗಳಲ್ಲಿ ಭೂಮಿಯನ್ನು ಸ್ತುತಿಸುವಾಗ ಎಳ್ಳು ಬೆಳೆಯುವ ಭೂಮಿ ಎಂದು ಹೇಳಲಾಗುತ್ತದೆ. ಈ ಎಳ್ಳಿನಿಂದ ತಯಾರಿಸಿದ ಉಂಡೆ ಗಣೇಶನಿಗೆ ಪ್ರಿಯ. ಇದರ ಜತೆಗೆ ಗಣೇಶನು ಚೆನ್ನಾಗಿ ಊಟ ಮಾಡಿದ್ದರಿಂದ ಆತನ ಹೊಟ್ಟೆ ದಪ್ಪವಾಗಿ, ಆ ಹೊಟ್ಟೆ ಒಡೆಯಬಾರದೆಂದು ಹಾವು ಸುತ್ತಿಕೊಂಡಿರುತ್ತಾನೆ ಎಂದು ದಂತಕಥೆ ಇದೆ.

ಗಣೇಶನ ಸಮೃದ್ಧಿಯ ಊಟ, ಒಂದು ಕೈಯತೆನೆ, ಇನ್ನೊಂದು ಕೈಯ ಕಡಬು, ಕಾಲ ಕೆಳಗಿನ ಗರಿಕೆ ಮತ್ತು ಇಲಿ ಈ ಹಬ್ಬ ಬೀಜ ಬಿತ್ತಿದ ತರುವಾಯದಲ್ಲೇ ಬರುವುದು. ಇದೆಲ್ಲ ಭೂಮಿಯ ಮತ್ತು ಮಣ್ಣಿನ ವ್ಯವಸಾಯ ಸಂಬಂಧದ ಆಚರಣೆಯಾಗಿ ಕಾಣಿಸುತ್ತದೆ.

ಆದರೆ ಕಾಲಕ್ರಮೇಣ ಗಣೇಶನ ರೂಪ, ಮತ್ತು ಇನ್ನಿತರ ವಿವರಗಳ ಮೇಲೆ ಬೇರೆ ಬೇರೆ ಕಥೆಗಳು ಹುಟ್ಟಿಕೊಂಡು ಪ್ರಚಾರಕ್ಕೆ ಬಂದವು.

ಗಣೇಶನ ಹಬ್ಬ ಭೂಮಿ ಪ್ರಜ್ಞೆಯನ್ನು ಸಂಕೇತಿಸಿದರೆ ಇದರೊಡನೆ ಹೊಂದಿಕೊಂಡು ಬರುವ ಗೌರಿಹಬ್ಬ ನೀರಿನ ಪೂಜೆಯನ್ನು ಕುರಿತು ಹೇಳುತ್ತದೆ. ಪ್ರತಿ ಮನೆಯ ಹೆಂಗಸರು ನೀರು ತುಂಬಿರುವ ಕೆರೆ, ಬಾವಿ ಅಥವಾ ಹರಿಯುವ ತೊರೆ ಕಡೆಗೆ ಹೋಗಿ ಆ ನೀರನ್ನು ಪೂಜಿಸಿ, ಅರಿಷಿಣದ ಹುಡಿಯಿಂದ ತಯಾರಿಸಿದ ದೇವತೆಯನ್ನು ಗೌರಿಯೆಂದು ಮನೆಗೆ ತರುತ್ತಾರೆ. ವಾಸ್ತವವಾಗಿ ಇದು ಜಲಪೂಜೆಯೇ. ಈ ಗೌರಿ ಗಣೇಶನ ತಾಯಿಯೆಂದು ಹೆಸರಿಸಲಾಗಿದೆ. ಎಂದರೆ ಧಾನ್ಯ ದೇವತೆ ಗಣೇಶನಿಗೆ ಜಲದೇವತೆಯನ್ನು ತಾಯಿಯಾಗಿ ಕಲ್ಪಿಸಲಾಗಿದೆ. ಭೂಮಿ ಮತ್ತು ಜಲ ಪೂಜೆಯ ಆಚರಣೆ ಹೊಂದಿರುವ ಗಂಗೆ ಅಥವಾ ಗೌರಿ ಗಣೇಶನ ಈ ಹಬ್ಬ ಬೆಳೆಯ ಆರಂಭಕಾಲದಲ್ಲಿ ಬರುವುದಾದರೆ, ದೀಪಾವಳಿ ಧಾನ್ಯ ಸಮೃದ್ಧಿಯ ಕಾಲದಲ್ಲಿ ಆರಂಭಗೊಳ್ಳುತ್ತದೆ. ಯುಗಾದಿ ರೈತರ ಸಂಪೂರ್ಣ ಬಿಡುವಿನ ಕಾಲದಲ್ಲಿ ಬರುವಂಥದ್ದು. ಅಥವಾ ವಿರಾಮದ ಕೊನೆ ದುಡಿಮೆಯ ಆರಂಭ ಇವೆರಡರ ನಡುವಣ ಹಬ್ಬ ಯುಗಾದಿ. ಆದರಿಂದಲೇ ಈ ಹಬ್ಬದಲ್ಲಿ ಬೇವು ಬೆಲ್ಲದ ಮಿಶ್ರಣವಿರುತ್ತದೆ. ಈ ಸಂದರ್ಭದಲ್ಲಿ ಭೂಮಿ ತಾಯಿ ಕೂಡ ಬಹಿಷ್ಠೆಯಾಗಿರುತ್ತಾಳೆಂದು ರೈತರ ನಂಬಿಕೆ. ಹಾಗೆ ನೋಡಿಕೊಂಡರೆ ಒಟ್ಟು ಹಬ್ಬಗಳು ಮನುಷ್ಯ ಜೀವನದ ಇತಿಹಾಸವನ್ನೇ ಹೇಳುವಂತಿದೆ. ಯುಗಾದಿಯ ಮೂರನೇ ದಿನ ಸಾಮಾನ್ಯವಾಗಿ ಜನಪದರು ಮಾಂಸದೂಟ ಬಯಸುವುದುಂಟು. ಈ ಮಾಂಸ ಕಾಡಿನಲ್ಲಿ ಬೇಟೆಯಾಡಿ ತಂದ ಪ್ರಾಣಿಯದೇ ಆಗಿರಬೇಕು. ಆದ್ದರಿಂದ ಯುಗಾದಿಯ ಮರುದಿನ ಜನಪದರು ಬೇಟೆಗಾಗಿ ಕಾಡಿನ ಕಡೆ ಹೋಗಿ ಸಿಕ್ಕಿದ ಪ್ರಾಣಿಯನ್ನು ಬೇಟೆಯಾಡಿ ತರುವರು. ತಂದ ಬೇಟೆಯನ್ನು ಎಲ್ಲರೂ ಹಂಚಿಕೊಳ್ಳಬೇಕು. ಇದು ಪ್ರಾಚೀನ ಪದ್ಧತಿ. ಈಗಲೂ ಕೆಲವು ಅರಣ್ಯವಾಸಿ ಬುಡಕಟ್ಟುಗಳಲ್ಲಿ ಈ ಪದ್ಧತಿ ಇದೆ. ಆದಿ ಮಾನವ ವ್ಯವಸಾಯ ಜೀವನವನ್ನು ಆರಂಭಿಸಿದ ಮೇಲೆ ಶ್ರಮ ಸಾಧ್ಯವಾದ ಬೇಟೆಯನ್ನು ಬಿಟ್ಟನಾದರೂ ಮಾಂಸ ಪ್ರಿಯ ಮನುಷ್ಯ ಮನರಂಜನೆಯ ಹೆಸರಿನಲ್ಲಿಯಾದರೂ ಬೇಟೆಯನ್ನು ಉಳಿಸಿಕೊಂಡ. ವ್ಯವಸಾಯ ಜೀವನದ ನಂತರ ಆತನಿಗೆ ಮಣ್ಣು, ನೀರು, ಪಶು ಸಮೂಹ ಇವೆಲ್ಲವೂ ಶ್ರೇಷ್ಠವೆನಿಸಿದವು. ಇದರ ನೆಪದಲ್ಲಿ ಆತ ಅನೇಕ ಆಚರಣೆಗಳನ್ನು ರೂಢಿಸಿಕೊಂಡು ಬಂದ. ಈ ಆಚರಣೆಗಳ ಮೇಲೆ ಹೊಂದಿಕೊಂಡಂತೆಯೇ ಕಥೆಗಳೂ ಅಸಂಖ್ಯಾತ ಸಂಖ್ಯೆಯಲ್ಲಿ ಹುಟ್ಟಿಕೊಂಡವು. ಈ ಕಥೆಗಳಲ್ಲಿ ಮನುಷ್ಯ ತನ್ನ ಜೀವನ ಚಕ್ರದಲ್ಲಿ ದುಷ್ಟ ಶಕ್ತಿಯೊಡನೆ ಹೋರಾಡಿದ್ದೇ ಮುಖ್ಯಸ್ಥಾನ ಗಳಿಸಿದವು.

ಮಳೆ ಕ್ರಮಬದ್ಧವಾಗಿ ಬಂತು ಎಂದಾಕ್ಷಣ ಬೆಳೆ ಕೈಗೆ ಬಂತು ಎಂದರ್ಥವಲ್ಲ. ಈ ಮಧ್ಯೆ ಹಲವು ಆತಂಕಗಳು, ವಿಘ್ನಗಳು ಎದುರಾಗುತ್ತವೆ. ಅವುಗಳನ್ನು ನಿವಾರಿಸಿಕೊಳ್ಳಲೆಂದೇ ಪೂಜೆ ಮಾಡಿ ಕೆಲಸ ಶುರು ಮಾಡುವುದು ಮತ್ತು ಹರಕೆ ಹಾಕಿಕೊಳ್ಳುವುದರಲ್ಲಿ ವ್ಯವಸಾಯಗಾರ ತೊಡಗಿರುತ್ತಾನೆ. ತಾನು ಮಾಡುವ ಕೆಲಸವನ್ನು ಮತ್ತು ಬಳಸುವ ಪರಿಕರಗಳನ್ನು ತುಂಬ ಗೌರವದಿಂದ, ಭಯ ಭಕ್ತಿಯಿಂದ ಕಾಣುತ್ತಾನೆ. ಬೇಸಾಯ ಹೂಡುವಾಗ ಎತ್ತುಗಳಿಗೆ ಮತ್ತು ನೊಗ ನೇಗಿಲುಗಳಿಗೆ ನಮಸ್ಕರಿಸಿ ಶುರುಮಾಡುತ್ತಾನೆ. ಗಾಡಿ ಹೂಡುವಾಗ, ಬಣವೆ ಹಾಕುವಾಗ, ಕಳೆ ಕೀಳುವಾಗ, ಕೊಯ್ಯುವಾಗ, ಬಡಿಯುವಾಗ, ಒಕ್ಕುವಾಗಲೆಲ್ಲ ಪೂಜೆಯಿಂದಲೇ ಕೆಲಸವನ್ನು ಶುರು ಮಾಡುವುದು. ತಿಪ್ಪೆಯ ಗೊಬ್ಬರ ಹೇರುವಾಗಲೂ "ತಿಪ್ಪಮ್ಮನ ಪೂಜೆ" ಮಾಡಿಯೇ ಮುಂದುವರಿಯುತ್ತಾನೆ. ಬಿತ್ತನೆಗೆ ಹೊರಟರಂತೂ ಅಂದು ಕೂರಿಗೆ ಪೂಜೆ ಸಂಭ್ರಮದ ಆಚರಣೆಯಾಗುತ್ತದೆ. ಕೂರಿಗೆಯನ್ನು ಕಟ್ಟೆಯ ಮೇಲೆ ಅಚ್ಚುಕಟ್ಟಾಗಿ ಜೋಡಿಸಿ ಅದಕ್ಕೆ ಸೀರೆ

ಕುಬುಸ ತೊಡಿಸಿ,ರಂಗೋಲಿ ಹಾಕಿ, ಹೂವು ಹಾರ ಮಾವಿನ ಸೊಪ್ಪಿನ ಅಲಂಕಾರ ಮಾಡಿ, ಅಂದು ಬಿತ್ತುವ ಬೀಜಗಳ ಮೂರು ನಿಧಿ ಹಾಕಿ ತನ್ನ ಕೆಲಸವನ್ನು ಮುಂದುವರಿಸುತ್ತಾನೆ. ಅವನ ಎಲ್ಲ ಕೆಲಸ ಕಾರ್ಯಗಳಲ್ಲಿ ಬೆನಕನ ಪೂಜೆಗೆ ಬಹಳ ಮಹತ್ವವಿದೆ. ತನ್ನ ಕೆಲಸ ಕಾರ್ಯಗಳ ವಿಘ್ನನಿವಾರಕನಿಗೆ ಪ್ರಥಮ ಪ್ರಾಶಸ್ತ್ಯವನ್ನು ನೀಡುತ್ತಾನೆ. ಮನೆಯಲ್ಲಿ ಪೂಜೆ ನಡೆದರೆ ಸಗಣಿಯ ಉಂಡೆ, ಅದರ ತುದಿಗೆ ನಾಲ್ಕು ಗರಿಕೆ ದಳ ಬೆನಕನನ್ನು ಸಿದ್ಧಮಾಡುತ್ತಾರೆ. ಆದರೆ ಹೊಲಗದ್ದೆ ತೋಟಗಳಲ್ಲಿ ಅಲ್ಲೇ ಸಿಗುವ ಮೂರು ಕಲ್ಲಿನ ತುಂಡುಗಳು ಆ ಕೆಲಸ ನಿರ್ವಹಿಸುತ್ತವೆ. ಮೂರು ಯಾಕೆಂದರೆ ಅವರು ತ್ರಿಮೂರ್ತಿಗಳು ಎಂದವರ ನಂಬಿಕೆ, ಮತ್ತೆ ಕೆಲವರ ಪ್ರಕಾರ ಉಪ್ಪು, ಹುಳಿ, ಕಾರದ ಪ್ರತೀಕವೂ ಹೌದು.

ಪೂಜೆಯನ್ನು ಅನುಸರಿಸಿಯೇ ಬರುವಂಥದ್ದು ಹರಕೆ. ಉದ್ದೇಶಿತ ಫಲ ಈಡೇರಲೆಂದು ರೈತ ತನ್ನ ಮನೆದೇವರಿಗೆ ಶಕ್ತ್ಯಾನುಸಾರ ಹರಕೆ ಹಾಕಿಕೊಳ್ಳುತ್ತಾನೆ. ದವಸ ಧಾನ್ಯಗಳಿಗೆ ದೆವ್ವ ಪೀಡೆಯ ಕಾಟ ಬರದಿರಲೆಂದು, ಕಳ್ಳಕಾಕರ ಕಾಟವಿರದಿರಲೆಂದು, ರೋಗ ರುಜಿನಗಳು ಮುತ್ತದಿರಲೆಂದು ಹರಕೆ ಹಾಕಿಕೊಳ್ಳುತ್ತಾನೆ. ಅಂತೆಯೇ ನಡೆದರೆ ತಪ್ಪದೆ ಹರಕೆ ತೀರಿಸುತ್ತಾನೆ. ಔಡಲಕ್ಕೆ ಕೊಂಡಲ ಹುಳ ಬಿದ್ದರೆ ಮನೆ ದೇವರಿಗೆ ಹರಳೆಣ್ಣೆ ತಂದು ಒಪ್ಪಿಸುವುದಾಗಿ ಹರಕೆ ಹಾಕಿಕೊಂಡು ದೇವರ ತೀರ್ಥ ತಂದು ಹಾಕುತ್ತಾನೆ. ಜೋಳಕ್ಕೆ ಜೋನಿ ಬೀಳದಿರಲೆಂದು, ತೆಂಗಿನಕಾಯಿಯ ಹರಳುದುರದಿದ್ದರೆ ಸೂರೆ ಹಬ್ಬ ಮಾಡುತ್ತೇನೆಂದು, ಹೊಗೆಸೊಪ್ಪಿಗೆ ತೊಂಡ್ಲೆ ಹುಳ ಬೀಳದಿದ್ದರೆ ಬೆಳ್ಳಿಯ ಅಥವಾ ಬಂಗಾರದ ತೊಂಡ್ಲೆ ಮಾಡಿಸಿಕೊಡುತ್ತೇವೆಂದು ಹರಕೆ ಹಾಕಿ ಕೊಳ್ಳುತ್ತಾರೆ. ಪೈರು ಚೆನ್ನಾಗಿ ಬೆಳೆದರೆ ಕಣ್ಣಾಸರು ಆಗದಿರಲಿ ಎಂದು ಬೆರ್ಚು ನಿಲ್ಲಿಸುತ್ತಾರೆ. ಬೆರ್ಚು, ಬೆಳ್ತಲೆ, ಚಂದಪ್ಪ, ಬೆಕ್ಕಿನ ಸೋರೆ ಗಡಿಗೆ, ಮಡಕೆ ಎಂದೆಲ್ಲ ಕರೆಸಿಕೊಳ್ಳುವ ಈ ಸುಣ್ಣ ಹಚ್ಚಿದ ಬೋರಲು ಮಡಕೆ ಪ್ರತಿ ಹೊಲಗದ್ದೆಗಳಲ್ಲೂ ಕಾಣುಸಿಗುತ್ತದೆ. ಮೆಣಸು, ಅವರೆ, ಹಲಸಂದಿ, ಟೊಮೆಟೊ, ಸೌತೆ ಮುಂತಾದ ತಿನ್ನುವ ಪೈರುಗಳಲ್ಲಂತೂ ಇದು ಶಾಶ್ವತವಾಗಿ ನೆಲೆಸಿರುತ್ತದೆ. ಅಡಿಕೆ, ಬಾಳೆ, ತೆಂಗಿನ ತೋಟಗಳಲ್ಲಂತೂ ಆಳೆತ್ತರದ ಮನುಷ್ಯನ ಆಕಾರವೇ ಬೆರ್ಚು ಆಗಿ ಕಾರ್ಯನಿರ್ವಹಿಸುತ್ತದೆ. ಬೆರ್ಚು ನಿಲ್ಲಿಸುವ ಪದ್ಧತಿ ಬಹಳ ಹಿಂದಿನಿಂದಲೇ ಇರುವಂತೆ ಕಾಣುತ್ತದೆ. ಜನ್ನ ಕವಿ ತನ್ನ ಯಶೋಧರ ಚರಿತೆಯಲ್ಲಿ 'ಪಾಪದ ಜೋಳದ ಬೆಳಸಿಂಗೆ ಬೆರ್ಚುಗಟ್ಟಿದ ತೆರದಿಂ' ಎಂದು ಪ್ರಯೋಗಿಸಿದ್ದಾನೆ. ಋಗ್ವೇದದ ಕಾಲದಲ್ಲೂ ಸಹ ಜೋಳದ ಜಮೀನಿನಿಂದ ಹಕ್ಕಿಗಳನ್ನು ದೂರವಿರಿಸಲು ಬೆದರುಗೊಂಬೆಗಳನ್ನು ನಿಲ್ಲಿಸಲಾಗುತ್ತಿತ್ತು.

ಬೆಳೆಗಳಿಗೆ ಅಂಟುವ ಪೀಡೆ ಪರಿಹಾರಾರ್ಥವಾಗಿ, ರೋಗ ನಿವಾರಣಾರ್ಥವಾಗಿ ಚರಗ ಚಲ್ಲುವ ಆಚರಣೆ ವ್ಯವಸಾಯಗಾರರಲ್ಲಿ ದಟ್ಟವಾಗಿ ನೆಲೆಯೂರಿದೆ. ಚರಗ ಎಂದಾಕ್ಷಣ ಸಾಮಾನ್ಯವಾಗಿ ಪ್ರಾಣಿಬಲಿಯ ನಂತರದ ರಕ್ತದ ಅನ್ನ ನೆನಪಿಗೆ ಬರುತ್ತದೆ. ಪ್ರಾಣಿಬಲಿಯ ಅಮ್ಮನ ಹಬ್ಬದ ಚರಗ ಇಡೀ ಊರಿನ ಹುಲುಸನ್ನು ಕಾಪಾಡುತ್ತದೆ. ಎಂದು ಭಾವಿಸುವುದಾದರೆ, ಪ್ರತಿ ರೈತ ತನ್ನ ಹೊಲಗದ್ದೆಗಳಿಗೆ ಚಲ್ಲುವ ಸಸ್ಯಾಹಾರಿ ಚರಗ ಅವನ ಬದುಕಿನ ಹುಲುಸನ್ನು ರಕ್ಷಿಸುತ್ತದೆ. ಚರಗದ ಕುಡಿಕೆಯೊಂದು ಮನೆಯಲ್ಲಿ ಸದಾ ಸಿದ್ಧವಾಗಿರುತ್ತದೆ. ಚೆನ್ನಾಗಿ ಬೆಳೆದ ಪೈರಿಗೆ ಅಮಾವಾಸ್ಯೆಗೊಮ್ಮೆ ಹುಣ್ಣಿಮೆಗೊಮ್ಮೆ ಮುದ್ದೆ, ಅನ್ನ ಇಂತಹ ಯಾವುದಾದರೂ ಅಡಿಗೆಯನ್ನು ನೀರಿಗೆ ತೆಳ್ಳಗೆ ಕಲಸಿಕೊಂಡು ಹೊಲದ ಸುತ್ತ ಚಲ್ಲುತ್ತಾರೆ. ಹಾಗೆ ಮಾಡುವುದರಿಂದ ಬೆಳೆಗಳಿಗೆ ಅಪಾಯಕಾರಿಯಾಗುವ ಹುಳುಹುಪ್ಪಟೆಗಳ ನಿವಾರಣೆ ಮತ್ತು ಪೀಡೆ ಪರಿಹಾರ ಮಾಡಿದಂತೆ. ತೋಟ ತುಡಿಕೆಗಳಿಗಂತೂ ಚರಗ ಚಲ್ಲುವ ಕ್ರಿಯೆ ಕ್ರಮಬದ್ಧವಾಗಿ ನಡೆಯುತ್ತದೆ. ಆ ಕ್ರಿಯೆಗೆ ಇಬ್ಬರು ಬೇಕು. ಮುಂದಿನ ವ್ಯಕ್ತಿ ಒಂದು ಕೈಯಲ್ಲಿ ಬೆಂಡುಗೊಳ್ಳಿ ಮತ್ತೊಂದು ಕೈಯಲ್ಲಿ ಕುಡುಗೋಲು ಹಿಡಿದು ಹೊರಟರೆ, ಹಿಂದಿನವನು ಚರಗ ಚಲ್ಲುತ್ತ ಹೋಲಿಗ್ಯ ಹೋಲಿಗ್ಯ ಎಂದು ಉದ್ಗರಿಸುತ್ತಾನೆ. ಹೋಲಿಗ್ಯ ಎಂಬುದು ಮಂತ್ರಶಕ್ತಿಯಿರುವ ಪದವಿದ್ದಂತೆ. ಒಂದು ಸುತ್ತು ಚರಗ ಚಲ್ಲಿದ ಮೇಲೆ ಮುಂದಿದ್ದವನು ಕುಡುಗೋಲಿನಿಂದ ಬಾಳೆಯ ಗಿಡವೊಂದನ್ನು ಕಡಿದು ಹಾಕಿ ಬೆಂಡುಗೊಳ್ಳಿಯನ್ನು ಬಿಸಾಕುತ್ತಾನೆ. ಒಕ್ಕಲು ಮಾಡುವ ಸಂದರ್ಭದಲ್ಲಿ ಕಣದಲ್ಲಂತೂ ಚರಗದ ಕುಡಿಕೆ ಸದಾ ತುಂಬಿರುತ್ತದೆ. ಪ್ರತಿ ಹಂತದಲ್ಲೂ ಬೆಳಿಗ್ಗೆ, ಸಂಜೆ ಚರಗ ಚಲ್ಲಿಯೇ ಕೆಲಸ ಆರಂಭವಾಗುವುದು. ಚರಗ ಚೆಲ್ಲುವ ಈ ಆಚರಣೆಯಿಂದ ಲೌಕಿಕ ಉಪಯೋಗವೂ ಇದೆ. *ಚರಗದೊಳಗಿನ ಆಹಾರದ ಪದಾರ್ಥಗಳು ಬೆಳೆಗಳ ಮೇಲೆ ಬಿದ್ದಾಗ, ಆಹಾರದ ಚೂರನ್ನು ತಿನ್ನಲು ಬಂದು ಅಲ್ಲಿರುವ ಹುಳುಗಳನ್ನು ಪಕ್ಷಿ ತಿನ್ನಲು ಆರಂಭಿಸುತ್ತವೆ. ಹಾಗಾಗಿ ಚರಗ ಕೀಟ ನಿವಾರಣೆ ಮಾಡುವ ಸರಳ ವಿಧಾನವೂ ಆಗಿದೆ.* ಔಡಲ ಗಿಡಗಳಿಗೆ, ಹೆಸರು ಗಿಡಗಳಗೆ ಹತ್ತಿದ ಹುಳಗಳನ್ನು ಚರಗ ಹಾಕಿ ಪಕ್ಷಿಗಳನ್ನು ಆಕರ್ಷಿಸಿ ನಿವಾರಣೆ ಮಾಡಿಕೊಂಡ ಉದಾಹರಣೆಗಳೂ ಸಾಕಷ್ಟು ಸಿಗುತ್ತವೆ. ಪ್ರಪಂಚದ ಹಲವು ಆದಿವಾಸಿ ಜನಾಂಗಗಳು ಸಹ ಈ ಆಚರಣೆ ಉಳಿಸಕೊಂಡಿವೆ. ಸೆಂಟ್ರಲ್ ಬೋರ್ನಿಯೊದ ಕಾಯನ್ ಜನಾಂಗ ಬಿತ್ತುವಾಗ ಮತ್ತು ಕೊಯ್ಯುವಾಗ ತಿನ್ನಬಲ್ಲ ಗಿಡಮೂಲಿಕೆಗಳನ್ನು ಬೇಯಿಸಿ ಪೈರಿಗೆ ಸಿಂಪಡಿಸುತ್ತಾರೆ.

ನಾಟಿಯಾದ ಸಸಿಗಳು ಗಟ್ಟಿಯಾಗಿ ಚಿಗುರತೊಡಗಿದಾಗ ಮಲೆನಾಡಿನ ವ್ಯವಸಾಯಗಾರರು 'ಎರಕಲು ಗೂಟ'ದ ಆಚರಣೆಗೆ ತೊಡಗುತ್ತಾರೆ. ಮಘೆ ಮಳೆ ಶುರುವಾಗುತ್ತದೆ ಎನ್ನುವಾಗ ಹಿಂದಿನ ಸಂಜೆಯೇ ಹಳ್ಳಗಳ ದಂಡೆಯಲ್ಲಿ ಬೆಳೆಯುವ ಮುಂಡುಗದ ತುಂಡುಗಳನ್ನು ಕಡಿದು ತಂದು ಗದ್ದೆಯ ಪ್ರತಿ ಹಾಳೆಯಲ್ಲೂ ಇಟ್ಟು ಬರುತ್ತಾರೆ. ರಾತ್ರಿಯ ಹೊತ್ತು ಒಬ್ಬ ಗಂಡಸು ಮೈಮೇಲೆ ನೂಲೆಳೆಯಿಲ್ಲದಂತೆ ಬೆತ್ತಲೆಯಾಗಿ ಹೋಗಿ ಆ ತುಂಡುಗಳನ್ನು ಪ್ರತಿ ಹಾಳೆಯಲ್ಲಿ ನೆಟ್ಟು ಬರುತ್ತಾನೆ. ಇತ್ತೀಚೆಗೆ ಬೆತ್ತಲೆ ಹೋಗುವ ಮನುಷ್ಯ ಕರಿ ಕಂಬಳಿ ಹೊದೆಯಬಹುದೆಂಬ ರಿಯಾಯಿತಿ ನೀಡಿದ್ದಾರೆ. ಹೀಗೆ ಎರಕಲು ಗೂಟ ನೆಡುವುದರಿಂದ ಭೂಮಿ ತನ್ನ ಫಲವಂತಿಕೆಯನ್ನು ಕಳೆದುಕೊಳ್ಳುವುದಿಲ್ಲವೆಂತಲೂ, ಪೈರಿಗೆ ಯಾವ ರೋಗ ರುಜಿನ ಹುಳು ಹುಪ್ಪಟೆಯ ಕಾಟವಿರುವುದಿಲ್ಲವೆಂತಲೂ, ಪ್ರಾಣಿಗಳಿಂದ ತೊಂದರೆ ಬರುವುದಿಲ್ಲವೆಂತಲೂ ನಂಬಲಾಗುವುದು. ಕೆಲವರು ಮುಂಡಗದ ತುಂಡಿನ ಬದಲು ಕವೆಕೋಲುಗಳನ್ನು ನೆಟ್ಟು ಅದರ ಮೇಲೆ ಬಿಳಿಕಲ್ಲಿಟ್ಟು 'ಕಣ್ಣಾಸರು' ಎಂದುಕೊಳ್ಳುತ್ತಾರೆ.

ಗದ್ದೆಯನ್ನು ಕೊಯ್ಲು ಮಾಡುವಾಗ ಪೈರನ್ನು ಸಂಪೂರ್ಣವಾಗಿ ಕಟಾವು ಮಾಡದಿರುವುದು ಒಂದು ವಿಶೇಷ. ಮಲೆನಾಡಿನ ಭಾಗಗಳಲ್ಲಿ ಕೊನೆಯಲ್ಲಿ ಐದು ಸಸಿಗಳನ್ನು ಉಳಿಸುತ್ತಾರೆ. ಕೊಯ್ಲು ಮಾಡಿದ ಹುಲ್ಲನ್ನು ಹೊರೆ ಮಾಡಿ ಬಣವೆಗೆ ಹೊತ್ತು ಸಾಗಿಸುತ್ತಾರೆ. ಐದು ಸಸಿಗಳ ಜಾಗದ ಹತ್ತಿರದ ಕೊನೆಯ ಹೊರೆಯನ್ನು ನಿಶ್ಚಿತ ಮನುಷ್ಯನೊಬ್ಬ ಹೊತ್ತು ಹೊರಡುತ್ತಾನೆ. ಆಗ ಅವನು ಯಾರು ಮಾತನಾಡಿಸಿದರೂ ಮಾತನಾಡದೆ ಬವಣಗೆ ಹಾಕಿ, ಮನೆಯ ಒಲೆಯಲ್ಲಿ ಕೊಳ್ಳಿಯೊಂದನ್ನು ತಂದು ಪ್ರಸ್ತುತ ಗದ್ದೆಗೆ ಹಣಿದು ಬರುತ್ತಾನೆ. ಇದಕ್ಕೆ 'ಕರಿಕೊಳ್ಳಿ ಹಾಕುವುದು' ಎನ್ನುತ್ತಾರೆ. ಇಷ್ಟು ದಿವಸ ಪೈರಿನಿಂದ ತುಂಬಿ ತುಳುಕಿದ ಗದ್ದೆ ಬೋಳಾಗಿರುವುದನ್ನು ಕಂಡು ಯಾರೂ ಕಣ್ಣು ಹಾಕಬಾರದೆಂದು ಈ ಆಚರಣೆ. ಬಯಲು ನಾಡಿನಲ್ಲಿ ಐದು ಸಸಿ ಉಳಿಸಿ ಪೂಜಿಸುವುದನ್ನೇ 'ಬೆಳೆಮುಂಬು' ಎಂದು ಕರೆಯುತ್ತಾರೆ. ಕೊನೆಯಲ್ಲಿನ ಸಸಿಗಳನ್ನು ತುದಿಗಂಟು ಹಾಕಿ ಕಟ್ಟಿ ಕುಡುಗೋಲು ಮಸಗಲ್ಲುಗಳನ್ನಿಟ್ಟು ಪೂಜಿಸಿ ಎಡೆ ಹಿಡಿದು ಊಟ

ಮಾಡುತ್ತಾರೆ. ಬೆಳೆಮುಂಬು ಆಚರಣೆಗೆ ದಾಸಯ್ಯ ಪೂಜಾರಿಗಳನ್ನೂ ಆಹ್ವಾನಿಸುವುದುಂಟು. ಆಗ ಪೂಜೆಯ ಜೊತೆಗೆ ಮಂತ್ರ ಹೇಳುವುದು, ಶಂಖ ಊದುವುದು, ಜಾಗಟೆ ಬಾರಿಸುವುದು ನಡೆಯುತ್ತದೆ. ಬೆಳೆ ಮುಂಬನ್ನೇ ಹೋಲುವಂತಹ ಹತ್ತಿದೇವರ ಆಚರಣೆ ಒಂದಿದೆ. ಮೊದಲ ಬಾರಿಗೆ ಹತ್ತಿ ಬಿಡಿಸುವಾಗ ಆಯ್ದ ಗಿಡವೊಂದಕ್ಕೆ ಪೂಜಿಸಿ ಬಿಡಿಸಿದ ಮೊದಲ ಹತ್ತಿಯನ್ನು ಏರಿಸುತ್ತಾರೆ. ನಂತರ ಪ್ರತಿ ಸಾರಿ ಹಾಗೆಯೇ ಇರುತ್ತದೆ. ಎಲ್ಲ ಗಿಡಗಳನ್ನು ಕತ್ತರಿಸಿ ಹಾಕಿದರೂ ಹತ್ತಿದೇವರ ಗಿಡ ಮಾತ್ರ ಮುಂದಿನ ಉಳುಮೆಯಾಗುವ ತನಕ ಹಾಗೆಯೇ ಇರುತ್ತದೆ.

ಪ್ರಸ್ತುತ ಬೆಳೆಮುಂಬು ಮತ್ತು ಹತ್ತಿ ದೇವರ ಪೂಜೆ ಆಚರಣೆಯು ಪ್ರಾಕ್ತನ ಮಾನವನ ನಂಬಿಕೆಯ ಪಳೆಯುಳಿಕೆಯಂತೆ ಕಾಣುತ್ತದೆ. ಧಾನ್ಯಗಳಲ್ಲಿ ಬೆಳೆಗಳಲ್ಲಿ ಆತ್ಮವಿದೆ. ಅದನ್ನು ಪೂರ್ಣ ಕೊಯ್ದು ಹಾಕಿದರೆ ಪುನಃ ನಮಗೆ ಸಿಕ್ಕಲಾರದು ಎಂಬ ಮಂತ್ರಶಕ್ತಿಯ ಪರಿಣಾಮವೂ ಇದ್ದಂತೆ ತೋರುತ್ತದೆ. ಪ್ರಪಂಚದಾದ್ಯಂತ ಹರಡಿರುವ ಇಂತಹ ಅನೇಕ ಆಚರಣೆಗಳನ್ನು ಫ್ರೇಜರ್‌ರವರು ಗಮನಿಸಿ ವಿಶ್ಲೇಷಿಸಿದ್ದಾರೆ. ಆದಿವಾಸಿಗಳ ಪ್ರಕಾರ ಒಂದು ಹೊಲದಲ್ಲಿ ಬೆಳೆ ಬೆಳೆದಿದ್ದರೆ ಹಾಗಾಗಲು ಅದರಲ್ಲಿ ಧಾನ್ಯಮಾತೃವಿನ ಆತ್ಮ ಇರುವುದೇ ಕಾರಣ. ಬೆಳೆಯನ್ನು ಕೊಯ್ಯುವವರೆಗೆ ಮಾತ್ರ ಧಾನ್ಯಮಾತೃ ಹೊಲವನ್ನು ಬಿಟ್ಟು ಎಲ್ಲಿಯೂ ಹೋಗುವುದಿಲ್ಲ. ಆದರೆ ಬೆಳೆಯನ್ನು ಕೊಯ್ಯುತ್ತಾ ಬಂದಂತೆ ಸಾಯುವುದನ್ನು ತಪ್ಪಿಸಿಕೊಳ್ಳಲು ಒಂದರಿಂದ ಇನ್ನೊಂದು ಪೈರಿಗೆ ಓಡುತ್ತದೆ. ಆದರೆ ಹೊಲದಲ್ಲಿ ಎಲ್ಲ ಪೈರನ್ನೂ ಕೊಯ್ದು ಇನ್ನೊಂದು ಮಾತ್ರ ಉಳಿದಿದ್ದರೆ ಅದರಲ್ಲಿಯೇ ಧಾನ್ಯಮಾತೃ ಇರುವುದೆಂದು ಅವರ ನಂಬಿಕೆ. ಆದುದರಿಂದ ಧಾನ್ಯಮಾತೃ ಆ ಕೊನೆಯ ಪೈರಿನಲ್ಲಿ, ಕೊನೆಯ ಕಂತೆಯಲ್ಲಿ, ಕೊನೆಯ ಪೈರನ್ನು ಕೊಯ್ಯುವ ವ್ಯಕ್ತಿಯಲ್ಲಿ ಕೊನೆಯ ಕಂತೆ ಕಟ್ಟುವ ವ್ಯಕ್ತಿಯಲ್ಲಿ ಇರಲು ಸಾಧ್ಯ. ಈ ಧಾನ್ಯಮಾತೃವನ್ನು ಹೊರಗೆ ಹೋಗದಂತೆ ಸಾಯಿಸಿದರೆ ಅದರ ಶಕ್ತಿ ಹೊಲದಲ್ಲಿಯೇ ಉಳಿದು ಮುಂದಿನ ವರ್ಷ ಬೆಳೆ ಬೆಳೆಯಲು ಸುಗಮವಾಗುತ್ತದೆ. ಈ ಮಾತುಗಳ ಆಧಾರದ ಮೇಲೆ ನಮ್ಮ ಬೆಳೆಮುಂಬು ಆ ಹೊಲದ ಧಾನ್ಯದ ಆತ್ಮವನ್ನು ತನ್ನಲ್ಲೇ ಉಳಿಸಿಕೊಂಡು ಮುಂದಿನ ಫಲಶಕ್ತಿಗೆ ಕಾರಣವಾಗುವ ಸಂಕೇತವಾಗಿದೆ. ಹತ್ತಿ ದೇವರ ಪೂಜೆ ಆಚರಣೆಯೂ ಇದನ್ನೇ ನೆನಪಿಸುತ್ತದೆ. ಪ್ರಾಯಶಃ ಬಲಿ ಕೊಡುವ ಪದ್ಧತಿ ಸುಧಾರಣೆ ಆಗಿ ಆಗಿ ಬೆಳೆ ಉಳಿಸುವ ಕ್ರಮಕ್ಕೆ ಬಂದು ನಿಂತಿದೆ.

ಮೂಲ : "ನಾಗಾಭಿನಂದನ"
(ಶ್ರೀ ಎಂ.ಜಿ. ನಾಗರಾಜ್ ಅಭಿನಂದನ ಗ್ರಂಥ)

ಬರಿಮೈ ಚಕ್ರವರ್ತಿ

ನಾವು ಜನತೆಯಿಂದ ಏನನ್ನು ಗೊಂದಲ ಮಯವಾಗಿ ಪಡೆಯುತ್ತೇವೋ ಅದನ್ನು ಒಪ್ಪವಾಗಿಸಿ ಅವರಿಗೆ ಪುನಃ ನೀಡುವುದಷ್ಟೇ, ನಾವು ಮಾಡುವ ಕೆಲಸ. *ಮಾವೋ-ತ್ಸೆ-ತುಂಗ್*

ಕಥೆಗಾರನೂ ಆಗಿದ್ದ ಶಾಲಾ ಅಧ್ಯಾಪಕರೊಬ್ಬರು ತನ್ನ ಪುಟಾಣಿ ವಿದ್ಯಾರ್ಥಿಗಳಿಗೆ ತಮಗೆ ಇಷ್ಟವಾದದ್ದನ್ನು ಮಾಡಿಕೊಳ್ಳಲು ಹೇಳಿ, ಕಥೆಯೊಂದನ್ನು ಬರೆಯಲು ಪ್ರಾರಂಭಿಸಿದರು. ಆತ್ಮೀಯತೆಯ ತಮ್ಮ ಮೇಷ್ಟ್ರು ಏನು ಬರೆಯುತ್ತಿದ್ದಾರೆಂದು ನೋಡುವ ಕುತೂಹಲದಿಂದ ಪುಟಾಣಿಗಳು ಅವರ ಸುತ್ತ ಜಮಾಯಿಸಿದರು. ಕೆಲವರು ಅವರ ಬೆನ್ನ ಹಿಂದಿನಿಂದ ಇಣಿಕಿ ನೋಡುತ್ತಿದ್ದರೆ, ಇನ್ನೂ ಕೆಲವರು ಅವರ ಕಂಕಳ ಸಂದಿಯಿಂದ ಇಣಿಕಿದರು. ಮೇಷ್ಟ್ರು ಬರೆದಿದ್ದ ನಾಲ್ಕು ಸಾಲುಗಳನ್ನು ಓದಿದ ಪುಟಾಣಿಗಳು ಒಬ್ಬೊಬ್ಬರಾಗಿ ತಾವೇ ಕಥೆಯ ಮುಂದಿನ ಸಾಲುಗಳನ್ನು ತಮ್ಮ ಕಲ್ಪನೆಗೆ ತಕ್ಕಂತೆ ಹೇಳತೊಡಗಿದರು. ಪ್ರೀತಿಯ ಮೇಷ್ಟ್ರು ಪುಟಾಣಿಗಳು ಹೇಳಿದಂತೆ ಕಥೆಯ ಸಾಲುಗಳನ್ನು ಬರೆದರು. ಕಥೆಯು ಕೊನೆಗೊಂಡಾಗ ಅದು ಮೇಷ್ಟ್ರು ಬರೆದ ಕಥೆಯಾಗದೆ, ವಿದ್ಯಾರ್ಥಿಗಳು ಬರೆದ ಕಥೆಯಾಗಿತ್ತು. ಹೀಗೊಂದು ಕಥೆಯನ್ನು ಠಾಗೋರರು ಬರೆದಿದ್ದಾರೆಂದು ಓದಿದ ನೆನಪು.

ಗುರು ಶಿಷ್ಯ, ನಾಯಕ ಹಿಂಬಾಲಕರ ಮಧ್ಯೆ ಈಗಲೂ ಅಧಿಕಾರ ಕೇಂದ್ರಿತ ಸಂಬಂಧವೇ ರೂಢಿಯಲ್ಲಿದೆ. ಜ್ಞಾನ ನೀಡುವುದು ಗುರುವಿನ ಅಧಿಕಾರ, ಮುನ್ನಡೆಸುವುದು ನಾಯಕನ ಅಧಿಕಾರ, ಜ್ಞಾನವನ್ನು ಪಡೆಯುವುದು ಶಿಷ್ಯನ ಕರ್ತವ್ಯ, ಮರುಮಾತಿಲ್ಲದೆ ಹಿಂಬಾಲಿಸುವುದು ಹಿಂಬಾಲಕನ ಕರ್ತವ್ಯ. ಮೂರನೇ ರಾಷ್ಟ್ರದ ಜನರಿಗೆ ಜ್ಞಾನ, ವಿಜ್ಞಾನ ಕೊಟ್ಟು, ಅವರನ್ನು ನಾಗರೀಕೃತ ಗೊಳಿಸುವುದು ಬಿಳಿಯನ ಹೊರೆ ಎಂದು ಪಶ್ಚಿಮದವರು ಶತಮಾನಗಳಿಂದ ನಂಬಿದ್ದಾರೆ. ಆದರೆ ಜ್ಞಾನ ಹಿಮ್ಮುಖವಾಗಿಯೂ ಹರಿದು, ಜ್ಞಾನಿಯನ್ನು ಸಿರಿಗೊಳಿಸುತ್ತದೆ 'ಜ್ಞಾನಿ' ಅದಕ್ಕೆ ಸಿದ್ಧನಿದ್ದರೆ.

ಈಗೆರಡು ದಿನಗಳ ಹಿಂದಷ್ಟೇ ನನಗೊಂದು ಅನುಭವವಾಯಿತು. ಇಂತಹ ಅನುಭವಗಳು ಆಗಾಗ್ಗೆ ಆಗುತ್ತಲೇ ಇರುತ್ತವೆ ಎನ್ನಿ. ಐದು ವಾಕ್ಯಗಳನ್ನು ಅಡ್ಡಾದಿಡ್ಡಿ ಬೆರೆಸಿ ವಿದ್ಯಾರ್ಥಿಗಳಿಗೆ ಕೊಟ್ಟು, ಆ ವಾಕ್ಯಗಳನ್ನು ಒಂದು ವ್ಯವಸ್ಥಿತ ಪ್ಯಾರ ಮಾಡಲು ಹೇಳಿದೆ. ಅದನ್ನು ಯಾವ ರೀತಿ ಮಾಡಬಹುದೆಂಬ ಬಗ್ಗೆ ತಾವೇ ಸೂಚಿಸುವಂತೆ ತರಗತಿಯ ವಿದ್ಯಾರ್ಥಿಗಳಿಗೆ ಹೇಳಿದೆ. ನಿರ್ದಿಷ್ಟ ವಾಕ್ಯವನ್ನು ತೋರಿಸಿ ಒಬ್ಬ ವಿದ್ಯಾರ್ಥಿ, ಅದೇ ಪ್ಯಾರದ ಮೊದಲ ವಾಕ್ಯವಾಗಬೇಕೆಂದು ಸೂಚಿಸಿದ. 'ಏಕೆ?' ಎಂದೆ 'ನೋಡಿ ಸಾರ್, ಉಳಿದ ನಾಲ್ಕು ವಾಕ್ಯಗಳಲ್ಲಿ ಪ್ರತಿಯೊಂದರಲ್ಲೂ ಹಿಂದಣ ಉಲ್ಲೇಖ (ಬ್ಯಾಕ್ ರೆಫರೆನ್ಸ್) ಇರಲೇಬೇಕೆಂದು ಸೂಚಿಸುವ ಪದಗಳಾದ 'ದಿಸ್' 'ದೀಸ್', 'ಬಟ್' 'ಸೋ' ಎಂಬ ಪದಗಳಿವೆ. ಆದರೆ ನಾನು ಸೂಚಿಸುವ ವಾಕ್ಯದಲ್ಲಿ ಅಂಥ ಉಲ್ಲೇಖದ ಪದ ಇಲ್ಲ.' ಎಂದ 'ಎಲಾ ಇವನ !' ಅಂದುಕೊಂಡು, ಅವನ ಬೆನ್ನು ತಟ್ಟಿದೆ. ವಿದ್ಯಾರ್ಥಿ ನಾನು ಯೋಚಿಸಿದ್ದಕ್ಕಿಂತ ಹೆಚ್ಚು ಕರಾರುವಕ್ಕಾಗಿ ಯೋಚಿಸಿದ್ದ !

ಈ ಟಿಪ್ಪಣಿಯ ಪ್ರಾರಂಭದಲ್ಲಿ ಉಲ್ಲೇಖಿಸಿದ ಕ್ರಾಂತಿಕಾರಿ ಮಾವೋರ ಮಾತುಗಳೂ ಇದನ್ನೇ ಹೇಳುತ್ತವೆ. ನಾಯಕ ಮಾಡುವುದು ಇಷ್ಟೇ ಜನಸಾಮಾನ್ಯರಿಂದಲೇ ಪಡೆಯುವ ಗೋಜಲಾದ ಜ್ಞಾನವನ್ನು ಒಪ್ಪವಾಗಿಸಿ, ಜನತೆಗೆ ವಾಪಸ್ ನೀಡುವುದಷ್ಟೇ ಅವನು ಮಾಡುವ ಕೆಲಸ. ಇದಕ್ಕಿಂತ ಹೆಚ್ಚೇನೂ ಅಲ್ಲ.

> ಜ್ಞಾನದ ಅನ್ವೇಷಣೆ ಒಟ್ಟಾಗಿ ನಡೆಯಬೇಕು. ಜ್ಞಾನ ಗುರುವಿನ ಸ್ವತ್ತೂ ಅಲ್ಲ, ಪಶ್ಚಿಮದ ಸ್ವತ್ತೂ ಅಲ್ಲ. ಕೃಷಿ ವಿಜ್ಞಾನಿ ಮೂರನೇ ರಾಷ್ಟ್ರದ 'ದಡ್ಡ' ರೈತನಿಂದ ಕಲಿಯುವುದೂ ಬಹಳ ಇದೆ. ವಿಜ್ಞಾನಿಯ ಜ್ಞಾನದಷ್ಟು ರೈತನದು ಶಾಸ್ತ್ರೀಕರಣ ಗೊಂಡಿಲ್ಲದಿರಬಹುದು ಅಷ್ಟೇ.

ನಾವಿಂದು ಮಾಡಬೇಕಿರುವುದು ಅಧಿಕಾರ ಸಂಬಂಧದ (ಪವರ್ ರಿಲೇಷನ್) ಲಾಭ ಪಡೆದು, ದರ್ಪದಿಂದ ಬೀಗುತ್ತಿರುವ 'ಅಧಿಕೃತ ಜ್ಞಾನ ಹಾಗೂ ಜ್ಞಾನಿ'ಗಳು ಅದನ್ನು ಕಳಚಿಕೊಂಡು, ತಮ್ಮನ್ನೇ ಒಮ್ಮೆ ನೋಡಿಕೊಳ್ಳುವಂತೆ ಮಾಡುವುದು.

ಚಕ್ರವರ್ತಿಯೂ ತನ್ನ ವೈಭವೋಪೇತ ಉಡುಪು ಕಳಚಿ, ಸ್ನಾನಗೃಹದಲ್ಲಿ ತನ್ನ ನಗ್ನತೆಯನ್ನು ನೋಡಿಕೊಳ್ಳುತ್ತಾನಲ್ಲವೇ?

(ನಮ್ಮ ಕೃಷಿ ವಿಜ್ಞಾನಿಗಳು ಈ ರೀತಿ ಬರಿಮೈ ಚಕ್ರವರ್ತಿ ಯಾಗುವುದೆಂದು ?)

ಎಲ್. ಎನ್. ಗೋಪಾಲಕೃಷ್ಣ
ಹಿರಿಯ ಅಧ್ಯಾಪಕ, ಇಂಗ್ಲಿಷ್ ವಿಭಾಗ,
ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು,
ಬೆಂಗಳೂರು

ಮಲೆನಾಡ ಒಕ್ಕಲಿಗರ ಬತ್ತದ ಬೇಸಾಯ

ಕೊಪ್ಪ, ಶೃಂಗೇರಿ, ತೀರ್ಥಹಳ್ಳಿ ಪ್ರಾಂತ್ಯ ಎಂದೊಡನೇ ರಾಷ್ಟ್ರಕವಿ ಕುವೆಂಪು ಜ್ಞಾಪಕಬರುವುದು ಸಹಜ. ಈ ಪ್ರಾಂತ್ಯದ ಬತ್ತ, ಅಡಿಕೆ ಬೇಸಾಯಕ್ರಮಗಳು ಅವರ ಕತೆ ಕಾದಂಬರಿಗಳಲ್ಲಿ ಅಲ್ಲಲ್ಲಿ ವಿವರಿಸಲ್ಪಡುತ್ತಿರುತ್ತದೆ. ಈ ಪ್ರಾಂತದಲ್ಲಿ ಬಹುಪಾಲು ಕೃಷಿಕರು ಒಕ್ಕಲಿಗ ಸಮುದಾಯಕ್ಕೆ ಸೇರಿದ್ದು, ಅವರ ಬತ್ತದ ಬೇಸಾಯದ ಸ್ಥೂಲ ವಿವರಣೆ ಈ ಮುಂದೆ ಕೊಡಲಾಗಿದೆ.

ಸಸಿ ಪಾತಿ ಮಾಡುವುದು

ಹಿಂದಿನಿಂದಲೂ ಒಕ್ಕಲಿಗರು ಜೋಳಿಗ (ಬತ್ತ ಕಪ್ಪು, ಅಕ್ಕಿ ಕೆಂಪು, ದಪ್ಪ, ಹುಲ್ಲು ಅಧಿಕ, ರುಚಿ ಜಾಸ್ತಿ) ಕರಿದಡಿ (ದಪ್ಪ, ಅಧಿಕ ಇಳುವರಿ), ಪಟ್ಟೆ ಹೆಗ್ಗೆ (ಬಿಳಿ, ಗಿಡ್ಡ ತಳಿ) ಇವೇ ಮೊದಲಾದ ನಾಟಿ ತಳಿಗಳನ್ನು ಬಳಸುತ್ತಿದ್ದರು. ಕೃತ್ತಿಕಾ (ಮೇ ಅಂತ್ಯ) ಮಳೆಯಲ್ಲಿ ಹುಡಿ ಸಸಿ ಮಾಡಿ, ಮರದ ನೇಗಿಲಿನಿಂದ 6 ಸಾಲು ಹೂಡಿ, ಮಣ್ಣು ಮಟ್ಟ ಮಾಡಿ ಅಗೇಡಿ (Nursery) ಯಲ್ಲಿ ಬೀಜ ಹಾಕಲಾಗುತ್ತದೆ. ಈಗ ಮಳೆ ಕಡಿಮೆ ಆಗಿರುವ ಕಾರಣ ಹುಡಿಸಸಿ ಬದಲು ನೀರು ಸಸಿ(Wet nursery) ಮಾಡಲಾಗುತ್ತದೆ.

ಸಸಿ ಹಾಕುವ ಬೀಜವನ್ನು ಚೀಲದಲ್ಲಿ ಕಟ್ಟಿ 24 ಗಂಟೆಗಳ ಕಾಲ ನೀರಿನಲ್ಲಿ ನೆನೆಹಾಕಲಾಗುತ್ತದೆ. ನಂತರ ಸುಮಾರು ಎರಡು ದಿನಗಳಷ್ಟು ಕಾಲ ಚೀಲದಲ್ಲಿ ಕಟ್ಟಿ ಶಾಖ ಬರುವಂತೆ ಮಾಡಿ ಮೊಳಕೆ ಒಡೆಯಲು ಅನುವು ಮಾಡಿಕೊಡಲಾಗುತ್ತದೆ. ಸ್ವಲ್ಪ ಮೊಳಕೆ ಏಳುತ್ತಿರುವಾಗಲೇ ಬೀಜವನ್ನು ಅಗೇಡಿಯಲ್ಲಿ ನೀರು ನಿಲ್ಲಿಸಿ ಚೆಲ್ಲಲಾಗುವುದು. ನಂತರ ನೀರನ್ನು ಮೂರು ದಿನ ಅಗೇಡಿಯಲ್ಲಿ ನಿಲ್ಲುವಂತೆ ನೋಡಿಕೊಳ್ಳಬೇಕು. ನಂತರ ಒಂದು ವಾರ ಸಸಿ ಬೆರಳಷ್ಟು ಉದ್ದವಾಗುವವರೆಗೆ ನೀರು ಬಸಿದು ಬಿಡಬೇಕು. ಹಾಗಾಗದಿದ್ದಲ್ಲಿ ಸಸಿಕೊಳೆಯುವ ಸಾಧ್ಯತೆ ಇರುತ್ತದೆ.

ನೀರು ಸಸಿಗಿಂತ ಹುಡಿಸಸಿ ಗಟ್ಟಿ ಮತ್ತು ಎತ್ತರವಾಗಿರುತ್ತದೆ. ಅಗೇಡಿಯಿಂದ ಕಿತ್ತ ಸಸಿಯನ್ನು ಸಣ್ಣ ಸಣ್ಣ ಕಟ್ಟುಮಾಡಿ ಎರಡು ದಿನಗಳೊಳಗೆ ನೆಟ್ಟಿ ಮಾಡಲಾಗುವುದು. ನಾಟಿ ಮಾಡುವಗದ್ದೆಯನ್ನು 3 ಸಾಲು ನೇಗಿಲು ಹೂಡೆ ಮಾಡಿ, 15 ಗಾಡಿಯಷ್ಟು ಗೊಬ್ಬರ ಸೇರಿಸಿ "ನಳ್ಳಿ" ಹೊಡೆದು ಮಟ್ಟಮಾಡಲಾಗುತ್ತದೆ. ಈ ಎಲ್ಲಾ ಕಾರ್ಯಗಳನ್ನು ಜುಲೈ ಕೊನೆಯ ಒಳಗೆ ಪೂರೈಸಲಾಗುತ್ತದೆ.

ಸಸಿ ನಾಟಿ ಮಾಡುವಾಗ 'ಪಗಡೆಸಾಲು' ಎನ್ನುವ ಒಂದು ವಿಶಿಷ್ಟಕ್ರಮವನ್ನು ಇವರು ಪಾಲಿಸುವರು ಇಲ್ಲಿ ಒಂದರ ಹಿಂದೆ ಮತ್ತೊಂದು ಸಸಿ ನೆಡುವ ಬದಲಿಗೆ ಎರಡರ ಮಧ್ಯದಲ್ಲಿ ಮತ್ತೊಂದು ಮುಂದಿನ ಸಾಲಿನಲ್ಲಿ ಬರುವಂತೆ ನೋಡಿಕೊಳ್ಳಲಾಗುತ್ತದೆ. ಇದರಿಂದ ಸಸಿಗೆ ಗಾಳಿ, ಬೆಳಕು ಸಾಕಷ್ಟು ದೊರೆತು, ಚೆನ್ನಾಗಿ "ಹಿಂಡ್ಲು" (Tiller) ಹೊಡೆಯಲು ಸಹಕಾರಿಯಾಗುತ್ತದೆ. ಇದರಿಂದ ಕ್ರಿಮಿಕೀಟಗಳು ಬೆಳೆಗಳ ಸುತ್ತ ಕೇಂದ್ರೀಕೃತವಾಗುವುದು ತಪ್ಪಿ ಅವುಗಳ ಹಾವಳಿಯೂ ಕಡಿಮೆಯಾಗುವುದು. ಈ ರೀತಿ ನಾಟಿಮಾಡಿ ಒಂದು ವಾರದವರೆಗೆ ನೀರು ನಿಲ್ಲಿಸದಂತೆ ನೋಡಿಕೊಂಡು ನಂತರ ತಿಂಗಳುಗಟ್ಟಲೆ ನೀರು ನಿಲ್ಲಿಸಲಾಗುವುದು.

ರೋಗ ರಕ್ಷಣ ಕ್ರಮಗಳು (ನಂಬಿಕೆಗಳು)

(a) ಹುಳತುಂಡೆ : ಮಗೆ ಮಳೆಯಲ್ಲಿ ಗದ್ದೆ ತುಂಬ ನೀರು ನಿಲ್ಲಿಸಿ, ಮಧ್ಯದಲ್ಲಿ "ಮುಂಡುಗ" (Agave) ಗಿಡವನ್ನು ತಲೆ ಸಮೇತ ತಂದು ಒಂದು ಗದ್ದೆಗೆ ಒಂದರಂತೆ ನಿಲ್ಲಿಸಲಾಗುತ್ತದೆ. ಈ ಕ್ರಮವನ್ನು ಹುಳತುಂಡೆ ಎನ್ನಲಾಗಿದ್ದು ಇದರಿಂದ ಗದ್ದೆಗೆ ಬೀಳುವ ಹುಳುಗಳು/ರೋಗಗಳು ಕಡಿಮೆಯಾಗುತ್ತದೆ ಎಂದು ಈ ಪ್ರಾಂತ್ಯದಲ್ಲಿ ಆಳವಾದ ನಂಬಿಕೆ ಬೇರು ಬಿಟ್ಟಿರುತ್ತದೆ.

(b) ಕರಿಗೂಟ : ಕಾಡಿನಲ್ಲಿ ಬೆಂಕಿ ಬಿದ್ದು ಕಪ್ಪಾಗಿರುವ ಗೂಟಗಳನ್ನು ತಂದು ಗದ್ದೆಯಲ್ಲಿ ಸಾಲಾಗಿ ಮಗೆ ಮಳೆಯಲ್ಲಿ ನೆಡಲಾಗುವುದು. ಇದರಿಂದಲೂ ಬೆಳೆಗೆ ರಕ್ಷಣೆ ದೊರೆಯುತ್ತದೆಂದು ನಂಬಲಾಗಿದೆ.

(c) ಓಲೆ ದಪ್ಪ ಆಗಿ ಹುಳ ಬಿದ್ದಲ್ಲಿ "ಗರದ ಸೊಪ್ಪ"ನ್ನು (Agave ತರಹದ್ದು) ಹಿಡಿ ತರಹ ಒಟ್ಟು ಸೇರಿಸಿ, ಪೈರಿನಾದ್ಯಂತ ಆಡಿಸುವುದರಿಂದ ಹುಳುಗಳು ಬಿದ್ದು ನಾಶವಾಗುವುದಂತೆ. *(ವಿ.ಸೂ. ಇದೇ ರೀತಿ ಕ್ರಮವನ್ನು ಸಿದ್ದಿ ಬುಡಕಟ್ಟಿನ ಜನರೂ ಮಾಡುತ್ತಲಿರುವರು ಹಿತ್ತಲಗಿಡ : 1996 ಮೊದಲ ಸಂಚಿಕೆ ನೋಡಿರಿ.)* ಬತ್ತ ನಾಟಿಯಾದ ಒಂದು ತಿಂಗಳೊಳಗೆ ಹುಟ್ಟಿರುವ ಕಳೆಗಳನ್ನು ಕೈಯಲ್ಲೇ ಕಿತ್ತು ಹಾಕಲಾಗುವುದು.

ಬತ್ತದ ಕೊಯಿಲು ಮತ್ತು ಒಕ್ಕಲಾಟ

ಒಕ್ಕಲಿಗರ ಹೆಂಗಸರು ಬತ್ತ ಕೊಯಿದು ಅದನ್ನು ರಾಶಿ ಮಾಡುವ ವಿಧಾನವೇ ನೋಡಲು ಕುತೂಹಲಕರವಾಗಿರುತ್ತದೆ. ಹಿಡಿತುಂಬ ಬತ್ತವನ್ನು ಹಲ್ಲುಕತ್ತಿಯಿಂದ, ಕೊಯಿದು ತಲೆಮೇಲೆಕ್ಕೆ ತಂದು ಕೊರಳಿನ ಸುತ್ತ ಒಂದು ಸುತ್ತುಹಾಕಿ ತರುವುದರಿಂದ ಬತ್ತದ ತೆನೆ ನೇರವಾಗಿ, ಕಾಳು ಮೇಲೆ ಬರುವಂತಾಗಿ ಅದನ್ನು ಸಮತಟ್ಟಾಗಿ ಹೊಲದಮೇಲಿಡುವರು. ನಂತರ ಹೊರಲು ಸಾಕಾಗುವಷ್ಟು ತೆನೆಯನ್ನು ಒಂದೆಡೆ ಕಲೆಹಾಕಿ ಬಾಳೆ, ಕತ್ತ, ಬೈನೆ ಹಗ್ಗದಿಂದ ಬಿಗಿಯಾಗಿ ಕಟ್ಟಲಾಗುತ್ತದೆ. ಇದಕ್ಕೆ ಮೊದಲು ಕೊಯಿದ ಪೈರನ್ನು ನಾಲ್ಕಾರುದಿನ ಒಣಗಲು ಹೊಲದಲ್ಲೇ ಬಿಡಲಾಗುತ್ತದೆ.

ಮನೆಯ ಹಿಂದೊ ಅಥವಾ ಮುಂದೊ, ಅಥವಾ ಹೊಲದ ಸಮೀಪ ಎಲ್ಲಾದರೂ ಗಟ್ಟಿಯಾದ, ಸಮತಟ್ಟಾದ ಜಾಗದಲ್ಲಿ ಬತ್ತ ಒಕ್ಕುವ "ಕಣ" ವನ್ನು ವಿಶೇಷ ರೀತಿಯಲ್ಲಿ ತಯಾರು ಮಾಡಲಾಗುತ್ತದೆ. ಮೊದಲು ಅದರ ಮೇಲೆ ಬೆಳೆದಿರುವ ಹುಲ್ಲು, ಗಿಡಗಳನ್ನು ಸವರಿ, ಸ್ವಚ್ಛಮಾಡಿ, ಸಮತಟ್ಟಾಗಿ ಮಾಡಿ ಕೆಂಪು ಮಣ್ಣು, ಸಗಣಿ ನೀರು ಹಾಕಿ, ಸಾರಿಸಿ, ಕಣವನ್ನು ಸಿದ್ಧಗೊಳಿಸಲಾಗುತ್ತದೆ. ಒಣಗಿದ ಇಂತಹ ಕಣದ ಒಂದು ಬದಿಯಲ್ಲಿ 200 ರಿಂದ 300 ಬತ್ತದ ಹೊರೆಯನ್ನು ತಂದು ರಾಶಿಹಾಕಿ ವೃತ್ತಾಕಾರದಲ್ಲಿ "ಕುತ್ತರಿ" ಹಾಕಲಾಗುತ್ತದೆ. ಕೊನೆಯಲ್ಲಿ (ಮೇಲ್ಭಾಗದಲ್ಲಿ) ವೃತ್ತ ಕ್ಷೀಣಿಸುತ್ತಾ ಚೂಪಾಗಿ (ನೀರು ಒಳಬರದಂತೆ ತಡೆಯಲು) ಗೋಪುರದಾಕಾರದಲ್ಲಿ ಕುತ್ತರಿ ಏಳುತ್ತದೆ.

ಈ ಹಿಂದೆ ಮೇಟಿಕ್ರಮ ಅಂದರೆ 5 ರಿಂದ ಹತ್ತು ಎತ್ತುಗಳನ್ನು ಒಂದು ಉದ್ದನೆಯ ತಿರುಗುವ ಮರಕ್ಕೆ ಸಾಲಾಗಿ ಕಟ್ಟಿ, (ಅದಕ್ಕೆ "ದಾವಣಿ" ಎನ್ನಲಾಗುತ್ತಿತ್ತು) ಅವುಗಳು ತುಳಿದೇ ಬತ್ತವನ್ನು ಹುಲ್ಲಿನಿಂದ ಬೇರ್ಪಡಿಸಲಾಗುತ್ತಿತ್ತು. ಆದರೆ ಈಗ 'ರೋಣ'ಗಲ್ಲನ್ನು ಹಾಕಿಸುವುದರ ಮೂಲಕ ಈ ಕಾರ್ಯ ಮಾಡಲಾಗುತ್ತದೆ. ನಂತರ ಬಗಿನೆ ಹಿಡಿ ಬಳಸಿ ಗುಡಿಸಿ, ರಾಶಿ ಮಾಡಲಾಗುತ್ತದೆ.

ಬತ್ತದ ಕಾಳನ್ನು ಹೊಟ್ಟು, ದೂಳುಗಳಿಂದ ಬೇರ್ಪಡಿಸಿ ಸ್ವಚ್ಛಮಾಡಲು ಗಾಳಿಯ ವಿರುದ್ಧ ಒಂದು ತಟ್ಟೆಯಲ್ಲಿ ಬೀಸಿ ಅರ್ಧ ವೃತ್ತಾಕಾರದಲ್ಲಿ ಶೇಖರವಾಗುವ "ಬಟ್ಲು ತೂರೋದು" ಎಂಬ ಕ್ರಮ *(ಹಿತ್ತಲ ಗಿಡ 1995 ಸಂಪುಟ ೧,ಸಂಚಿಕೆ ೨-೩ ನೋಡಿರಿ)* ಅನುಸರಿಸಲಾಗುತ್ತದೆ. ಭೂಮಿ ಹುಣ್ಣಿಮೆಯಂದು ಕದಿರಿನ ಪೂಜೆ ಮಾಡಿ, ಅದನ್ನು ಮನೆಗೆ ತಂದು ಬಾಗಿಲಿಗೆ ಕಟ್ಟಿ, ಹೊಸ ಬತ್ತದ ಪಾಯಸಮಾಡುವ "ಹೊಸ್ತು" ಆಚರಿಸಲಾಗುತ್ತದೆ. ದೀಪಾವಳಿಯೆಂದು ನಡೆಸುವ ಆಯುಧ ಪೂಜೆ ಒಕ್ಕಲಿಗರ ಮತ್ತೊಂದು ಮುಖ್ಯ ಹಬ್ಬ.

ವಿವರಣೆ : ಶಂಕರಪ್ಪ, ಕನಕಪುರ,
ಹಾಲ್ಮುತ್ತೂರು ಅಂಚೆ, ಚಿಕ್ಕಮಗಳೂರು
ಲೇಖನ : ಟಿ.ಎಸ್. ಪ್ರಕಾಶ್ ಕಮ್ಮರಡಿ,
ತೇಜಸ್ವಿನಿ ಶರ್ಮ

ಅನ್ ಅಗ್ರಿಕಲ್ಚರಲ್ ಟೆಸ್ಟ್‌ಮೆಂಟ್ - ಆಲ್ಬರ್ಟ್ ಹೊವಾರ್ಡ್
(An Agricultural Testament - *by Sir Albert Howard*)

ಖವತ್ತು ವರ್ಷಗಳಷ್ಟು ಹಿಂದೆಯೇ ಕೃಷಿಯ ಪರಿಸರ ಪರಿಣಾಮಗಳನ್ನು ಕುರಿತು ಆಲ್ಬರ್ಟ್ ಹೊವಾರ್ಡ್ ಮೊದಲ ಬಾರಿಗೆ ಕ್ರಾಂತಿಯ ದನಿಯನ್ನೆತ್ತಿ 'ಅನ್ ಅಗ್ರಿಕಲ್ಚರಲ್ ಟೆಸ್ಟ್‌ಮೆಂಟ್' ಎಂಬ ಕೃತಿ ರಚಿಸಿದ. ರಾಸಾಯನಿಕಗಳ ಕರಾಳ ಹಸ್ತವು ಭೂಮಿ ತಾಯಿಯ ಶ್ರೀಮಂತವಾದ ಮಡಿಲನ್ನು ಲೂಟಿಹೊಡೆದು ಬರಿದು ಮಾಡುತ್ತಿರುವ ವಿನಾಶಕಾರ ಪ್ರವೃತ್ತಿಯನ್ನು ಈತ ಜಗತ್ತಿಗೆ ಬಹಿರಂಗಪಡಿಸಿದ. ಅಧಿಕ ಇಳುವರಿ ಆಸೆಗೆ ಬಲಿಯಾಗಿ ಮಾನವ, ಭೂಮಿಯ ಮೂಲ ಬಂಡವಾಳವಾದ ಮಣ್ಣನ್ನೇ ಹಾಳು ಮಾಡುತ್ತಿರುವುದು ಹಲವು ವಿಜ್ಞಾನಿಗಳಿಗೆ ಚಿಂತೆಗೆ ಕಾರಣವಾಯಿತಾದರೂ ಯಾರೂ ಈ ಬಗ್ಗೆ ಚಕಾರವೆತ್ತದೆ ಮೌನವಾಗಿದ್ದ ಸಂದರ್ಭದಲ್ಲಿ ಮಣ್ಣಿನ ವಿನಾಶದ ಬಗ್ಗೆ ಎಲ್ಲರ ಗಮನ ಸೆಳೆಯಲೆಂದೇ ಹೊವಾರ್ಡ್ ಈ ಕೃತಿ ರಚನೆ ಮಾಡಿದ. ಇದೇ ಕಾರಣದಿಂದಾಗಿಯೇ ಆತ ಆಧುನಿಕ ಕೃಷಿಯ ಯಾವುದೇ ವಿಧಾನವನ್ನು ಕೈಗೊಳ್ಳದೆ ಅದನ್ನು ಸಂಪೂರ್ಣವಾಗಿ ನಿರಾಕರಿಸಿದ ಹಾಗೂ ಅವಕಾಶ ದೊರೆತ ಕಡೆಗಳಲ್ಲೆಲ್ಲಾ ಅದನ್ನು ಅಪಹಾಸ್ಯಕ್ಕೆ ಒಳಪಡಿಸಿದ. ರಾಸಾಯನಿಕ ಕೃಷಿಯ ಬಗ್ಗೆ ಕೇವಲ ಟೀಕೆ ಮಾಡುವ ಟೀಕೆಕಾರರಂತಲ್ಲದೆ ರಾಸಾಯನಿಕ ಕೃಷಿಗೆ ವೈದೃಶವಾಗಿ ತನ್ನದೇ ಆದ ರೀತಿಯಲ್ಲಿ ಸಾವಯವ ಕೃಷಿ ಪ್ರಯೋಗಗಳನ್ನು ನಿರೂಪಿಸುವುದರಲ್ಲಿ ಹೊವಾರ್ಡ್ ತನ್ನ ಪ್ರತಿಭಟನೆಯ ಬೇರುಗಳನ್ನು ಗಟ್ಟಿಗೊಳಿಸಿದ. ಹೊವಾರ್ಡ್ ಕಂಡುಹಿಡಿದ ಇಂದೋರ್ ಕಾಂಪೋಸ್ಟಿಂಗ್ ತಯಾರಿಕೆ ವಿಧಾನವು ಪ್ರಪಂಚದ ನಾನಾ ಕಡೆಗಳಲ್ಲಿ ಹಲವಾರು ವರ್ಷದ ವರೆಗೆ ಪ್ರಚಲಿತವಿದ್ದಿತು. ಮಣ್ಣಿನಲ್ಲಿನ ಹ್ಯೂಮಸ್ ಅಂಶಕ್ಕೂ ಸಸ್ಯದೊಳಗಿನ ಜೀವ ರಸಕ್ಕೂ ನಡುವಣ ಸಜೀವ ಶಿಲೀಂಧ್ರ ಸೇತುವಾಯಾಗಿರುವ ಮೈಕೋರೈಜಾ ಸಹಯೋಗವನ್ನು ಸಹ ಹೊವಾರ್ಡ್ ಕಂಡು ಹಿಡಿದನು.

"1910ರ ಹೊತ್ತಿಗೆ ಎಲ್ಲ ರೋಗಗಳಿಂದ ಮುಕ್ತವಾಗಿರುವಂತಹ ಬೆಳೆಯನ್ನು ಬೆಳೆಯಲು ನನಗೆ ಸಾಧ್ಯವಾಯಿತು. ಇದಕ್ಕಾಗಿ ನಾನು ಯಾವುದೇ ಶಿಲೀಂಧ್ರ ಶಾಸ್ತ್ರಜ್ಞರು, ಕೀಟ ಶಾಸ್ತ್ರಜ್ಞರು, ಬ್ಯಾಕ್ಟೀರಿಯಾ ತಜ್ಞರು, ಕೃಷಿ ರಸಾಯನ ವಿಜ್ಞಾನಿಗಳು, ಅಂಕಿಸಂಖ್ಯಾ ಶಾಸ್ತ್ರಜ್ಞರು, ಮಾಹಿತಿ ಮೂಲಗಳು, ಕೃತಕಗೊಬ್ಬರಗಳು, ಸಿಂಪರಣಾ ಯಂತ್ರಗಳು, ಕೀಟನಾಶಕಗಳು, ಶಿಲೀಂಧ್ರನಾಶಕಗಳು, ಕ್ರಿಮಿನಾಶಕಗಳು ಮತ್ತು ಇತರ ಯಾವುದೇ ಬಗೆಯ ಅತಿವೆಚ್ಚಕಾರಿಯಾದ ಪ್ರಯೋಗ ಕೇಂದ್ರಗಳ ಉಪಕರಣಗಳನ್ನು ಸ್ವಲ್ಪವೂ ಕೂಡ ಬಳಸಲಿಲ್ಲ" ಎಂದು ಬರೆದಿದ್ದಾನೆ.

ಪ್ರಕೃತಿಯಲ್ಲಿ ಅಸಮತೋಲನೆ ಉಂಟಾಗಿದೆ. ಮಣ್ಣಿನ ವಿನಾಶದತ್ತ ಮುಖ್ಯವಾಗಿ ಎಲ್ಲರ ಗಮನ ಸೆಳೆಯುವ ಹಾಗೂ ಅದರ ಕೆಲವು ವಿನಾಶಕಾರೀ ಪರಿಣಾಮಗಳ ಬಗ್ಗೆ ಸೂಚನೆ ನೀಡುವ ಮತ್ತು ಮಣ್ಣಿನ ಫಲವತ್ತತೆಯನ್ನು ಪುನರ್ ಸ್ಥಾಪಿಸುವ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತ ಚಿಂತನೆಗಳನ್ನು ನಿರೂಪಿಸುವುದೇ ಈ ಗ್ರಂಥದ ಉದ್ದೇಶ ಎಂದು ಹೊವಾರ್ಡ್ ಮುನ್ನುಡಿಯಲ್ಲಿ ಹೇಳಿದ್ದಾನೆ.

ಪ್ರಸ್ತುತ ಗ್ರಂಥದಲ್ಲಿ 15 ಅಧ್ಯಾಯಗಳಿದ್ದು ಪ್ರಸ್ತಾವನೆಯೊಂದಿಗೆ, ಮಣ್ಣಿನ ಫಲವತ್ತತೆಯ ಸ್ವರೂಪ, ಫಲವತ್ತತೆಯ ಪುನರ್‌ಸ್ಥಾಪನೆ, ಇಂದೋರ್ ಪ್ರಕ್ರಿಯೆ, ಇಂದೋರ್ ಪ್ರಕ್ರಿಯೆಯ ಪ್ರಾಯೋಗಿಕ ಅನ್ವಯಗಳು, ಇಂದೋರ್ ಪ್ರಕ್ರಿಯೆಯ ಅಭಿವೃದ್ಧಿ, ಮಣ್ಣಿನಲ್ಲಿ ಗಾಳಿಯಾಡುವಿಕೆ, ಮಣ್ಣಿನ ಕೆಲವು ರೋಗಗಳು, ಪರಾವಲಂಬಿಗಳೊಂದಿಗೆ ಬೆಳೆ ಮತ್ತು ಪ್ರಾಣಿಗಳ ಪುನರ್ ಸ್ಥಾನೀಕರಣ ಮಣ್ಣಿನ ಫಲವತ್ತತೆ ಮತ್ತು ರಾಷ್ಟ್ರೀಯ ಆರೋಗ್ಯ ಕೃಷಿ ಸಂಶೋಧನೆ ನಿರ್ಣಯಗಳು ಮತ್ತು ಸಲಹೆಗಳು ಈ ಶೀರ್ಷಿಕೆಗಳಲ್ಲಿ ವಿಷಯವನ್ನು ವಿವರವಾಗಿ ಚರ್ಚಿಸಲಾಗಿದೆ.

ಈ ಪುಸ್ತಕದ ಪ್ರಕಟಕರು
The other India Press, Goa, in association with Earth Care Books Bombay and Third World Network Malaysia. ಬೆಲೆ 120/- (*ವಿ.ಸೂ. ಇಕ್ರಾ ಸಂಸ್ಥೆ, ಬೆಂಗಳೂರು ಇವರ ಹತ್ತಿರ ದೊರೆಯುವುದು.*)

ಪುಸ್ತಕ ಪರಿಚಯ : ***ಶ್ರೀಮತಿ ಉಷಾ ಕಿರಣ್,*** ಸಂವಹನ ಕೇಂದ್ರ, ಕೃಷಿ ವಿ.ವಿ. ನಿಲಯ, ಬೆಂಗಳೂರು

"ವಿದ್ಯಾಗುರು" ರಹಸ್ಯದ ಸಾರಾಂಶ

ಲೇಖಕರು ಶ್ರೀ ಹಯಾತ್ ಸಾಬ್,
ಹರಪನಹಳ್ಳಿ, ಶಿವಮೊಗ್ಗ ಜಿಲ್ಲೆ

ಶ್ರೀ ಬಸಪ್ಪ ರೆಡ್ಡಿಯವರು ಬರೆದು ತಿಳಿಸಿದ ಈ ಪುಸ್ತಕ ನಮ್ಮ ವೃಕ್ಷಾಯುರ್ವೇದದ ರೀತಿ ಕುತೂಹಲಕಾರಿಯಾಗಿದೆ. ಮುಸ್ಲಿಂ ಧರ್ಮದ ಹಿನ್ನೆಲೆಯಲ್ಲಿ ಶ್ರೀ ಹಯಾತ್ ಸಾಹೇಬರು ಬರೆದಿರುವುದರಿಂದ ಮೀನು, ಮಾಂಸ ಇತ್ಯಾದಿಗಳನ್ನು ವ್ಯವಸಾಯದಲ್ಲಿ ಬಳಸಲು ಹಲವೆಡೆ ಸೂಚಿಸಲಾಗಿದೆ. ಇದರಲ್ಲಿ ಉಲ್ಲೇಖಿಸಿರುವ ಮೂರು ಕೃಷಿ ಪದ್ಧತಿಗಳನ್ನು ಈ ಮುಂದೆ ನೀಡಲಾಗಿದೆ.

ವೃಕ್ಷಗಳನ್ನು ಹಾಕುವ ಸ್ಥಳ ವಿಚಾರ

ಬಾವಿ, ಕೆರೆ ಮುಂತಾದವುಗಳ ಸಮೀಪದಲ್ಲಿ ಗಿಡಗಳನ್ನು ಹಾಕಿದರೆ ಚೆನ್ನಾಗಿ ಫಲಿಸುತ್ತವೆ. ಸವಳುಭೂಮಿ, ಕಬ್ಬಿಣದ ಕಲ್ಲು ಇದ್ದಲು ಭೂಮಿ, ಮಿಷಕಲ್ಲು, ಗೆದ್ದಲು ಇರುವ ಭೂಮಿ, ಜವಗು ನೆಲ, ಬಿಳುಪುಭೂಮಿ, ನಿರ್ಜಲಪ್ರದೇಶ, ಎರೆಭೂಮಿ, ಇಂಥಾ ಸ್ಥಳಗಳಲ್ಲಿ ವೃಕ್ಷಗಳನ್ನು ಹಾಕಿದರೆ ವೃದ್ಧಿ ಹೊಂದುವುದಿಲ್ಲ. ಇತರ ಭೂಮಿಗಳಲ್ಲಿ ಮೊದಲು ಭೂಮಿಯಲ್ಲಿ ಉದ್ದು, ಎಳ್ಳು ಇವುಗಳನ್ನು ಬಿತ್ತಬೇಕು. ಈ ಪೈರು ವೃದ್ಧಿ ಆಗಿ ಫಲಕ್ಕೆ ಬಂದಾಗ ಸದರಿ ಭೂಮಿಯನ್ನು ಪೈರು ಸಹಿತವಾಗಿ ಮಾಗಿ ಮಾಡಿದರೆ ಭೂಮಿ ದೋಷವು ಹೋಗುತ್ತೆ.

ಹಾಕಬೇಕಾದ ಗೊಬ್ಬರ ವಿಚಾರ

ಕುರಿಯಹಿಕ್ಕೆ 1 ಭಾಗ, ಮೇಕೆ ಹಿಕ್ಕೆ 1 ಭಾಗ, ಬತ್ತಿ ಬೀಜದ ಹಿಂಡಿ 3 ಭಾಗ, ಅಕ್ಕಿ ಹಿಟ್ಟು 1 ಭಾಗ, ದೊಡ್ಡ ಜಂತುಗಳ ಮಾಂಸ 4 ಭಾಗ. ಈ ಪ್ರಕಾರ ತೆಗೆದುಕೊಂಡು, 7 ದಿನ ಕೊಳೆ ಹಾಕಿ, ಆ ಗೊಬ್ಬರವನ್ನು ಯಾವತ್ತು ವೃಕ್ಷಗಳಿಗೆ ಉಪಯೋಗಿಸಬೇಕು.

ಹೂವುಗಳ ಬಣ್ಣ ಬದಲಿಸಲು

ಅ) ರಂಧನಿ, ಲೋಧ್ರ, ಕೆಂಪುಹತ್ತಿಯ ಹೂವು, ಪಾಲಾರ ಇವುಗಳ ಕಷಾಯವನ್ನು ಬಿಳೇಹೂವುಗಳನ್ನು ಬಿಡುವ ಗಿಡಬಳ್ಳಿಗಳಿಗೆ ಹಾಕುತ್ತಾ ಬಂದರೆ ಹಳದಿ ವರ್ಣದ ಹೂವುಗಳನ್ನು ಬಿಡುತ್ತವೆ.

ಆ) ಕೆಂಪು ಹೂವುಗಳನ್ನು ಬಿಡುವ ಗಿಡಗಳ ಬೇರಿಗೆ ತುಪ್ಪವನ್ನು ಹಚ್ಚಿ ಬಿಳುಪಾದ ನೀರನ್ನು ಹಾಕುತ್ತಾ ಬಂದರೆ ಬಿಳೀ ಪುಷ್ಪಗಳನ್ನು ಬಿಡುತ್ತವೆ. ಬಿಳೀ ಪುಷ್ಪಗಳನ್ನು ಬಿಡುವ ಗಿಡಗಳ ಬೇರಿಗೆ ಜೇನುತುಪ್ಪವನ್ನು ಹಚ್ಚಿ ಕೆಂಪಾದ ನೀರನ್ನು ಹಾಕುತ್ತಾ ಬಂದರೆ ಕೆಂಪುಹೂವುಗಳನ್ನು ಬಿಡುತ್ತವೆ. ಯಾವ ಬೀಜಗಳನ್ನಾದರು ಯಾವ ವರ್ಣದ ವಸ್ತುವಿನಲ್ಲಿ ನೆನೆಹಾಕಿ ಯಾವ ವರ್ಣದ ನೀರನ್ನು ಹಾಕುತ್ತೇವೋ ಆ ವರ್ಣದ ಹೂವುಗಳನ್ನೇ ಬಿಡುತ್ತವೆ.

ಅವಲೋಕನ : ಶ್ರೀ ಬಿ.ಎಂ. ಬಸಪ್ಪರೆಡ್ಡಿ
ಜೂನಿಯರ್ ಮ್ಯಾನೇಜರ್,
ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ,
ಭದ್ರಾವತಿ

ಅದರ್ ಕರ್ನಾಟಕ ಬುಕ್ ಸೆಂಟರ್
(ಒ.ಕೆ.ಬಿ.ಸಿ)
(ಇಕ್ರಾದ ಅಂಗ ಸಂಸ್ಥೆ)

ಒ.ಕೆ.ಬಿ.ಸಿ ನಮ್ಮ ಸಮಾಜದಲ್ಲಿನ ಪ್ರತಿಯೊಂದು ಕ್ಷೇತ್ರವನ್ನು ಕುರಿತಂತೆ ಜನಕೇಂದ್ರಿತವಾದ ಪರ್ಯಾಯ ಸಾಹಿತ್ಯವನ್ನು ಜನಸಾಮಾನ್ಯರಿಗೆ ತಲುಪಿಸುವ ಉದ್ದೇಶದಿಂದ ಪ್ರಾರಂಭವಾಗಿದೆ.

ನಮಗೆ ತಿಳಿದಂತೆ ಕೆಲವು ಕ್ರಿಯಾತ್ಮಕವಾದ ಆಲೋಚನೆಗೆ ಈಡುಮಾಡುವ ಪುಸ್ತಕಗಳು ಪ್ರಕಟವಾಗಿದ್ದರೂ ಈ ಪುಸ್ತಕಗಳನ್ನು ಓದುಗರಿಗೆ ತಲುಪಿಸುವಲ್ಲಿ ಪ್ರಜ್ಞಾಪೂರ್ವಕ ಪ್ರಯತ್ನವಾಗದಿರುವುದು ಶೋಚನೀಯ. ಇದಕ್ಕೆ ಪುಸ್ತಕಗಳ ಆಯ್ಕೆಯೇ ಸೀಮಿತವಾಗಿರುವುದು, ಪುಸ್ತಕಗಳ ಆಯ್ಕೆಗೆ ಸೂಕ್ತ ಅವಕಾಶವಿಲ್ಲದಿರುವುದು, ಜನರಲ್ಲಿನ ಓದುವ ಹವ್ಯಾಸ ಕ್ಷೀಣಗೊಳ್ಳುತ್ತಿರುವುದು, ಇನ್ನಿತರ ಒತ್ತಡಗಳು, ಬದಲಾಗುತ್ತಿರುವ ಪ್ರಾಪಂಚಿಕ ದೃಷ್ಟಿಕೋನ ಹಾಗೂ ವಾಣಿಜ್ಯ ಹಿತಾಶಕ್ತಿಗಳು ದಿಕ್ಕುತಪ್ಪಿಸುವುದು ಕಾರಣವಾಗಿದೆ.

ಈ ಸಂದರ್ಭದಲ್ಲಿ ಜನರಿಗೆ ಆಯ್ಕೆ ಮಾಡಿಕೊಳ್ಳುವ ಅವಕಾಶ ಕಲ್ಪಿಸಿದರೆ ಹಾಗೂ ಸಾಕಷ್ಟು ತಿಳುವಳಿಕೆ ನೀಡುವ ಸಾಹಿತ್ಯವನ್ನು ಒದಗಿಸಿದರೆ ಜನರು ಆಯ್ಕೆಮಾಡಲು ಸುಲಭಸಾಧ್ಯವಾಗುತ್ತದೆ. ಪರ್ಯಾಯ ಪುಸ್ತಕಗಳು ಇತ್ತೀಚಿಗೆ ಹೆಚ್ಚು ಜನಪ್ರಿಯಗೊಳ್ಳುತ್ತಿರುವುದೇ ಇದಕ್ಕೆ ಉದಾಹರಣೆಯಾಗಿದೆ.

ಈ ವಿಚಾರ ಮಂಥನದ ಮೊದಲ ಹೆಜ್ಜೆಯಾಗಿ ಒ.ಕೆ.ಬಿ.ಸಿ. ಸಾಮಾಜಿಕ ಪಿಡುಗುಗಳಿಗೆ ಸಂಬಂಧಿಸಿದ ಕನ್ನಡ ಪುಸ್ತಕಗಳನ್ನು ಸಂಗ್ರಹಿಸಿ, ಆ ಮೂಲಕ ಬದಲಾವಣೆಯ ಪ್ರಕ್ರಿಯೆಗೆ ಅವಕಾಶ ನೀಡುವುದು ಹಾಗೂ ಕಾಳಜಿಯುಳ್ಳ ಓದುಗರಿಗೆ ಈ ಸಾಹಿತ್ಯ ದೊರೆಯಲು ಅನುವು ಮಾಡಿಕೊಡುವುದು ಇದರ ಗುರಿಯಾಗಿದೆ.

ಹೆಚ್ಚಿನ ವಿವರಗಳಿಗೆ

ಒ.ಕೆ.ಬಿ.ಸಿ
ಇಕ್ರಾ - Institute for Cultural Research and Action
ಸಂಸ್ಕೃತಿ, ಅಂಚೆ ಪೆಟ್ಟಿಗೆ ಸಂಖ್ಯೆ 7551
ನಂ.22, ಮೈಕೇಲ್ ಪಾಳ್ಯ, ಹೊಸ ತಿಪ್ಪಸಂದ್ರ,
ಬೆಂಗಳೂರು - 560 075

ಅದರ್ ಕರ್ನಾಟಕ ಬುಕ್ ಸೆಂಟರ್‌ನಲ್ಲಿ ಲಭ್ಯವಿರುವ ಪುಸ್ತಕಗಳು

ಕ್ರಮ ಸಂಖ್ಯೆ	ಪುಸ್ತಕದ ಹೆಸರು	ಲೇಖಕರು	ಬೆಲೆ
೧.	ಸಹಜ ಕೃಷಿ	ಶಿವನಂಜಯ್ಯ	35.00
೨.	ಒಂದು ಹುಲ್ಲಿನ ಕ್ರಾಂತಿ	ಸಂತೋಷ್ ಕೌಲಗಿ	30.00
೩.	ನಿಸರ್ಗದ ಕೊಡುಗೆ ಎರೆಹುಳು ಗೊಬ್ಬರ	ಡಾ. ರಾಧಾ ಡಿ.ಕಾಳೆ	10.00
೪.	ಕಾಂಪೋಸ್ಟ್ ಗೊಬ್ಬರದ ಚಮತ್ಕಾರ	ವಿ. ಬೊಂಬಾಟ್‌ಕರ್	15.00
೫.	ಕಾಂಪೋಸ್ಟ್ ಗೊಬ್ಬರ	ಇಕ್ರಾ	10.00
೬.	ಸಾವಯವ ಬೇಸಾಯ	ಇಕ್ರಾ	20.00
೭.	ರಾಸಾಯನಿಕಗಳು ಕೊಲ್ಲುತ್ತವೆ	ಇಕ್ರಾ	10.00
೮.	ವೃಕ್ಷಾಯುರ್ವೇದಂ (ಲೋಕೋಪಕಾರಂ)	ಚಾವುಂಡರಾಯ	15.00
೯.	ಅಂತರ್ಜಲ	ಡಾ.ಟಿ.ಗೋವಿಂದಯ್ಯ	10.00
೧೦.	ನೀರಾವರಿ	ಎ.ಕೆ. ರೇಂಜಿರೆ	8.00
೧೧.	ಮಣ್ಣು ಮತ್ತು ಬೆಳೆ	ಪ್ರೊ.ಬಿ.ವಿ. ವೆಂಕಟರಾವ್	6.00
೧೨.	ಒಣಬೇಸಾಯ	ಡಾ. ಕುಮಾರಸ್ವಾಮಿ	10.00
೧೩.	ಗೊಬ್ಬರಗಳು	ಹೆಚ್. ಶ್ರೀನಿವಾಸ	8.00
೧೪.	ಮಳೆ	ಟಿ.ಆರ್. ಅನಂತರಾಮು	8.00
೧೫.	ನಮ್ಮ ಮರಗಳು	ಹೆಚ್.ಆರ್. ಕೃಷ್ಣಮೂರ್ತಿ	25.00
೧೬.	ಗೆಡ್ಡೆ ತರಕಾರಿಗಳು	ಪಿ. ನಾರಾಯಣ ಸ್ವಾಮಿ	18.00
೧೭.	ಬಳ್ಳಿ ತರಕಾರಿಗಳು	"	18.00
೧೮.	ಬಹುವಾರ್ಷಿಕ ತರಕಾರಿಗಳು	"	18.00
೧೯.	ಸೊಪ್ಪು ತರಕಾರಿಗಳು	"	30.00
೨೦.	ಹಿತ್ತಲ ಅಕ್ಕ	ಗಂಗಮ್ಮ	50.00
೨೧.	ಆಹಾರ ಪರಿಸರ ಮತ್ತು ಆರೋಗ್ಯ	ಡಾ. ಸಿ.ಆರ್. ಚಂದ್ರಶೇಖರ್	60.00
೨೨.	ಭಾರತದ ಅಂತರರಾಜ್ಯ ನದಿನೀರು ವಿವಾದಗಳು	ಮುರಳೀಧರ ಖಜಾನೆ	50.00
೨೩.	ಕನ್ನಡ ಅಧ್ಯಯನ (ಪರಿಸರ)	ಕೆ.ಜಿ. ವಾಸುಕಿ	50.00
೨೪.	ಕೀಟಗಳು ಬದುಕುವ ದಾರಿ	ಪಿ. ಶಿವರಾಮ ರೈ	8.00
೨೫.	ತೋಟದ ಬೆಳೆಗಳಲ್ಲಿ ಸಸ್ಯಾಭಿವೃದ್ಧಿ	ಡಾ. ಪಿ. ನಾರಾಯಣಸ್ವಾಮಿ	16.00
೨೬.	ಆರೋಗ್ಯ ಕೈಪಿಡಿ	ಡಾ. ಪ್ರಕಾಶ್ ರಾವ್	15.00
೨೭.	ಕೃಷಿ	ಸಂಜೀವನ	15.00
೨೮.	ನಮ್ಮೂರ ನಾಟಿವೈದ್ಯ	"	15.00
೨೯.	ಕುಟುಂಬದ ಆರೋಗ್ಯ ನಿಮ್ಮ ಹೊಣೆ	ಡಾ. ಆನಂದ ಕಬ್ಬೂರ	35.00
೩೦.	ಸಸ್ಯ ಪುರಾಣ	ಬಿ.ಜಿ.ಎಲ್. ಸ್ವಾಮಿ	35.00
೩೧.	ಪರಿಸರ	ಹೆಚ್.ಆರ್. ಕೃಷ್ಣಮೂರ್ತಿ	3.25
೩೨.	ಜೀವಜಾಲ	ಚಂದ್ರಶೇಖರ ಗುಬ್ಬಿ	45.00
೩೩.	ಪರಿಸರ ಪ್ರಜ್ಞೆ ಮತ್ತು ನಗರ ನಿರ್ಮಾಣ	ನಾಗೇಶ ಹೆಗಡೆ	30.00
೩೪.	ಪರಿಸರದ ಸ್ವರೂಪ	ಜಿ.ಎಸ್. ಜಯದೇವ್	13.00
೩೫.	ಪ್ರಜ್ಞೆ ಮತ್ತು ಪರಿಸರ	ಯು.ಆರ್. ಅನಂತಮೂರ್ತಿ	70.00
೩೬.	ನಮ್ಮ ಪರಿಸರ	ಬಿ.ವೈ. ಶ್ರೀಧರ್	30.00
೩೭.	ಪರಿಸರ ದರ್ಶನ	ಹೆಚ್.ಆರ್. ಕೃಷ್ಣಮೂರ್ತಿ	15.00
೩೮.	ಪರಿಸರ ಕಥೆ	ಪೂರ್ಣಚಂದ್ರ ತೇಜಸ್ವಿ	50.00
೩೯.	ಜಾನುವಾರು ಚಿಕಿತ್ಸಾ ಕ್ರಮಗಳು	ಸಂಜೀವನ	15.00
೪೦.	ಸಂಕ್ಷಿಪ್ತ ಖಗೋಲ ದರ್ಶನ	ಡಾ. ಆನಂದ ದೇಶಪಾಂಡೆ	65.00
೪೧.	ತುಕ್ಕು ಮತ್ತು ಪರಿಸರ	ಡಾ. ಬಿ.ವಿ. ಗಾಯಿತ್ರಿ	8.00
೪೨.	ಜೇನು ಸಾಕಾಣಿಕೆ	ಕಿಶೋರ್ ಕುಮಾರ್ ಶ್ರೇಣಿ	8.00
೪೩.	ಹಂದಿ ಸಾಕಾಣಿಕೆ	ಡಾ. ರಾಘುವೇಂದ್ರ ರಾವ್	8.00
೪೪.	ಔಷಧ ನೀತಿ ಮತ್ತು ಶ್ರೀ ಸಾಮಾನ್ಯ	ನಿರಂಜನಾರಾಧ್ಯ	10.00
೪೫.	ಪ್ರಕೃತಿಯ ನಿಗೂಢಗಳು	ಸೂರ್ಯಕಾಂತ	18.00
೪೬.	ಜಮೀನ್ದಾರಿ ವ್ಯವಸ್ಥೆ ತೆಲುಗು ಸಾಹಿತ್ಯ	ಕುಂ. ವೀರಭದ್ರಪ್ಪ	2.00

ನಾಟೀ ತಳಿಗಳ ಆಯ್ಕೆ ಮತ್ತು ಬಳಕೆ

ಜೋಳದ ಬೀಜಗಳನ್ನು ಹಿಡಿಯುವ ರೀತಿ

ಜೋಳದ ತೆನೆಗಳನ್ನು ರಾಶಿ ಮಾಡಲು ತೆಗೆದ ತೆನೆಗಳಲ್ಲಿ ಯಾವ ತೆನೆಗಳ ಉಣಚಿಯು ಸಂಪೂರ್ಣವಾಗಿ ಬಿಳುಪಾಗಿರುತ್ತದೆಯೋ ಅಂಥ ತೆನೆಗಳು ರೋಗ ರುಜಿನಗಳಿಂದ ಮುಕ್ತವಾಗಿರುತ್ತವೆ. ಅಂಥ ತೆನೆಗಳಲ್ಲಿ ಸರಿಯಾಗಿ ಬಲಿತು ಮಾಗಿದ ತೆನೆಗಳನ್ನು ಸರಿಯಾಗಿ ಮೂರುಭಾಗ ಮಾಡಿ ನಡುವಿನಭಾಗವನ್ನು ಮಾತ್ರ ಬೀಜ ತೆಗೆಯಲು ಉಪಯೋಗಿಸಬೇಕು. ತೆನೆಯ ತುದಿಯ ಕಡೆಗಿದ್ದ ಭಾಗದಲ್ಲಿಯ ಬೀಜದ ಕಾಳುಗಳಲ್ಲಿ ಬಿಸಿಲಿನ ತಾಪದಿಂದ ಮೊಳಕೆಯೊಡೆಯುವ ಪ್ರಮಾಣವು ಕಡಿಮೆಯಾಗುವ ಸಂಭವವಿರುವುದರಿಂದ ಮತ್ತು ತೆನೆಯ ಹಿಂದಿನ ಭಾಗದಲ್ಲಿಯ ಬೀಜಗಳು ಸಂಪೂರ್ಣಬಲಿಯದಿರುವ ಸಂಭವವಿರುತ್ತದೆ.

ದ್ವಿದಳ ಧಾನ್ಯಗಳ ಬೀಜಗಳನ್ನು ಆರಿಸುವುದು

ದ್ವಿದಳಧಾನ್ಯಗಳ ಬೆಳೆಗಳಲ್ಲಿ ಕಾಳು ಕಟ್ಟಿದ ಎಲ್ಲ ಕಾಯಿಗಳು ಒಮ್ಮೆಲೇ ಬಲಿತು ಮಾಗುವುದಿಲ್ಲ. ಕಾರಣ ಇಂಥ ಬೆಳೆಗಳಲ್ಲಿ ಮೊದಲು ಬಲಿತು ಮಾಗಿದ ಕಾಯಿಗಳನ್ನು ಬೀಜಕ್ಕೆಂದು ಹಿಡಿದಿಟ್ಟು ಬಿತ್ತುವ ಪೂರ್ವದಲ್ಲಿ ಉತ್ತಮ ಬೀಜಗಳನ್ನು ಬೇರ್ಪಡಿಸಿ ಬಿತ್ತಲಿಕ್ಕೆ ಉಪಯೋಗಿಸಬೇಕು. ಹಿಂದಿನಿರದ ಬಲಿತು ಮಾಗಿದ ಕಾಯಿಗಳ ಬೀಜಗಳು ಅಷ್ಟೊಂದು ಸದೃಢವಾಗಿ ಬಲಿತು ಮಾಗುವ ಭರವಸೆ ಇರದ್ದರಿಂದ ಅವುಗಳ ಮೊಳಕೆಯೊಡೆಯುವ ಪ್ರಮಾಣವು ಕಡಿಮೆ ಇರುತ್ತದೆ.

ಹತ್ತಿಯ ತಳಿಯ ಬೀಜ ಶೇಖರಿಸುವುದು

ಹತ್ತಿಯ ಪೈರಿನಲ್ಲಿಯೂ ಎಲ್ಲ ಕಾಯಿಗಳು ಒಮ್ಮಲೇ ಬಲಿತು ಮಾಗಿ ಅರಳುವುದಿಲ್ಲ. ಕಾರಣ, ರೋಗ ಮತ್ತು ಹುಳದ ಬಾಧೆ ಇಲ್ಲದ ಉತ್ತಮವಾಗಿ ಮೊದಲು ಬಲಿತು ಅರಳಿದ ತೊಳೆಗಳನ್ನು ಬಿಡಿಸಿ ಶೇಖರಿಸಿಟ್ಟು ಬೀಜಗಳನ್ನು ಬೇರ್ಪಡಿಸಿ ಬಿತ್ತಲಿಕ್ಕೆ ಉಪಯೋಗಿಸಬೇಕು.

ನೆಲಗಡಲೆಯ ಬೀಜ ಹಿಡಿಯುವುದು

ನೆಲಗಡೆಲೆಯ ಪೈರಿನಲ್ಲಿ ಎಲ್ಲ ಕಾಯಿಗಳು ಒಮ್ಮಲೇ ಬಲಿಯದೆ ಭೂಮಿಯ ಒಳಗಡೆ ಬೆಳೆದು ಮಾಗುವುದರಿಂದ ನೆಲಗಡಲೆಯ ರಾಶಿ ಮಾಡಿದ ಮೇಲೆ ಸಂಪೂರ್ಣ ಬಲಿತು ಮಾಗಿದ ಕಾಯಿಗಳನ್ನು ಆರಿಸಿ ತೆಗೆದು ಬೀಜಕ್ಕೆಂದು ಒಳ್ಳೆ ಗಾಳಿಯಾಡುವ ಜಾಗದಲ್ಲಿ ಶೇಖರಿಸಿಟ್ಟು ಬಿತ್ತುವ ಪೂರ್ವದಲ್ಲಿ ಬೀಜಗಳನ್ನು ಬೇರ್ಪಡಿಸಿ ಬಿತ್ತಬೇಕು.

ಸೂರ್ಯಪಾನ ತಳಿಯ ಬೀಜ ಶೇಖರಿಸುವುದು

ಸೂರ್ಯಪಾನ (ಸೂರ್ಯಕಾಂತಿ) ತೆನೆಗಳಲ್ಲಿಯ ಕಾಳುಗಳು ತೆನೆಯ ಕಡೆದಂಡೆಯಿಂದ ಬಲಿತು ಮಾಗುತ್ತ ತೆನೆಯ ನಡುವಿನ ಬಿಂದುವಿನ ಕಡೆಗೆ ಕಾಳುಗಳು ಬಲಿಯುತ್ತ ಹೋಗುತ್ತವೆ. ಕಾರಣ ಸೂರ್ಯಪಾನದ ತೆನೆಯಲ್ಲಿಯ ಕಡೆದಂಡೆಯ ಎರಡು ಅಥವಾ ಮೂರು ಸಾಲುಗಳ ಕಾಳುಗಳನ್ನು ಬೇರ್ಪಡಿಸಿ ಅವುಗಳಲ್ಲಿ ಉತ್ತಮ ಬಲಿತ ಕಾಳುಗಳನ್ನು ಮಾತ್ರ ಬೀಜಕ್ಕೆಂದು ಉಪಯೋಗಿಸಬೇಕು.

ಚನ್ನಪ್ಪ ಗೌಡರ್ ಎ.ಎಸ್, ರಾಯಚೂರು

ಪ್ರಾಚೀನ ಭಾರತೀಯ ಬೀಜೋಪಚಾರ ಪದ್ಧತಿಗಳು

ಕೃಷಿಯು ಒಂದು ಕಲೆ ಮಾತ್ರವಲ್ಲ, ಅದರಲ್ಲಿ ವಿಜ್ಞಾನವೂ ಮಹತ್ತರ ಪಾತ್ರ ವಹಿಸುವುದೆಂಬ ಅರಿವು ನಮ್ಮ ಪೂರ್ವಜರಿಗೆ ಚೆನ್ನಾಗಿಯೇ ತಿಳಿದಿತ್ತು. ಇದಕ್ಕೆ ನಮ್ಮ ಪೌರಾಣಿಕ ಗ್ರಂಥಗಳಾದ ವೃಕ್ಷಾಯುರ್ವೇದ, ಉಪವನ ವಿನೋದ, ಕೃಷಿಪರಾಶರಾದಿ ಗ್ರಂಥಗಳೇ ಸಾಕ್ಷಿಯಾಗುತ್ತವೆ. ಬೇಸಾಯಕ್ಕೆ ಮೊದಲು ಬಿತ್ತನೆ ಬೀಜದ ಸಿದ್ಧತೆ, ಬೀಜವು ತ್ವರಿತವಾಗಿ ಮೊಳಕೆಯೊಡೆಯಲು ಮಾರ್ಗೋಪಾಯಗಳು, ಹಣ್ಣು ಅಥವಾ ಕಾಯಿಯ ಇಳುವರಿ ಗಾತ್ರವನ್ನು ಹೆಚ್ಚಿಸುವ ತಂತ್ರಗಳು ಇತ್ಯಾದಿಗಳ ಬಗ್ಗೆ ಈ ಗ್ರಂಥಗಳಲ್ಲಿ ಅಲ್ಲಲ್ಲಿ ಉಲ್ಲೇಖವಿದೆ. ಅವುಗಳಲ್ಲಿ ಪ್ರಸ್ತುತ ದೃಷ್ಟಿಯಲ್ಲಿ ಅಳವಡಿಸಿಕೊಳ್ಳಬಹುದಾದ ಕೆಲವು ಸುಲಭ ವಿಧಾನಗಳನ್ನು ಆಯ್ದು ಈ ಕೆಳಗೆ ಕೊಡಲಾಗಿದೆ.

ತ್ವರಿತವಾಗಿ ಮೊಳಕೆಯೊಡೆಯಲು ಬೀಜೋಪಚಾರ

(i) ಹುಣಸೆಯ ಬೀಜವನ್ನು ಅಕ್ಕಿ, ಉದ್ದು ಮತ್ತು ಸಾಸುವೆಯ ಹಿಟ್ಟು ಹಾಗೂ ಗೋಧಿಯ ತುಣುಕುಗಳೊಂದಿಗೆ ಚೆನ್ನಾಗಿ ಮಿಶ್ರಮಾಡಿ ಅವುಗಳೊಂದಿಗೆ ಕೊಳೆತ ಹಳೆಯ ಮಾಂಸವನ್ನು ಕಲಸಬೇಕು. ಈ ರೀತಿಯಾಗಿ ಸಿದ್ಧಪಡಿಸಿದ ಹುಣಸೆಯ ಬೀಜದ ಮೇಲೆ ಅರಿಸಿನದ (ಧೂಪ) ಹೊಗೆಯನ್ನು ಹಲವು ಬಾರಿ ಹಾಯಿಸಿದರೆ ಬೀಜವು ತ್ವರಿತಗತಿಯಲ್ಲಿ ಮೊಳಕೆಯೊಡೆಯುವುದು.

(ii) ಬಿತ್ತನೆಗೆ ಮೊದಲು ಯಾವುದೇ ಬೀಜಕ್ಕೆ ಅಂಕೋಲ ತೈಲವನ್ನು ಲೇಪಿಸಿದರೆ ಅದು ತ್ವರಿತವಾಗಿ ಮೊಳಕೆಯೊಡೆಯುವುದು.

(iii) ಯಾವದೇ ಬೀಜವನ್ನು ಎಮ್ಮೆಯ ಗಂಜಳ (ಮೂತ್ರ)ದಲ್ಲಿ ಒಂದು ವಾರದ ತನಕ ನೆನೆಯಿಸಿ ಬಿತ್ತಿದರೆ ಅದು ಶಕ್ತಿ ಭರಿತವಾಗಿ ಬೇಗನೆ ಮೊಳಕೆಯೊಡೆಯುವುದು.

(iv) ಬೀಜದ ಸುಪ್ತಾವಸ್ತೆಯನ್ನು ತೆಗೆಯಲು ಇನ್ನೊಂದು ವಿಧಾನವು ಈ ರೀತಿ ಇದೆ. ಇಲ್ಲಿ ಬೀಜವನ್ನು 10 ದಿನಗಳ ಕಾಲ ಹಾಲಿನಲ್ಲಿ ನೆನೆಸಿಡಬೇಕು. ದಿನವೂ ಆ ಬೀಜವನ್ನು ತುಪ್ಪಸವರಿದ ಕೈಗಳಿಂದ ಎತ್ತಿಟ್ಟು ಹಾಲನ್ನು ಬದಲಾಯಿಸಬೇಕು. ಇದಾದ ಮೇಲೆ ಅವುಗಳಿಗೆ ಸಗಣಿಯನ್ನು ಲೇಪಿಸಿ ಜಿಂಕೆ ಮತ್ತು ಗಂಡು ಹಂದಿಯ ಮಾಂಸದ ಧೂಪವನ್ನು ಹಾಕಬೇಕು. ಈ ರೀತಿಯಾಗಿ ಸಿದ್ಧಪಡಿಸಿದ ಬೀಜವನ್ನು ಸಾಸುವೆಯನ್ನು ಪ್ರಯೋಗಿಸಿದ ಮಣ್ಣಿನಲ್ಲಿ ಬಿತ್ತನೆ ಮಾಡಿ ಅದಕ್ಕೆ ನೀರು ಮತ್ತು ಹಾಲನ್ನು ಸಿಂಪಡಿಸಿದರೆ ಬೀಜವು ಬೇಗನೆ ಮೊಳಕೆ ಯೊಡೆಯುವುದು.

ಇಳುವರಿಯನ್ನು ಹೆಚ್ಚಿಸಲು

ಮರದಲ್ಲೇ ಒಣಗಿರತಕ್ಕಂತಹ ನುಗ್ಗೆ ಕಾಯಿಯ ಬೀಜವನ್ನು ಹಾಗಲಕಾಯಿಯ ಬೀಜದೊಂದಿಗೆ ಚೆನ್ನಾಗಿ ಮಿಶ್ರಮಾಡಿ ಅದನ್ನು ಸ್ವಲ್ಪ ದಿನಗಳ ತನಕ ಭದ್ರವಾಗಿ ಜೋಡಿಸಿಡಬೇಕು. ಈ ರೀತಿಯಾಗಿ ಶೇಖರಿಸಿದ ನುಗ್ಗೆ ಬೀಜವನ್ನು ಬಿತ್ತನೆ ಮಾಡಿದರೆ ಅದರಿಂದ ಹೆಚ್ಚಿನ ಇಳುವರಿ ಬರುವುದು.

ಹಣ್ಣು / ಕಾಯಿಯ ಗಾತ್ರವನ್ನು ಹೆಚ್ಚಿಸಲು ಒಂದು ಸರಳ ವಿಧಾನ

ಬದನೆಕಾಯಿಯ ಬೀಜಕ್ಕೆ ಜೇನು ಮತ್ತು ತುಪ್ಪವನ್ನು ಲೇಪಿಸಿ ತದನಂತರ ಅದಕ್ಕೆ ದಪ್ಪನೆಯ ಸಗಣಿಯಿಂದ ಹೊರಲೇಪನವನ್ನು ಮಾಡಬೇಕು. ಈ ತೆರನಾಗಿ ಉಪಚರಿಸಿದ ಬೀಜವನ್ನು ಬಿತ್ತಿದರೆ ಅದರಿಂದ ಕುಂಬಳಕಾಯಿಯ ಗಾತ್ರದ ಬದನೆಕಾಯಿಯನ್ನು ಪಡೆಯಬಹುದು.

ಸಂಗ್ರಹ : ಕೆ.ಉಮೇಶ
ಬೀಜಶಾಸ್ತ್ರ ಪಿ.ಹೆಚ್.ಡಿ. ವಿದ್ಯಾರ್ಥಿ,
ಕೃಷಿ ವಿ.ವಿ.ನಿಲಯ, ಬೆಂಗಳೂರು

ನೀವು ಕಾಗದ ಹಾಗೂ ಪರಿಸರದ ಬಗ್ಗೆ ಕಾಳಜಿ ಇರುವ ಗ್ರಾಹಕರಾಗಿದ್ದಲ್ಲಿ ಈಗಿನಿಂದಲೇ ಕಾಗದದ ಬಳಕೆಯನ್ನು ಮಿತಿಗೊಳಿಸಿ ಮತ್ತು ಪುನರುತ್ಪಾದನಾ (recycled) ಪ್ರಕ್ರಿಯೆಯಿಂದ ತಯಾರಿಸಿದ ಕಾಗದವನ್ನು ಬಳಸಿ - ಕಾಗದ ಕಟ್ಟೆ, ಬೆಂಗಳೂರು.

ವಿ.ಸೂ. : ಹಿತ್ತಲ ಗಿಡದ ಈ ಸಂಚಿಕೆಯನ್ನು ಕಬ್ಬಿನ ತ್ಯಾಜ್ಯ Bagasse, ಕಾಗದದಿಂದ ಮುದ್ರಿಸಲಾಗಿದೆ.

ದಿನ ನಿತ್ಯದ ಪಥ್ಯ

ದಿ: ಡಾ. ಎಮ್. ಗೋಪಾಲಕೃಷ್ಣ ರಾವ್

ರೋಗ ಪರಿಹಾರಕ್ಕಂತೂ ಪಥ್ಯವು ಅನಿವಾರ್ಯ. ಪಥ ಎಂದರೆ ದಾರಿ, ಪಥ್ಯವೆಂದರೆ ಆರೋಗ್ಯವಾದ ದಾರಿ. ಆರೋಗ್ಯವಂತರು ಕೂಡ ಪಾಲಿಸಬೇಕಾದ ಕೆಲ ಪಥ್ಯದ ನಿಯಮಗಳನ್ನು ಇಲ್ಲಿ ಕೊಡಲಾಗಿದೆ.

♦ ಸೂರ್ಯೋದಯಕ್ಕಿಂತ ಮೊದಲೇ ಏಳಿರಿ

ಸೂರ್ಯೋದಯಕ್ಕಿಂತ ಕನಿಷ್ಟ ಒಂದು ಗಂಟೆ ಮುಂಚೆ ಏಳುವ ಮಾತ್ರದಿಂದಲೇ ಎಷ್ಟೋ ಕಾಯಿಲೆಗಳು ಗುಣವಾಗುವವು. ಸೂರ್ಯೋದಯದ ಒಂದೆರಡು ಗಂಟೆ ಮುಂಚೆ ವಾತಾವರಣದಲ್ಲಿ, ಆಕಾಶದಲ್ಲಿ ಪಾಚಸಾತ್ಮಕವಾದ ಅಗ್ನಿಶಕ್ತಿಯೂ ವರ್ಧಮಾ ಸಾತ್ಮಕವಾದ ಸೋಮಶಕ್ತಿಯೂ (ಅಲೋಪಥಿಯಲ್ಲಿ ಇದನ್ನೇ ಓಝೋನ್ ಎನ್ನುತ್ತಾರೆ.) ಇರುವುದೆಂದು ಆಯುರ್ವೇದವು ಹೇಳುತ್ತದೆ. ಆದ್ದರಿಂದ ಆಗ ಕನಿಷ್ಠ 3-4 ಮೈಲು, ವೇಗದಿಂದ ತಿರುಗಾಡಿ ಬರುವ ವ್ಯಾಯಾಮ ಮಾಡಲೇಬೇಕು. ಎದ್ದು ಕನಿಷ್ಟ ಎರಡು ಗಂಟೆ ಯಾವ ಆಹಾರವನ್ನು ಸೇವಿಸದಿರುವುದು ಒಳಿತು. ನೀರನ್ನು ಬೇಕಾದರೆ ಕುಡಿಯಬಹುದು.

♦ ಎಷ್ಟು ಸಲ ತಿನ್ನಬಹುದು ?

ಯಾವುದೇ ಆಹಾರ ಪೇಯಗಳನ್ನು ಎಷ್ಟೇ ಅಲ್ಪ ಪ್ರಮಾಣದಲ್ಲಿ ಸೇವಿಸಿದರೂ ಮುಂದೆ ಕನಿಷ್ಟ 4-5 ಗಂಟೆಗಳವರೆಗೆ ಬೇರೆ ಏನನ್ನು ಸೇವಿಸಬಾರದು. ಒಂದು ಸಲ ತಿಂಡಿ ಎರಡು ಸಲ ಊಟ ಇವುಗಳ ಹೊರತಾಗಿ ನಡುವೆ ಏನನ್ನು ಸೇವಿಸಬಾರದು. ಹಸಿವು ತಡೆಯಲಾಗದಿದ್ದರೆ ಸಂಜೆ ಒಂದು ಸಲ ಹಾಲು, ಮಜ್ಜಿಗೆ ಅಥವಾ ಹಣ್ಣು ಹಂಪಲುಗಳನ್ನು ಸೇವಿಸಬಹುದು. ನೀರನ್ನು ಧಾರಾಳವಾಗಿ ಕುಡಿಯಬೇಕು.

♦ ರಾತ್ರಿ ಮಲಗುವುದು

ರಾತ್ರಿ ಊಟವಾಗಿ ಕನಿಷ್ಠ 2-3 ಗಂಟೆಗಳಾದರೂ ಎಚ್ಚರವಾಗಿ ಇರಬೇಕಲ್ಲದೆ, ಸ್ವಲ್ಪ ಓಡಾಡಿಕೊಂಡು ಬರುವುದು ಕೂಡ ಹಿತಕರವಾಗಿದೆ.

ಗೊತ್ತು ಪಡಿಸಿದ ಸಮಯಕ್ಕೆ ಆಹಾರ ಪಾನೀಯಗಳು ಸಿಗದಿದ್ದಾಗ ಇಲ್ಲವೆ ಬಿಡುವಿಲ್ಲದಾಗ ಉಪವಾಸ ಇದ್ದು ಮುಂದಿನ ಆಹಾರ ಕಾಲದವರೆಗೆ ಬರಿಯ ನೀರನ್ನು ಕುಡಿದಿರುವುದು ಒಳ್ಳೆಯ ಆರೋಗ್ಯ ಸಾಧಕ ಕ್ರಮವಾಗಿದೆ.

ಹೊಟ್ಟೆಯನ್ನು ಬಹಳವಾಗಿ ತುಂಬಿಸಬಾರದು. ಅರ್ಧ ಹೊಟ್ಟೆ ಘನಾಹಾರ, ಕಾಲುಭಾಗ ದ್ರವಾಹಾರ, ಮಿಕ್ಕ ಕಾಲು ಹೊಟ್ಟೆ ಹಾಗೆಯೇ ತೆರವಾಗಿಟ್ಟುಕೊಳ್ಳುವುದು ಎಲ್ಲರಿಗೂ ಹಿತಕಾರಿ.

♦ ಊಟ ಮಾಡುವಾಗ ನೀರು ಕುಡಿಯಕೂಡದು

ಉಣಸು ತಿನಿಸುಗಳ ಕಾಲದಲ್ಲಿ ಹೆಚ್ಚು ನೀರನ್ನು ಕುಡಿಯಬಾರದು. 2-3 ಗಂಟೆಗಳ ಬಳಿಕ ಮೂರು ಗಂಟೆಗೊಮ್ಮೆ ಬೇಕಾದಷ್ಟು ನೀರನ್ನು ಕುಡಿಯಲೇಬೇಕು. ನೀರನ್ನಷ್ಟೇ ಅಲ್ಲ, ಊಟ ಮಾಡುವ ಕಾಲದಲ್ಲಿ ಹಾಲು, ಸಾರು, ಮಜ್ಜಿಗೆ, ಪಾಯಸದಂತಹ ದ್ರವಾಹಾರಗಳನ್ನು ಕೂಡ ಹೆಚ್ಚಾಗಿ ಸೇವಿಸಬಾರದು. ಅಂತಹ ಅಭ್ಯಾಸದಿಂದ ಪಾಚಕ ರಸಗಳು ದುರ್ಬಲವಾಗುವವು.

♦ ಚೆನ್ನಾಗಿ ಅಗಿಯಿರಿ

ಆಹಾರವು ಎಷ್ಟೇ ಪೌಷ್ಟಿಕವಾಗಿರಲಿ ಅದರೊಳಗೆ ಪೋಷಕಾಂಶಗಳು ಶರೀರದಿಂದ ಹೀರಲ್ಪಡಬೇಕಾದರೆ ಅದಕ್ಕೆ ಪಾಚಕ ರಸಗಳ ಸಂಸ್ಕಾರವಾಗಲೇಬೇಕು. ಅದಕ್ಕಾಗಿ ಆಹಾರ ವಸ್ತುವು ಬಿರುಸಾಗಿರಲಿ, ಮಿದುವಾಗಿರಲಿ, ಪ್ರತಿಯೊಂದು ತುತ್ತನ್ನು 30-40 ಸಲ ನುರಿಸಬೇಕು.

♦ ಕಾಯಿ ಪಲ್ಲೆಗಳು

ಕಾಯಿಪಲ್ಲೆಗಳನ್ನು ಸಾಧ್ಯವಾದಷ್ಟು ನಿಜ ಸ್ವರೂಪದಲ್ಲಿ, ಇಲ್ಲವೆ ಅತ್ಯಲ್ಪ ಮಸಾಲೆಯೊಡನೆ ಉಪಯೋಗಿಸಬೇಕಲ್ಲದೆ, ಪಲ್ಲೆಗಳನ್ನು ಹೆಚ್ಚು ಪ್ರಮಾಣದಲ್ಲಿ ನಿತ್ಯದ ಊಟದಲ್ಲಿ ಬಳಸಬೇಕು. ಅದರಿಂದ ಮಲಮೂತ್ರಾದಿ ವಿಸರ್ಜನೆಗಳಿಗೆ ಅನುಕೂಲವಾಗುವುದಲ್ಲದೆ ರೋಗ ನಿರೋಧಕ ಶಕ್ತಿಯು ಬಲಗೊಳ್ಳುವುದು.

♦ ಮಜ್ಜಿಗೆ ಮರೆಯಬೇಡಿರಿ

ಆಹಾರ ಜೀರ್ಣಕ್ರಿಯೆಯಲ್ಲಿ ತುಂಬ ಸಹಾಯಕವಾಗಿ ಕೆಲವು ಪೋಷಕ ತತ್ವಗಳನ್ನು ಹೊಂದಿರುವ ಇನ್ನೊಂದು ವಸ್ತುವೆಂದರೆ ಮಜ್ಜಿಗೆಯಾಗಿದೆ. ನಿತ್ಯದ ಊಟದಲ್ಲಿ ಮಜ್ಜಿಗೆಯಿರಬೇಕು.

ಹೆಚ್ಚಿನ ವಿವರಗಳಿಗೆ :
ಆಯುರ್ವೇದ ಪ್ರತಿಷ್ಠಾನ ಆಸ್ಪತ್ರೆ
ಜಯನಗರ, ಬೆಂಗಳೂರು

ಸಂಗ್ರಹ : ಪ್ರೊ.ಎಂ.ಜಿ. ಚಂದ್ರಕಾಂತ್,
ಕೃಷಿ ಅರ್ಥಶಾಸ್ತ್ರ ವಿಭಾಗ, ಕೃ.ವಿ.ವಿ. ನಿಲಯ
ಬೆಂಗಳೂರು

ಸ್ತ್ರೀಯರಲ್ಲಿ ಬಿಳಿಸೆರಗು ಮತ್ತು ಉರಿಮೂತ್ರ ನಿಲ್ಲಿಸಲು

ಒಣಗಿದ ಹೊಂಗೆ *(Pongamia glabra)* ಬೀಜಗಳನ್ನು ಹೋಳುಮಾಡಿ ಕಡಲೆ ಬೀಜ ಹುರಿಯುವಂತೆ ಮರಳಿನಲ್ಲಿ ಹುರಿಯಬೇಕು. ನಂತರ ಪುಡಿಮಾಡಿ ಒಂದು ಮಾತ್ರೆಯಷ್ಟು ದಿನಕ್ಕೆ ಎರಡು ಬಾರಿ ಹೊಟ್ಟೆಗೆ ತೆಗೆದುಕೊಳ್ಳಬೇಕು. ನಂತರ ನೀರು ಕುಡಿಯಬೇಕು. ತಿಂದಾಗ ಅಡಿಕೆ ಅಗಿದಾಗ ಬರುವ ಒಗರು ರುಚಿ ಬರುತ್ತದೆ. ಇದರಿಂದ ಸ್ತ್ರೀಯರಲ್ಲಿ ಬಿಳಿಸೆರಗು ಮತ್ತು ಗಂಡಸರಲ್ಲಿ ಉರಿಮೂತ್ರ ಕಾಯಿಲೆಗಳು ಕಡಿಮೆಯಾಗುವುದು. ಇದರಿಂದ ಇಬ್ಬರಿಗೆ ಈಗಾಗಲೇ ಅನುಕೂಲವಾಗಿರುವುದಾಗಿ ಶ್ರೀ ಕೃಷ್ಣಪ್ಪ ತಿಳಿಸಿರುತ್ತಾರೆ.

ಎಮ್. ಕೃಷ್ಣಪ್ಪ, ವಾಹನ ಚಾಲಕ,
ಕೃಷಿ ವಿ.ವಿ. ನಿಲಯ, ಬೆಂಗಳೂರು

ಫಿಟ್ಸ್ ಅಥವಾ ಅಪಸ್ಮಾರಕ್ಕೆ

ಫಿಟ್ಸ್ ಬಂದು ಒದ್ದಾಡುತ್ತಿರುವ ವ್ಯಕ್ತಿಗೆ ತಕ್ಷಣ ಕಬ್ಬಿಣ ತಾಗಿಸುವುದು ಸಾಮಾನ್ಯ ತಾನೆ. ಇದೇ ರೀತಿ ಆಡುಮುಟ್ಟದ ಸೊಪ್ಪಿನ *(Tylophora asthmatica)* ರಸವನ್ನು ಬಳಸಿದರೆ ಪೂರ್ತಿಗುಣವಾಗುವುದಾಗಿ ಕೃಷಿ ವಿಶ್ವ ವಿದ್ಯಾನಿಲಯದ, ಕೃಷಿ ಅರ್ಥ ಶಾಸ್ತ್ರ ವಿಭಾಗದಲ್ಲಿ ರಾಮಯ್ಯ ಹೇಳುತ್ತಾನೆ. ಫಿಟ್ಸ್ ಬಂದ ತಕ್ಷಣ ಈ ಸೊಪ್ಪನ್ನು ಹೋಗಿ ಕಿತ್ತು ತಂದು ಅದನ್ನು ಉಜ್ಜಿ ರಸವನ್ನು ಮುಖ, ಕೈ, ಕಾಲುಗಳಿಗೆ ಹಚ್ಚಿ, ಮೂಗಿಗೂ ಒಂದು ಹನಿ ರಸ ಬಿಡಬೇಕಂತೆ. ಈ ಕ್ರಮದಿಂದ ತನ್ನ ದೊಡ್ಡಮ್ಮ ಮತ್ತು ದೊಡ್ಡಪ್ಪನ ಮಕ್ಕಳಿಬ್ಬರಿಗೂ ಗುಣವಾಗಿರುವುದಾಗಿ ಆತ ಜ್ಞಾಪಿಸುತ್ತಾನೆ.

ಮಕ್ಕಿ ದೊಡ್ಡಮ್ಮನ ಔಷಧಿಗಳು

ಚೀಮುಳ್ಳು ಅಥವಾ ಕೆಂಜಿರಿ ಸೊಪ್ಪು, ಒಂದು ಎತ್ತರದ ಮುಳ್ಳಿನ ಗಿಡ. ಇದು ಸಕಲೇಶಪುರ, ಕೊಡಗು ಮಲೆನಾಡಿನ ಇತರೆಡೆ ಗದ್ದೆ ದರಿಗಳಲ್ಲಿ ಸಾಮಾನ್ಯವಾಗಿ ಕಾಣಸಿಗುತ್ತದೆ.

ಇದರ ಚಿಗುರು ಕುಡಿ ತಂದು ಚೆನ್ನಾಗಿ ಅರೆದು ಅದನ್ನು ಕೊಬ್ಬರಿ ಎಣ್ಣೆಯಲ್ಲಿ ಪರಿಮಳ ಬರುವವರೆಗೆ ಕಾಯಿಸಬೇಕು. ನಂತರ ಕೆಳಗಿಳಿಸಿ ಸ್ವಲ್ಪ ಜೀರಿಗೆ ಪುಡಿ ಮತ್ತು ಅರಿಶಿನ ಸೇರಿಸಬೇಕು. ಆರಿದ ಎಣ್ಣೆಯನ್ನು ಸುಟ್ಟ ಗಾಯಕ್ಕೆ ಆಗಾಗ ಸವರುತ್ತಾ ಬಂದರೆ ಸುಟ್ಟ ಗಾಯ ಕಲೆ ಕೂಡ ಉಳಿಯದಂತೆ ಗುಣವಾಗುವುದು.

ಯಶೋಧ ಎಂ.ಎಸ್.
ಯಲಹಂಕ ಉಪನಗರ, ಬೆಂಗಳೂರು.

ಕುದುರೇಮುಖ ಗಣಿಗಾರಿಕೆ ಮತ್ತು ನೆಲ್ಲಿಬೀಡು ಸಮಸ್ಯೆ

ಇರಾನ್ ಸರ್ಕಾರದ ಆರ್ಥಿಕ ನೆರವಿನಿಂದ 1976 ರಲ್ಲಿ ತಲೆ ಎತ್ತಿರುವ ಕುದುರೇಮುಖ ಗಣಿಗಾರಿಕೆ ಕಂಪೆನಿ, ವರ್ಷಕ್ಕೆ 75 ಲಕ್ಷ ಟನ್ ಕಬ್ಬಿಣದ ಅದಿರನ್ನು ಅಗೆದು ತೆಗೆದು ಆ ದೇಶಕ್ಕೆ ರಫ್ತುಮಾಡು ಯೋಜನೆ ಹೊಂದಿತ್ತು. ಪಶ್ಚಿಮ ಘಟ್ಟದ ತವರೂರಾದ ಕಳಸ ಪಟ್ಟಣದ ಸಮೀಪದಲ್ಲಿ ಸುಮಾರು 2648 ಹೆಕ್ಟೇರ್ ಪ್ರದೇಶದಲ್ಲಿ ಗಣಿಗಾರಿಕೆಯನ್ನು ಪ್ರಾರಂಭಿಸಿದಾಗ ಮಲೆನಾಡಿನ ಪ್ರಾಂತ್ಯದ ಜನರು ಅಭಿವೃದ್ಧಿ, ಉದ್ಯೋಗದ ಅದ್ಭುತ ಕನಸುಕಂಡಿದ್ದರು ಮತ್ತು ನಿತ್ಯಹರಿದ್ವರ್ಣ ಕಾಡುಗಳ ಉದರದಲ್ಲೇ ಈ ತೆರೆದ ಗಣಿಗಾರಿಕೆಯನ್ನು ತುಟಿ ಪಿಟಿಕ್ ಎನ್ನದೆ ಒಪ್ಪಿಕೊಂಡಿದ್ದರು ಕೂಡ. "ಅಗೆದ ಅದಿರನ್ನು ಮಂಗಳೂರಿನ ವರೆಗೆ ಸುಮಾರು 110 ಕಿ.ಮಿ.ವರೆಗೆ ಕೊಳವೆ ಮೂಲಕ ನೀರಿನಲ್ಲಿ ಹಾಯಿಸುವುದಂತೆ, ಅಲ್ಲಿಂದ ಉಂಡೆಕಟ್ಟಿ ಇರಾನ್‌ಗೆ ರಫ್ತು ಮಾಡುವುದಂತೆ" ಹೀಗೆ ಈ ಯೋಜನೆ ಬಗ್ಗೆ ಕತೆ ಅಂದು ಚಿಕ್ಕಮಗಳೂರಿನಾದ್ಯಂತ ಹಬ್ಬಿತ್ತು. ಆದರೆ ಈ 30 ವರ್ಷಗಳ ಇತಿಹಾಸದಲ್ಲಿ ಭೂತಾಯಿ ಗರ್ಭವನ್ನು ಅಗೆದು, ಕೊಳ್ಳೆಹೊಡೆದು ಸಾಧಿಸಿರುವುದಾದರೂ ಏನೆಂಬುದು ಆ ಪ್ರದೇಶದ ಜನರಿಗೆ ಇನ್ನು ಅರ್ಥವಾಗದಂತಾಗಿದೆ. 1992-93 ರವರೆಗೆ ಕಂಪನಿ ನಷ್ಟದಲ್ಲೇ ಮುಂದುವರಿಕೆ, ಒಟ್ಟಾರೆ 2400 ಜನರಿಗೆ ಉದ್ಯೋಗ ದೊರೆತರೆ, ಅದರಲ್ಲಿ 616 ಬಿಳಿಕಾಲರ್ ಉದ್ಯೋಗ, ಅದೂ ಬೆಂಗಳೂರಿನಲ್ಲಿ. ಈಗೇನೋ ಲಾಭ ಶುರುವಾಗಿದೆಯಂತೆ. ಆದರೆ ಉತ್ಪಾದಿಸಿದ ಒಟ್ಟು ಅದಿರಿನ ವ್ಯಾಪಾರದಲ್ಲಿ 4/5 ರಷ್ಟು ಪಾಲು ಕಂಪೆನಿಯ ನೌಕರರು, ವಸತಿ, ವಾಹನ, ಇತ್ಯಾದಿ ನಿರ್ವಹಣೆಗೆ ಪಾಲು. ಇಷ್ಟಾದರೂ 3000 ಕೋಟಿಗೂ ಅಧಿಕ ಹಣ ಸ್ಥಿರಾಸ್ತಿ, ಯಂತ್ರೋಪಕರಣಗಳ ಮೇಲೆ ಇನ್ನೂ ಬಿದ್ದಿದೆಯಂತೆ. ಜೊತೆಗೆ ಇದು ಪರಿಸರದ ಮೇಲೆ ಮಾಡುತ್ತಿರುವ ಆಕ್ರಮಣಗಳು ನಿಧಾನವಾಗಿ ಬೆಳಕಿಗೆ ಬಂದು, ಸದಾ ನಿದ್ರೆಯಲ್ಲಿರುವ, ಶಾಂತಪ್ರಿಯ ಮಲೆನಾಡಿನ ಜನತೆಯನ್ನು ಬಡಿದೇಳುವಂತೆ ಮಾಡಿರುತ್ತದೆ. 30 ವರ್ಷದ ಇದರ ಕರಾರು ಈಗಾಗಲೆ ಮುಗಿಯುತ್ತಿದ್ದು, ಕಂಪನಿ ತನ್ನ ಗಣಿಗಾರಿಕೆ ಚಟುವಟಿಕೆ ವಿಸ್ತರಣಕ್ಕೆ ಈಗ ಪ್ರಯತ್ನಿಸುತ್ತಿದೆ, ಈ ಕಾರ್ಯ ಇಡೀ ಪಶ್ಚಿಮ ಘಟ್ಟದ ಅತ್ಯಂತ ನಾಜೂಕಿನ ಕ್ಷೇತ್ರ, ಹಲವು ಜೀವನದಿಗಳ ಉಗಮಸ್ಥಾನವಾದ ನೆಲ್ಲಿಬೀಡಿನಂತಹಾ ಪ್ರದೇಶಕ್ಕೂ ವಿಸ್ತರಿಸಿರುವಂತಾಗಿದ್ದು ಸ್ಥಳೀಯ ರೈತರನ್ನು ಕೆರಳಿಸಿರುವಂತೆ ಮಾಡಿದೆ. ಪ್ರೊ.ಎ.ಡಿ.ನಂಜುಂಡ ಸ್ವಾಮಿಯವರ ನೇತೃತ್ವದ ಕರ್ನಾಟಕ ರಾಜ್ಯ ರೈತ ಸಂಘದ ಪ್ರವೇಶದಿಂದ ಈ ಹೋರಾಟಕ್ಕೆ ಮತ್ತಷ್ಟು ಶಕ್ತಿ ಬರುವಂತಾಗಿದೆ. ಈ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುವ *"ನೆಲ್ಲಿ ಬೀಡು ಸಂರಕ್ಷಣಾ ಸಮಿತಿ"*ಯ ಅಭಿಪ್ರಾಯ ಈ ರೀತಿ ಇದೆ.

'ಗಂಗಾಮೂಲ' ಪಶ್ಚಿಮ ಘಟ್ಟದ ಹೃದಯ ಭಾಗದಲ್ಲಿದ್ದು ಮೂರು ಪ್ರಮುಖ ನದಿಗಳಾದ ತುಂಗೆ, ಭದ್ರ, ನೇತ್ರಾವತಿಗೆ ಜನ್ಮ ನೀಡಿದೆ. ಇಂತಹ ದಟ್ಟ ಕಾಡಿನ ಪ್ರದೇಶದಲ್ಲಿ ಕುದುರೆಮುಖದಂತಹ ತೆರೆದು ಗಣಿಗಾರಿಕೆ ನಡೆಸುವುದು "ಚಿನ್ನದ ಮೊಟ್ಟೆಯ ಆಸೆಯಿಂದ ಕೋಳಿಯನ್ನೇ ಕೊಂದಂತೆ." ಗಣಿಕಾರಿಕೆಯಿಂದಾಗಿ ಭದ್ರಾ ನದಿ ಕುಲುಷಿತಗೊಂಡಿದ್ದು ಅವನತಿಯತ್ತ ಸಾಗುತ್ತಿದೆ. ನದಿ ಇಕ್ಕೆಲಗಳಲ್ಲಿ ರೈತರ ಗದ್ದೆ ತೋಟಗಳು, ಹೂಳು ತುಂಬಿ ಬಂಜರಾಗಿದೆ. ಅದಿರು ಅಗೆಯುವಲ್ಲಿ ಬಳಸುವ ವಿಷಯುಕ್ತ ಸ್ಫೋಟಕಗಳಿಂದ ನದಿಯ ಪರಿಶುದ್ಧ ನೀರು ವಿಷಮಯವಾಗಿದ್ದು ಸುತ್ತಲಿನ ಜೀವರಾಶಿಗೆ ಧಕ್ಕೆಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಮಳೆಯ ಪ್ರಮಾಣದಲ್ಲಿ ತೀವ್ರ ಏರಿಳಿತ ಕಂಡಿದೆ. ಮಳೆಯ ವಿಧಾನ ಏರುಪೇರಾಗಿದ್ದು ಕೃಷಿಕರ ಬದುಕೇ ಅಪಾಯದಲ್ಲಿದೆ. ಅಂತರ ಜಲಮಟ್ಟ ಕುಸಿದಿದ್ದು ನದಿಗೆ ನೀರು ಪೂರೈಸುವ ಹಳ್ಳಗಳು ಸೊರಗಿದ್ದು ಬತ್ತುವ ಅಪಾಯದಲ್ಲಿವೆ. ಗಣಿಕಾರಿಕೆಯ ಅತಿಯಾದ ಹೂಳಿನಿಂದಾಗಿ ಭದ್ರಾ ಅಣೆಕಟ್ಟೆಯೇ ನಿರುಪಯೋಗಿಯಾಗುತ್ತಿದೆ. ಕುದರೇಮುಖ ರಾಷ್ಟ್ರೀಯ ಉದ್ಯಾನವನದ ಮೂಲ ಉದ್ದೇಶಕ್ಕೆ ಧಕ್ಕೆಯೊದಗಿದೆ. ವೈವಿಧ್ಯಮಯ ಸಸ್ಯ ಸಂಕುಲವೇ ಅಪಾಯದಲ್ಲಿದೆ.

ಇದೀಗ ಗಾಯದ ಮೇಲೆ ಬರೆ ಎಳೆದಂತೆ ಕುದುರೆಮುಖ ಯೋಜನೆಯ ವಿಸ್ತರಣಾ ಅಂಗವಾಗಿ ನೆಲ್ಲಿಬೀಡು ಯೋಜನೆ ಹಲವು ಹತ್ತು ಸಮಸ್ಯೆಗಳಿಗೆ ಕಾರಣವಾಗಿದೆ. ಭದ್ರೆಯ ಜೊತೆಗೆ ಸೋಮಾವತಿ, ಹಾಗೂ ನೇತ್ರಾವತಿ ನದಿಗಳ ಅವನತಿಗೆ ಕಾರಣವಾಗುತ್ತಿದೆ. ಕುದುರೇಮುಖ ರಾಷ್ಟ್ರೀಯ ಉದ್ಯಾನವನಕ್ಕೆ ಸೇರಿರುವ ನೆಲ್ಲಿ ಬೀಡು ಪ್ರದೇಶ ಇನ್ನು ಮುಂದೆ ರಕ್ಷಿತ ಪ್ರಾಣಿಗಳ ಪಾಲಿಗೆ ಭಯಾರಣ್ಯವಾಗಿ ಮಾರ್ಪಾಡಾಗಲಿದೆ. ಕುದುರೇಮುಖ ಯೋಜನೆಯ ಸಂದರ್ಭದಲ್ಲಿ ನೆಲ್ಲಿಬೀಡಿಗೆ ಪುನರ್ ವಸತಿಗೊಂಡವರು ಇದೀಗ ಪುನಃ ಒಕ್ಕಲೇಳುವ ಸ್ಥಿತಿ ನಿರ್ಮಾಣವಾಗಿದೆ. ಸಮೀಕ್ಷಾ ಗಣಿಗಾರಿಕೆ ಯೊಂದರಿಂದಲೇ ಗದ್ದೆ ತೋಟಗಳಲ್ಲಿ ಹೂಳು ತುಂಬಲಾರಂಭಿಸಿವೆ. ಕುಡಿಯುವ ನೀರು ಕಲುಷಿತಗೊಂಡಿದ್ದೆ, ಜೊತೆಗೆ ಕೆರೆ, ಬಾವಿಗಳು ಬತ್ತುತ್ತಿದೆ. ದನಕರುಗಳು ಕಣ್ಮರೆಯಾಗುತ್ತಿವೆ. ನೆಲ್ಲಿಬೀಡಿನ ಸುತ್ತಮುತ್ತಲಿನವರ "ಬದುಕು ಬಾಣಲೆಯಿಂದ ಬೆಂಕಿಗೆ" ಎನ್ನುವಂತಾಗಿದೆ.

ರಾಜ್ಯ ರೈತಸಂಘ ಇದನ್ನು ಹೋರಾಟ ವಿಚಾರವಾಗಿ ಎತ್ತಿಕೊಂಡು, ಈಗಾಗಲೇ 1995ರಲ್ಲಿ 2000ಜನ ರೈತರನ್ನು, ಅದೂ, ಭದ್ರಾ ತುಂಗ ನದಿಗಳು ದಕ್ಷಿಣದಲ್ಲಿ ಹರಿಯುವ ಆಂಧ್ರ, ಕರ್ನಾಟಕದಾದ್ಯಂತ ಒಟ್ಟು ಸೇರಿಸಿ ಒಂದು ಸಭೆ ನಡೆಸಿರುತ್ತದೆ. ಜೊತೆಗೆ ನೆಲ್ಲಿಬೀಡು ಸಂರಕ್ಷಣಾ ಸಮಿತಿ "ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆಯಂತಹ ಅರಣ್ಯೇತರ ಚಟುವಟಿಕೆ ನಡೆಸಬಾರದೆಂಬ" ಕಾನೂನನ್ನು ಎತ್ತಿ ಹಿಡಿದು ಹೋರಾಟ ನಡೆಸಲೂ ಯೋಚಿಸುತ್ತಿದೆ. ಆ ನೆಲ್ಲೀಬೀಡು ಪ್ರದೇಶ "ಸಂಸೆ" ಎಂಬ ಪಂಚಾಯ್ತಿ ವ್ಯಾಪ್ತಿಗೆ ಬರುತ್ತಿದ್ದು ಆ ಪಂಚಾಯ್ತಿ ಈ ರೀತಿ ಗಣಿಗಾರಿಕೆಯನ್ನು ನಡೆಸಲು ಬಿಡಬಾರದೆಂಬ ನಿರ್ಣಯವನ್ನು ಫೆ.28,97 ರಲ್ಲಿ ಈಗಾಗಲೇ ಕೈಗೊಂಡಿರುತ್ತದೆ. ಇತ್ತೀಚೆಗೆ ಲೋಕಸಭೆಯಲ್ಲೂ, ಇದಕ್ಕೆ ಪೂರಕವಾಗಿ, ಒಂದು ಗ್ರಾಮದ ವ್ಯಾಪ್ತಿಗೆ ಬರುವ ಯಾವುದೇ ಸಂಪನ್ಮೂಲಗಳನ್ನು ಹೊರಗಿನವರು ಬಳಸುವಾಗ, ಆ ಪಂಚಾಯ್ತಿಯ ಅನುಮತಿ ಅಗತ್ಯವೆಂಬ ನಿರ್ಣಯಕ್ಕೆ ಬಂದಿರುವುದಾಗಿ ತಿಳಿದು ಬಂದಿರುತ್ತದೆ. ಮಿಗಿಲಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಮತ್ತು ಮಂಗಳೂರು ವಿಶ್ವವಿದ್ಯಾನಿಲಯದ ವಿಜ್ಞಾನಿಗಳೂ, ವಿದ್ಯಾರ್ಥಿಗಳೂ ಈ ಪ್ರದೇಶಕ್ಕೆ ಈಗಾಗಲೇ ಭೇಟಿ ನೀಡಿ, ಮಾಹಿತಿ ಸಂಗ್ರಹಣೆ, ಅಧ್ಯಯನ, ಪರಿಸರ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಂಡಿರುವರು. ಹೀಗೆ, ರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿಯ ಆಸೆ, ಗುರಿಗಳಿಂದ ಸ್ಥಳೀಯ ಮಟ್ಟದಲ್ಲಿ ಸಮಸ್ಯೆಗೆ, ಆತಂಕಕ್ಕೆ ಕಾರಣವಾಗುತ್ತಿರುವ ಕುದುರೆ ಮುಖ ಗಣಿಗಾರಿಕೆಯಂತಹ ಯೋಜನೆಗಳಿಗೆ ಸಾಂಘಿಕ ಹೋರಾಟ, ಕಾನೂನಿನ ನೆರವು ಮತ್ತು ಅಧ್ಯಯನ ಸಂಶೋಧನಗಳಿಂದ ಪರಿಹಾರ ದೊರೆಯುವಂತಾಗಲಿ ಎಂದು ಹಿತ್ತಲ ಗಿಡ ಹಾರೈಸುತ್ತಿದೆ.

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ.

ಹಿತ್ತಲ ಗಿಡದ ಹಿಂದಿನ ಸಂಚಿಕೆಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಆಸಕ್ತರು ಬಿಡಿ ಪ್ರತಿಗೆ ರೂ. 25/-, ಎಲ್ಲಾ ಪ್ರತಿಗಳಿಗೆ ರೂ. 100/- ರಂತೆ ಹಣ ಪಾವತಿ ಮಾಡಿ ಪಡೆಯಬಹುದು.ಅಂಚೆ ವೆಚ್ಚ ಪ್ರತ್ಯೇಕ.

ಪ್ರತಿಕ್ರಿಯೆ

I read your informations on premature fruit dropping in coconut (Translated by Dr.Umesh in Honey Bee *Vol.8 No.1 Jan-March 1997)* from *Hittalagida*). My interest is to know exactly which part do you suggest as 20-25 kg. shoots of *Cycas circinalis* (Munduga) to increae the yield of coconut. By the word "shoots" do you mean the green crown of leaves on the short stem of Cycas? Please clarify this for me so that I can try your method for my coconut plants.

Yash Dave, *University Colony, Vallabha Vidyanagar,* ಗುಜರಾತ್

(ಶ್ರೀದತ್ತ ಮತ್ತು ಅನಿಲ್ ಕೌಶಿಕ್, ಶಿವಮೊಗ್ಗ ದಯಮಾಡಿ ಉತ್ತರಿಸಿರಿ. ಸಂಪಾದಕ.)

ನಾನು ಒಬ್ಬ ತೆಂಗು ಬೆಳೆಗಾರನಾಗಿದ್ದೇನೆ. ನಾನು ಹಾಗೆ ಪ್ರಗತಿಪರ ಬೆಳೆಗಾರನೂ ಹೌದು. ನಾನು ನನ್ನ ತೋಟದಲ್ಲಿ ಉಳುಮೆ ಮಾಡುವುದಿಲ್ಲ. ಶೂನ್ಯ ವ್ಯವಸಾಯ ಪದ್ಧತಿ ನನಗೆ ಏನೂ ತೊಂದರೆ ಆಗಿಲ್ಲ. ಇಳುವರಿಗೆ ಏನೂ ತೊಂದರೆ ಇಲ್ಲ. ಸಾವಯವ ವ್ಯವಸಾಯ ಪದ್ಧತಿಯನ್ನು ಅನುಸರಿಸುತ್ತೇನೆ. ಈ ಪದ್ಧತಿಯನ್ನು ಮುಂದುವರಿಸುವುದೇ ನನ್ನ ಆಸೆ. ಇದನ್ನು ಹೀಗೆ ಮುಂದುವರಿಸಲು ನಿಮ್ಮ ಸಲಹೆ ಏನು? ಮುಂದೆ ನಾನು ಏನೇನು ಕೊಡಬೇಕು? ತೋಟಪಲ್ಲಿ ಹಸಿರು ಎಲೆ ಗೊಬ್ಬರದ ಗಿಡಗಳನ್ನು ಹಾಗೆ ಹುಲ್ಲನ್ನು ಬೆಳೆಸಬಹುದೇ? ಈ ಸಂಬಂಧ ತಾವು ಉತ್ತರ ಸಲಹೆಗಳನ್ನು ಕೊಡಬೇಕೆಂದು ಕೋರುತ್ತೇನೆ.

ಎ.ಎಸ್. ಗುರುಸ್ವಾಮಿ, ಮೈಸೂರು

(ಮೈಸೂರಿನ ಸಮೀಪ ತಮ್ಮ ಜಿಲ್ಲೆಯಲ್ಲೇ ಕಳಲವಾಡಿಯಲ್ಲಿ ಇರುವ ಶ್ರೀ ಎ.ಪಿ. ಚಂದ್ರಶೇಖರ್ ರವರ ಇಂದ್ರಪ್ರಸ್ಥಕ್ಕೆ ಒಮ್ಮೆ ಭೇಟಿ ನೀಡಿ ಅವರನ್ನು ಸಂಪರ್ಕಿಸಿರಿ. ಸಂಪಾದಕ.)

1997ರ ಅಹ್ಮದಾಬಾದಿನ ಸಮ್ಮೇಳನದ ಸಂಚಿಕೆಯಲ್ಲಿ ಸಾವಯವ ಕೃಷಿಕರಿಗೆ ಹೆಚ್ಚು ಮಾಹಿತಿಯನ್ನು ಒದಗಿಸಲು ಪ್ರಯತ್ನಿಸಲಾಗಿದೆ. ತಮಿಳುನಾಡು ಹಾಗೂ ಕರ್ನಾಟಕದ ಗಡಿಯಲ್ಲಿ ಇರುವ ಗ್ರೀನ್ ಫೌಂಡೇಶನ್ ಸಂಸ್ಥೆಯ ಪರಿಚಯ ಹಾಗೂ ಆ ಸಂಸ್ಥೆ ಸಂಗ್ರಹಿಸಿರುವ ನಾಟಿ ತಳಿಗಳ ಮಾಹಿತಿ ರೈತರಿಗೆ ಅನುಕೂಲಕರವಾಗಲಿದೆ. ಸಾವಯವ ಕೃಷಿಯಲ್ಲಿ ಭತ್ತ ಬೆಳೆಯುವ ಇಚ್ಛೆಯಿಂದ ಅಲ್ಲಿಂದ ನಾಟಿ ಭತ್ತದ ತಳಿ ಬೀಜ ತರಿಸಿಕೊಂಡೆ. ಆದರೆ ಮಳೆಯಿಲ್ಲದೆ ಆ ತಳಿಗಳನ್ನು ಬೆಳೆಯುವುದು ಅಸಾಧ್ಯವಾಗುತ್ತಿದೆ. ನಾಟಿ ತಳಿ ಭತ್ತದ ವಿಷಯದಲ್ಲಿ ಧಾರವಾಡ ಜಿಲ್ಲೆಯ ಮುಗದಡಲ್ಲಿನ ಕೃಷಿ ಸಂಶೋಧನ ಕೇಂದ್ರಕ್ಕೆ ಸಂಪರ್ಕಿಸಲಾಗಿದೆ. ಅಲ್ಲಿ ಈಗ ತಾನೆ ಜವಾರಿ ನಾಟಿ ಭತ್ತದ ತಳಿ ಸಂಗ್ರಹ ಮಾಡುವ ಪ್ರಯತ್ನ ನಡೆದಿದೆ ಎಂದು ಭತ್ತದ ಸಂಶೋಧಕರಾದ ಡಾ ಹೆಚ್.ಡಿ. ಮೋಹನ ಕುಮಾರ ತಿಳಿಸಿದ್ದಾರೆ. ತಾವು ಒಮ್ಮೆ ಅವರೊಂದಿಗೆ ಸಂಪರ್ಕಿಸಿದರೆ ಉತ್ತರ ಕರ್ನಾಟಕಕ್ಕೆ ಹೊಂದುವ ನಾಟಿ ಮಾಡುವುದಕ್ಕೆ ಅಲ್ಲದೆ ಒಣ ಭೂಮಿಗೆ ತಳಿ ಮಾಹಿತಿ ದೊರೆಯಬಹುದು.

ನಮ್ಮ ಊರಿನಲ್ಲಿ ಇತ್ತೀಚೆಗೆ ಬಿತ್ತುವುದು ಕಡಿಮೆಯಾಗಿರುವ ನವಣೆಯ ಒಂದು ತಳಿ ಇದೆ. 'ಬೂದರ ನವಣೆ' ಅಥವಾ 'ಬಾದರ ನವಣೆ' ಎಂದು ಕರೆಯುತ್ತಾರೆ. ಇದರದು ಬಿಳಿ ಅಕ್ಕಿಯಿರುತ್ತದೆ. ನಮ್ಮ ತಾಯಿಯವರು ಶಹಪುರ ತಾಲೂಕಿನ ಒಂದು ಹಳ್ಳಿಯಿಂದ ಕೆಂಪು ನವಣೆ ತಂದಿದ್ದಾರೆ. ಅದನ್ನು ನಾನು ಬಿತ್ತಿಸಲಿದ್ದೇನೆ. ಇವೆರಡು ನಾನು ಪ್ರತಿ ವರುಷ ಬೆಳೆದುಕೊಂಡು ಹೋಗಲಿದ್ದೇನೆ.

ಚನ್ನ ಬಸವರೆಡ್ಡಿ, ಹೆಂಬರಾಳ, ರಾಯಚೂರು

(ಹಿತ್ತಲಗಿಡದೊಡನೆ ತಮ್ಮ ಅನುಭವವನ್ನು ಹಂಚಿಕೊಂಡಿರುವುದಕ್ಕೆ ವಂದನೆಗಳು. ಡಾ. ಹೆಚ್. ಡಿ. ಮೋಹನ್‌ರವರೊಡನೆ ಸಂಪರ್ಕಿಸುವೆವು. ಸಂಪಾದಕ.)

ನಮ್ಮ ಹಿತ್ತಲಗಿಡದಲ್ಲಿಯೇ ನಮ್ಮ ಸುತ್ತ ಮುತ್ತ ಬಹುದಿನಗಳಿಂದ ಬೆಳೆಸುತ್ತಾ ಬಂದಿರುವ ಅನುಭವಗಳನ್ನೇ ನಮ್ಮ ಏಳಿಗೆಗಾಗಿ ಉಪಯೋಗಿಸುವುದು ಒಳ್ಳೆಯದು ಮತ್ತು ಅದು ಸಂಪೂರ್ಣವಾಗಿ ವೈಜ್ಞಾನಿಕ ಬೆಳವಣಿಗೆಯಿಂದ ಬಂದ ಅನುಭವವೆಂದೂ ಮತ್ತು ಅವುಗಳ ಬಳಕೆಯು ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿದೆಯೆಂದು ಹಿತ್ತಲಗಿಡ ಸಂಚಿಕೆಯನ್ನು ಓದುವುದರಿಂದ ಅದು ಸತ್ಯವೆಂದು ತೋರುತ್ತದೆ. ಆದಕಾರಣ ಹಿತ್ತಲಗಿಡ ಸಂಚಿಕೆಯನ್ನು ಓದಿ ಮನುಕುಲದ ಬದುಕನ್ನು ಹಸನಾಗಿಸುವದನ್ನು ಮರೆಯಬೇಡಿ ಎಂದು ಹೇಳ ಬಯಸುತ್ತೇನೆ.

ಎ.ಎನ್. ಚನ್ನಪ್ಪ, ಗೌಡರ್, ರಾಯಚೂರು.

ಅರಳಿಕಟ್ಟೆ

ಅಂತರ ರಾಷ್ಟ್ರೀಯ ನಾಟೀ ಪಶುವೈದ್ಯಕೀಯ (Ethno Veterinary) ಔಷಧಿ ಬಗೆಗಿನ ಸಮ್ಮೇಳನ,

4-6, ನವೆಂಬರ್ 1997, ಪುಣೆ

ನಾಟಿ ಪಶುವೈದ್ಯಕೀಯ ಪದ್ಧತಿಗಳು, ಅವುಗಳನ್ನು ನಿಖರಗೊಳಿಸುವ ದಾರಿಗಳು, ಅವುಗಳು ಪರಿಸರ ಮತ್ತು ಜೀವಿ ವಿವಿಧತೆಗಳ ರಕ್ಷಣೆ ದೃಷ್ಟಿಯಿಂದ ಹೇಗೆ ಪ್ರಮುಖವಾಗಿವೆ, ಮತ್ತು ಅವುಗಳ ಭವಿಷ್ಯ, ಇವೇ ಮೊದಲಾದ ವಿಚಾರಗಳ ಮೇಲೆ ಈ ಸಮ್ಮೇಳನ ಗಮನ ಹರಿಸುವುದು. ಆಸಕ್ತರು :

Dr. D.V. Rangnekar, BAIF Development & Research Foundation, POB 2030, Mafatlal Industries Compound, Asarwa, Ahmedabad - 380016. ಇವರನ್ನು ಸಂಪರ್ಕಿಸಬಹುದು.

---

3 rd IFOAM - Asia Scientific Conference & General Assembly, "Food Security in Hormoney with nature."

1-4, ಡಿಸೆಂಬರ್ 1997,
ಕೃಷಿ ವಿ.ವಿ.ನಿಲಯ, ಬೆಂಗಳೂರು.

ಪರಿಸರದೊಡನೆ ಸಾಮರಸ್ಯ ಕಾಯ್ದುಕೊಂಡು ಆಹಾರದ ಭದ್ರತೆ ಈಡೇರಿಸಿಕೊಳ್ಳುವ ಬಗೆಗಿನ ಈ ಸಮ್ಮೇಳನದಲ್ಲಿ ಮಣ್ಣಿನ ಆರೋಗ್ಯ ಜೀವ ವಿವಿಧತೆ, ಪರಿಸರ ಗುಣಮಟ್ಟ, ಸುಸ್ಥಿರ ಬದುಕಿನ ರೀತಿ, ದೇಶೀಯ ಜ್ಞಾನ ವ್ಯವಸ್ಥೆ, ಗ್ರಾಹಕರ ವಿಶ್ವಾಸ, ಕಾಯ್ದೆ ಮತ್ತು ಕಾನೂನಿನ ನೆರವು ಇವೇ ಮೊದಲಾದ ವಿಚಾರಗಳ ಮೇಲೆ ಗೋಷ್ಠಿ ಏರ್ಪಡಿಸಲಾಗಿದೆ. ಆಸಕ್ತರು :

Dr. A.V. Daniel, IFOAM - Asia IIRD - PB No. 562, Kanchan Nagar Nakshatra Wadi, Aurangabad,

ಇವರನ್ನು ಸಂಪರ್ಕಿಸಬಹುದು.

ತೆರದ ಅಂಚೆ

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	40 ರೂ	400 ರೂ
ರೈತರು	50 ರೂ	500 ರೂ
ಇತರರು	60 ರೂ	600 ರೂ
ಸಂಸ್ಥೆಗಳು	350 ರೂ	2500 ರೂ
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ. : ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್ / ಚೆಕ್ ಮೂಲಕ ***"ಸಂಪಾದಕರು, ಹಿತ್ತಲಗಿಡ, ಬೆಂಗಳೂರು"*** ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡು ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಇದನ್ನು ಸ್ಪಷ್ಟವಾಗಿ ತಿಳಿಸ ತಕ್ಕದ್ದು.

ವಿಳಾಸ
ಡಾ. ಟಿ.ಎನ್.ಪ್ರಕಾಶ್ ಕಮ್ಮರಡಿ, ಸಹಾಯಕ ಪ್ರಾಧ್ಯಾಪಕ
ಗೌರವ ಸಂಪಾದಕ ಹಿತ್ತಲಗಿಡ
ಕೃಷಿ ಅರ್ಥಶಾಸ್ತ್ರ ವಿಭಾಗ,
ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ
ಬೆಂಗಳೂರು - 560 024.

ಗೆ ________________

____

____

____

Printed by Sri S. Sridhar, Published by Smt. K. Meenakshi (Owner), printed at Navbharath Enterprises, No. 10, Sirur Park B Street, Seshadripuram, Bangalore - 560 020 and Published at No. 399, 14 - B Cross, New Town Yelhanka, Bangalore - 560 064. Edited by Dr. T.N. Prakash